ಓದು, ಬರಹ ಬಲ್ಲವರ ಮಾಸಪತ್ರಿಕೆ

ಕಾವೇರಿ ಸಂಚಿಕೆ

೮

ಏಪ್ರಿಲ್ ೨೦೦೭

ಸಂಪಾದಕ

ಪುಸ್ತಕಮನೆ ಹರಿಹರಪ್ರಿಯ

ಹೊಸ ಹರಿಪ್ರಿಯ? (masthead)
ಸಂಚಿಕೆ : ೮ | ಓದು, ಬರಹ ಬಲ್ಲವರ ಮಾಸಪತ್ರಿಕೆ | ಏಪ್ರಿಲ್ ೨೦೦೭

ಒಳಪುಟಗಳಲ್ಲಿ....

ಬಿಡಿಪ್ರತಿ : ೧೫/- ರೂ. | ಖಾಸಗಿ ಪ್ರಸಾರಕ್ಕಾಗಿ ಮಾತ್ರ | ವಾರ್ಷಿಕ ಚಂದಾ : ೧೫೦/- ರೂ.

ಚಂದಾದಾರರ ಹಾಗೂ ಜಾಹೀರಾತುದಾರರ ಗಮನಕ್ಕೆ

ಬೆಂಗಳೂರಿನ ಹೊರಗಿನವರು ಹಣವನ್ನು ಎಂ.ಓ./ಡಿ.ಡಿ.ಗಳಲ್ಲಿ ಮಾತ್ರ **ಪುಸ್ತಕಮನೆ** ಹೆಸರಿಗೆ ಕಳಿಸಿಕೊಡಬೇಕಾಗಿ ವಿನಂತಿ.

ಪ್ರಕಾಶನ

ಪುಸ್ತಕಮನೆ

೭೦೨, ಬಿ.ಸಿ.ಸಿ.ಹೆಚ್.ಎಸ್. ಲೇಔಟ್, ವಾಜರಹಳ್ಳಿ, ತಲಘಟ್ಟಪುರ, ಬೆಂಗಳೂರು ೫೬೦೦೬೨
ಮೊಬೈಲ್ : ೯೮೪೫೮೬೭೧೮೪ / ೯೨೪೨೨೧೫೦೬
e-mail : hariharapriya@gmail.com pustakamane@yahoo.com

ಮುದ್ರಣ

ಇಳಾ ಮುದ್ರಣ, ನಂ. ೩೬, ೪೦ ಅಡಿ ರಸ್ತೆ, ರಾಘವನಗರ, ನ್ಯೂಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು ೫೬೦ ೦೨೬. ದೂರವಾಣಿ : ೩೨೭೧೫೭೭೩ / ೨೬೭೫೭೧೫೯

೧

ಕಾವೇರಿ ಆಸ್ತಿಯಲ್ಲ ಪ್ರಕೃತಿದತ್ತ ನದಿ

ಸೂರ್ಯಸತ್ಯ

ಆಸ್ತಿಗಾಗಿ ಅಥವಾ ತಮ್ಮ ತಮ್ಮ ಅಸ್ತಿತ್ವಕ್ಕಾಗಿ ಮಕ್ಕಳು ಹೆತ್ತವರ ಮೇಲೆಯೇ ತಿರುಗಿ ಬೀಳುವಂತೆ ಕಾವೇರಿ ಸ್ಥಿತಿಯಾಗಿದೆಯೋ ಅನ್ನಿಸುತ್ತಿದೆ.

ವಿಜಯನಗರದ ಆಡಳಿತದವರೆಗೆ ಕಾವೇರಿ ಹಾಗೂ ಅಲ್ಲಿನ ಪ್ರದೇಶ ಕನ್ನಡಿಗರಿಗೇ ಸೇರಿತ್ತು, ನಿಜ. ಆಗ ಸಮಾಜ ಎಷ್ಟರಮಟ್ಟಿಗೆ ಯಾವ ಯಾವ ರೀತಿಗಳಲ್ಲಿ "ಬಳಸಿ"ಕೊಳ್ಳುತ್ತಿತ್ತು ಎಂಬ ಸ್ಪಷ್ಟ ಚಿತ್ರಣವಿಲ್ಲ. ಕ್ರಮೇಣ ಬ್ರಿಟಿಷರ ಆಡಳಿತದ ಹೊತ್ತಿಗೆ ವ್ಯವಸಾಯದ ಚಟುವಟಿಕೆ ವೃದ್ಧಿಗೊಂಡು ಆ ಮೂಲಕ ಉತ್ಪತ್ತಿದಶೆ ಪ್ರಾರಂಭವಾಯಿತು. ಜನಸಂಖ್ಯೆಯ ಹೆಚ್ಚಳ, ಜನರ ದುರಾಸೆ, ತಂತ್ರಜ್ಞಾನದ ಪರಿಣಾಮ ನದಿ ಅಸ್ತಿತ್ವಕ್ಕೆ ಧಕ್ಕೆಯುಂಟಾಗುವಂತೇ ಆಯಿತು. ಪ್ರಕೃತಿಯನ್ನು ಸಂಸ್ಕೃತೀಕರಿಸುವ ದುರಾಲೋಚನೆಯಲ್ಲಿ ವಿಕೃತಿಗೆ ಗುರಿಯಾಗುವುದಾಯಿತು.

ಹೀಗೆ ಪ್ರಕೃತಿದತ್ತ ನದಿ, ಜನರ ಜೀವ ನದಿ, ವ್ಯವಸಾಯದ ಉತ್ಪತ್ತಿ ನದಿ, ರಾಜಕೀಯ ನದಿ: ಎರಡು ರಾಜ್ಯಗಳ, ಜನಾಂಗದ, ಭಾಷೆಯ, ಸಂಸ್ಕೃತಿಯ–ಎಲ್ಲ ಮಾನವೀಯ ನೆಲೆ, ಸಂಬಂಧಗಳಿಗೂ ಮಾರಕವಾಗಿ ಕಣ್ಣೀರು, ರಕ್ತ ಸುರಿಸುವ, ಹರಿಸುವ ನದಿಯಾಗುವಂತಾಗಿದೆ.

ಇದೆಲ್ಲ ನೋಡಿದಾಗ : ಚರಿತ್ರೆಗೂ ಹಿಂದಿನಿಂದ ಸಮಕಾಲೀನ ಬದುಕಿನವರೆಗೂ ಕಾಲಿಟ್ಟ ನದಿಯನ್ನು ಯಾರೆಷ್ಟು ಹಂಚಿಕೊಳ್ಳುವುದು ಎನ್ನುವುದರೊಂದಿಗೆ ನದಿನದಿಯಾಗಿಯೇ ಹರಿದಾಗ, ಬದುಕು ಎಷ್ಟು ನೆಮ್ಮದಿ ಕಾಣಲು ಸಾಧ್ಯ ಎಂಬ ಭಾವನೆ ಬಂದುಬಿಡುತ್ತದೆ. ವ್ಯವಸಾಯ–ಉತ್ಪತ್ತಿ ಒಂದೇ ಬದುಕಿನ ಪರಮ (ಚರಮ) ಗುರಿ ಎಂದಾಗ, ನದಿ ತನ್ನತನವನ್ನೂ ಮಾರ್ಪಡಿಸಿಕೊಳ್ಳುವ ಸ್ಥಿತಿ ಮುಂದೆ ಯಾವ ರೂಪದಲ್ಲಿಯೋ ಎಂಬ ಭೀಕರ ಆಲೋಚನೆ ಕೂಡ ಕಣ್ಣಮುಂದೆ ಸುಳಿಯುತ್ತಿದೆ.

ಅನುಭವದಿಂದಲೇ ಸಮಾಜಕ್ಕೆ, ವ್ಯಕ್ತಿಗೆ ಪಾಠ ಕಲಿಯಬೇಕು ಎನ್ನುವುದಾದರೆ, ಆಗುವುದೆಲ್ಲ ಆಗೇ ಬಿಡಲಿ ಎನ್ನುವಂತೆ, ಅದರಿಂದ ಒಳಿತಾಗಲಿ, ಕಲ್ಯಾಣವಾಗಲಿ ಎಂದಷ್ಟೇ ಆಶಿಸಬೇಕಾಗಿದೆ. ಮೊಲೆ, ಕೆಚ್ಚಲನ್ನು ಹಾಲಿಗಾಗಿ ಮಾತ್ರ, ರಕ್ತಕ್ಕಾಗಿ ಹೀರಬಾರದು. ನದಿಯನ್ನು ಒಂದು ಯೋಜಿತ ಕೃಷಿಗಾಗಿ, ಪರಸ್ಪರ ಚರ್ಚೆಯಿಂದ ಬಗೆಹರಿಸಿಕೊಳ್ಳಬೇಕೇ ಹೊರತು, ಥಕ್ಕೆಂದು ಸಮಸ್ಯೆ ಹುಟ್ಟು ಹಾಕುವುದು, ಯಾವ ಕಾಲಕ್ಕೂ ಯಾರಿಂದಲೂ ಯಾವ ರೀತಿಯಿಂದಲೂ ಪರಿಹಾರ ಕಾಣದಾಗಿ ಬಿಡುತ್ತದೆ. ಹೊಣೆ ಹೊತ್ತವರು ಈ ಸಂದರ್ಭದಲ್ಲಿ ಜವಾಬ್ದಾರಿಯಿಂದ ನಡೆದರೆ ಮಾತ್ರ ಒಳಿತು, ಕಲ್ಯಾಣ.

ಕಾವೇರಿ ಸಂಚಿಕೆ ರೂಪುಗೊಂಡ ಹಿನ್ನೆಲೆ ಇದಾಗಿದೆ. ಇದರಿಂದ ಸಾಮಾನ್ಯರಿಗೆ ಎಷ್ಟು ಉಪಯೋಗವೊ, ಅಸಾಮಾನ್ಯರಿಗೂ ಅಷ್ಟೇ ಉಪಯೋಗ ಅನ್ನಿಸಿದರೂ; ಪತ್ರಿಕೆಯೊಂದು ತನ್ನ ಕರ್ತವ್ಯ ಹಾಗೂ ಸಂತೋಷದಿಂದ ಈ ಕೆಲಸ ಮಾಡಿದೆ, ಒಪ್ಪಿಸುತ್ತಿದೆ. ಅದಕ್ಕಾಗಿ ನೆರವಾದವರಿಗೆ, ಕೊಂಡು ಓದುವ ನಿಮ್ಮ ಬುದ್ಧಿ ಭಾವನೆಗಳಿಗೂ ಪ್ರೇರಕವಾಗುವುದಾದರೆ ಆ ಮಟ್ಟಿಗೆ ಸಾರ್ಥಕ ಭಾವ. □

ನೀರಿಗಾಗಿ ಶತಮಾನದ ತೀರದ ಬವಣೆ

ಕಾವೇರಿ ಕಣಿವೆ ಪ್ರದೇಶದ ಒಟ್ಟು ನೀರಿನ ಲಭ್ಯತೆಯಲ್ಲಿ ರಾಜ್ಯವಾರು ಕೊಡುಗೆ

ಈವರೆಗೆ ನದಿನೀರಿಗೆ ಸಂಬಂಧಿಸಿದಂತೆ ಲಭ್ಯವಿರುವ ವಿವರಗಳನ್ನು ಪರಿಶೀಲಿಸಿದರೆ ತಿರುಚಿರಾಪಳ್ಳಿ ಬಳಿ ಕಾವೇರಿ ಕವಲೊಡೆದಾಗಿನ ಒಂದು ಭಾಗ ಕೊಲೆರೂನ್ ಕೆಳದಂಡೆ ಅಣೆಕಟ್ಟೆಯವರೆಗೆ ಇರುವ ಕಾವೇರಿ ಕಣಿವೆ ಪ್ರದೇಶಗಳಲ್ಲಿ ಸಂಗ್ರಹವಾಗುವ ಸರಾಸರಿ ನೀರು ೭೯೦ ಟಿ.ಎಂ.ಸಿ. ಎಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಕರ್ನಾಟಕ ಪ್ರದೇಶದ ಕಾಣಿಕೆ ಶೇ. ೫೩.೮ (೪೨೫ ಟಿ.ಎಂ.ಸಿ.) ತಮಿಳುನಾಡಿನ ಕಾಣಿಕೆ ಶೇ. ೩೧.೯ (೨೫೨ ಟಿ.ಎಂ.ಸಿ.) ಕೇರಳ ರಾಜ್ಯದ ಕಾಣಿಕೆ ಶೇ. ೧೪.೩ (೧೧೩ ಟಿ.ಎಂ.ಸಿ.) ಈ ಅಂಕಿ ಅಂಶಗಳ ಪ್ರಕಾರ ಕರ್ನಾಟಕದಲ್ಲಿನ ಕಾವೇರಿ ಜಲಾನಯನ ಪ್ರದೇಶಗಳಿಂದಲೇ ಅತಿಹೆಚ್ಚಿನ ಅಂದರೆ ಶೇ. ೫೩.೮ರಷ್ಟು ನೀರು ಸಂಗ್ರಹವಾಗುವುದು ಸ್ಪಷ್ಟ.

ತಮಿಳುನಾಡಿನ ಲಭ್ಯವಿರುವ ಜಲಸಂಪನ್ಮೂಲಗಳು

ಕರ್ನಾಟಕದ ಜಲಾಶಯಗಳಿಂದ ಬಿಡುಗಡೆಯಾಗುವ ನೀರು ಹಾಗೂ ಮೆಟ್ಟೂರು ಅಣೆಕಟ್ಟೆಯ ಮೇಲ್ ಪ್ರಾಂತದಿಂದ ಹರಿದು ಬರುವ ನೀರಿನ ಜೊತೆಗೆ, ತಮಿಳುನಾಡಿಗೆ ಕೊಲೆರೂನ್ ನದಿಯ ಕೆಳ ಅಣೆಕಟ್ಟೆಯವರೆಗಿನ ತನ್ನದೇ ಆದ ಜಲಾನಯನ ಪ್ರದೇಶಗಳಿಂದ ೨೫೨ ಟಿ.ಎಂ.ಸಿ. ನೀರು ಹರಿದುಬರುತ್ತದೆ. ಕೊಲೆರೂನ್ ಅಣೆಕಟ್ಟಿನ ದಕ್ಷಿಣ ಭಾಗದಲ್ಲಿನ ನದಿ ಮುಖಜ ಭೂಮಿಯಲ್ಲಿ ೧೨೯ ಟಿ.ಎಂ.ಸಿ. ಅಂತರ್ಜಲ ದೊರೆಯುತ್ತದೆಂದು ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ ವರದಿಯಲ್ಲಿ ಅಂದಾಜು ಮಾಡಿದೆ. ಕೊಲೆರೂನ್ನಿಂದ ಉತ್ತರಕ್ಕಿರುವ ನದಿ ಮುಖಜ ಭೂಮಿಯಲ್ಲಿ ೨೧ ಟಿ.ಎಂ.ಸಿ. ಅಂತರ್ಜಲ ದೊರೆಯುತ್ತದೆ ಎಂದು ಅಂದಾಜು ಮಾಡಲಾಗಿದೆ. ಈ ಮೇಲಿನ ಮೂಲಗಳಲ್ಲದೆ, ತಮಿಳುನಾಡಿನ ನದಿ ಮುಖಜ ಭೂಮಿಯ ಮೇಲೆ ಸುಮಾರು ೩೨೮ ಟಿ.ಎಂ.ಸಿ.ಯಷ್ಟು ಮಳೆ ಬೀಳುತ್ತದೆ. ಈ ಮಳೆ ನೀರನ್ನು ಆಧುನಿಕ ಕೃಷಿ ವಿಧಾನಗಳ ಅಳವಡಿಕೆ ಹಾಗೂ ಅಂತರ್ಜಲದ ಸೂಕ್ತ ಬಳಕೆಯಿಂದ ಸಮರ್ಥವಾಗಿ ಬಳಸಿಕೊಳ್ಳಬಹುದು. ಕಣಿವೆಯ ಮೇಲು ರಾಜ್ಯವಾದ ಕರ್ನಾಟಕ ನೈರುತ್ಯ ಮುಂಗಾರು ಮಳೆಯನ್ನು ಅವಲಂಬಿಸಿದ್ದರೆ, ತಮಿಳುನಾಡು ಈಶಾನ್ಯ ಮುಂಗಾರು ಮಳೆಯ ಏಕೈಕ ಫಲಾನುಭವಿ. ಆದುದರಿಂದ ಕಾವೇರಿ ಕಣಿವೆಯ ಮೇಲ್ಗಡೆ ಇರುವ ಕರ್ನಾಟಕಕ್ಕಿಂತಲೂ ತಮಿಳುನಾಡು ಹೆಚ್ಚಿನ ಜಲಸಂಪನ್ಮೂಲವನ್ನು ಪಡೆದಿದೆ.

ಕಾವೇರಿ ಕಣಿವೆಯಲ್ಲಿನ ಬರಪೀಡಿತ ಪ್ರದೇಶಗಳು:

೧೯೭೨ರ ನೀರಾವರಿ ಆಯೋಗದ ವರದಿಯು ಕಾವೇರಿ ಕಣಿವೆಯ ಪ್ರದೇಶಗಳಲ್ಲಿನ ಬರಪೀಡಿತ ಪ್ರದೇಶಗಳನ್ನು ಗುರುತಿಸಿದೆ. ಈ ವರದಿಯು ಕರ್ನಾಟಕದ ಕಾವೇರಿ ಕಣಿವೆಯ ಪ್ರದೇಶದಲ್ಲಿನ ಇಪ್ಪತ್ತೆಂಟು ತಾಲುಕುಗಳ ೨೧,೮೭೦ ಚದುರ ಕಿ.ಮೀ. ಪ್ರದೇಶವು ಬರಪೀಡಿತ ಪ್ರದೇಶವೆಂದು ಉಲ್ಲೇಖಿಸಿದೆ. ಅಂದರೆ ಇದು ಕಾವೇರಿ ಕಣಿವೆಯ ಪ್ರದೇಶದಲ್ಲಿ ಶೇ. ೬೩.೮ ಭಾಗ. ಇದೇ ಆಯೋಗವು ತಮಿಳುನಾಡಿನ ಕಾವೇರಿ ಕಣಿವೆಯ ಪ್ರದೇಶದಲ್ಲಿ ಬರುವ ಹದಿನಾಲ್ಕು ತಾಲೂಕುಗಳ ೧೨,೭೯೦ ಚದರ ಕಿ.ಮೀ. ಭಾಗವನ್ನು ಬರಪೀಡಿತ ಎಂದು ಗುರುತಿಸಿದೆ. ಆದುದರಿಂದ ತಮಿಳುನಾಡಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಆ ರಾಜ್ಯದ ಎರಡರಷ್ಟು ಬರಪೀಡಿತ ಪ್ರದೇಶಗಳು ಇವೆ. ಬರಪೀಡಿತ ಪ್ರದೇಶದ ಜನರನ್ನು ಸಂಕಷ್ಟದಿಂದ ಪಾರುಮಾಡಲು ಅಗತ್ಯವಾದ ಎಲ್ಲಾ ನೀರಾವರಿ ಸೌಲಭ್ಯವನ್ನು ಒದಗಿಸುವುದು ಯಾವುದೇ ರಾಜ್ಯದ ಮೂಲಭೂತ ಕರ್ತವ್ಯ.

ತಮಿಳುನಾಡು ಪೋಲು ಮಾಡುತ್ತಿರುವ ನೀರು

ಪುರಾತನ ಕಾಲದ ನೀರಾವರಿ ಪದ್ಧತಿಗಳನ್ನು ಅನುಸರಿಸುತ್ತಾ ತಮಿಳುನಾಡು ನದಿ ಮುಖಜ ಭೂಮಿಯಲ್ಲಿನ ಸಾಕಷ್ಟು ಪ್ರಮಾಣದ ನೀರನ್ನು ವ್ಯರ್ಥವಾಗಿ ಸಮುದ್ರ ಸೇರುವಂತೆ ಮಾಡುತ್ತಿದೆ. ಇದರಿಂದಾಗಿ ನೀರಿನ ಸದುಪಯೋಗದಿಂದ ಕರ್ನಾಟಕದ ರೈತರನ್ನು ವಂಚಿಸಿದಂತಾಗಿದೆ. ಕಾವೇರಿ ಸತ್ಯಶೋಧನಾ

ಸಮಿತಿ ಹಾಗೂ ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ ವರದಿ ನೀಡಿರುವ ಮಾಹಿತಿಯ ಪ್ರಕಾರ ತಮಿಳುನಾಡಿನಲ್ಲಿ ೩೪೦ ಟಿ.ಎಂ.ಸಿ. ನೀರು ವ್ಯರ್ಥವಾಗಿ ಸಮುದ್ರ ಸೇರುತ್ತಿದೆ. ಅದರ ವಿವರಗಳು ಇಂತಿವೆ :

೧)	ಕೊಲೆರೂನ್ ಕೆಳ ಅಣೆಕಟ್ಟಿನಿಂದ ಹರಿದು ಹೋಗುವ ಹೆಚ್ಚುವರಿ ನೀರು	೧೦೨ ಟಿ.ಎಂ.ಸಿ.
೨)	ಟೈಲ್ ಎಂಡ್ ರೆಗ್ಯುಲೇಟರ್‌ಗಳಿಂದ ಆಗುವ ಸೋರಿಕೆ	೮೮*
೩)	ನದಿ ಮುಖಜ ಭೂಮಿಯಲ್ಲಿ ಅಂತರ್ಜಲ	೧೫೦ ಟಿ.ಎಂ.ಸಿ.
	ಒಟ್ಟು	೩೪೦ ಟಿ.ಎಂ.ಸಿ.

(ಟಿಪ್ಪಣಿ: ನದಿ ಮುಖಜ ಭೂಮಿಯಲ್ಲಿನ ೩೬ ಪ್ರಧಾನ ಶಾಖೆಗಳಿದ್ದು ಆ ಪೈಕಿ ೨೮ ಟೈಲ್ ಎಂಡ್ ರೆಗ್ಯೂಲೇಟರ್‌ಗಳಲ್ಲಿ ಆಗುವ ಸೋರಿಕೆಯನ್ನು ಮಾತ್ರ ಅಳತೆ ಮಾಡಲಾಗಿದೆ. ಉಳಿದ ಅಳತೆ ಮಾಡದ ಶಾಖೆಗಳ ಸೋರಿಕೆಯನ್ನು ಸೇರಿಸಿದರೆ ಅದು ೧೧೭ ಟಿ.ಎಂ.ಸಿ.ಯಷ್ಟಾಗುತ್ತದೆ.)

ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ ವರದಿ ಹಾಗೂ ಕಾವೇರಿ ಸತ್ಯಶೋಧನಾ ಸಮಿತಿಯು (ಭಾರತ ಸರ್ಕಾರದಿಂದ ರಚಿತವಾದ) ನೀಡಿರುವ ವರದಿ, ಇವುಗಳಲ್ಲಿ ತಮಿಳುನಾಡು ಪೋಲು ಮಾಡುತ್ತಿರುವ ನೀರಿನ ಬಗ್ಗೆ ಸಾಕ್ಷ್ಯಾಧಾರಗಳಿವೆ. ಪೋಲಾಗುತ್ತಿರುವ ಈ ನೀರಿನ ಪ್ರಮಾಣವನ್ನು ತಗ್ಗಿಸಲು ತಜ್ಞ ಪ್ರಾಧಿಕಾರಿಗಳು ಅನೇಕ ಸಲಹೆಗಳನ್ನು ನೀಡಿವೆ. ಆದರೆ ಅವುಗಳನ್ನು ತಮಿಳುನಾಡು ಈಗಲೂ ಜಾರಿಮಾಡುತ್ತಿಲ್ಲ. ತಮಿಳುನಾಡು ಪೋಲು ಮಾಡುತ್ತಿರುವ ನೀರಿನ ಪ್ರಮಾಣ ಕಾವೇರಿ ಕಣಿವೆಯ ಮೇಲಿನ ರಾಜ್ಯವಾದ ಕರ್ನಾಟಕಕ್ಕೆ ಮಾರಕವಾಗಿದೆ.

ನೀರು ಪೋಲು ಮಾಡುವುದನ್ನು ಕಡಿಮೆ ಮಾಡಲು ಸೂಚಿಸಲಾದ ಕ್ರಮಗಳು:

ಅ) ನಾಲೆ ವ್ಯವಸ್ಥೆಯನ್ನು ಆಧುನಿಕಗೊಳಿಸುವುದು ಹಾಗೂ ವೈಜ್ಞಾನಿಕ ಜಲ ನಿರ್ವಹಣೆ

ಆ) ನದಿ ಮುಖಜ ಭೂಮಿಯಲ್ಲಿ ಮೇಲ್ಮೈ ನೀರು ಹಾಗೂ ಅಂತರ್ಜಲದ ಸೂಕ್ತ ಸಂಯುಕ್ತ ಬಳಕೆ

ಇ) ಕಾವೇರಿ ಹಾಗೂ ಅದರ ಉಪನದಿಗಳ ನದಿ ಮುಖದ ಭೂಮಿಯಲ್ಲಿನ ಕೊನೆಯ ಕವಲಿನವರಿಗೂ ಜಲಾಗಾರಗಳ ನಿರ್ಮಾಣ

ಈ) ಜಲಾಶಯಗಳ ಸಮಗ್ರ ನಿರ್ವಹಣೆ

ಉ) ಗರಿಷ್ಠ ಬೆಳೆ ವಿಧಾನದ ಆಧಾರದ ಮೇಲೆ ನೀರಾವರಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು

ತಮಿಳುನಾಡು ನದಿ ಮುಖಜ ಭೂಮಿಯಲ್ಲಿ ಬಳಸಿಕೊಳ್ಳಬಹುದಾದ ಅಂತರ್ಜಲ

ಕಾವೇರಿ ಕಣಿವೆಯ ಪೂರ್ಣ ಜಲಾನಯನ ಪ್ರದೇಶದಿಂದ ಹರಿಯುವ ನೀರು ಕಾವೇರಿ ಮುಖಜ ಭೂಮಿ ಮೂಲಕ ಅಂತಿಮವಾಗಿ ಬಂಗಾಳಕೊಲ್ಲಿಯನ್ನು ಸೇರುತ್ತದೆ. ಕರ್ನಾಟಕ ರಾಜ್ಯದ ಭೂಗರ್ಭ ಬಹು ಗಟ್ಟಿಯಾದ ಶಿಲಾ ಸ್ತರಗಳಿಂದ ರೂಪುಗೊಂಡಿದ್ದು, ಅದಕ್ಕೆ ಅಂತರ್ಜಲ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಕಡಿಮೆ ಇದೆ. ಆದರೆ ತಮಿಳುನಾಡಿನ ನದಿ ಮುಖಜ ಭೂಮಿಯ ಶಿಲಾಸ್ತರ ಅಂತರ್ಜಲ ಶೇಖರಣೆಗೆ ಅನುಕೂಲಕರವಾಗಿದೆ. ತಮಿಳುನಾಡು ಹಾಗೂ ಭಾರತ ಸರ್ಕಾರದ ಮನವಿಯ ಮೇರೆಗೆ ೧೯೭೯-೮೨ರ ಅವಧಿಯಲ್ಲಿ ಕೈಗೊಂಡ ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ ಅಧ್ಯಯನವು ಕಾವೇರಿ ನದಿ ಮುಖಜ ಭೂಮಿಯಲ್ಲಿ ವರ್ಷಂಪ್ರತಿ ಸರಾಸರಿ ೧೨೯ ಟಿ.ಎಂ.ಸಿ. ಅಂತರ್ಜಲವನ್ನು ಪಡೆಯಬಹುದೆಂದು ಅಂದಾಜು ಮಾಡಿದೆ. ಅಂತರ್ಜಲವನ್ನು ಪಂಪ್ ಮಾಡಿ ಬಳಸಿಕೊಳ್ಳುವುದರಿಂದ ಜಲಮಟ್ಟವು ಭೂಮೇಲ್ಮೈಯಿಂದ ೯-೧೦ ಮೀಟರ್ ಕೆಳಕ್ಕೆ ಇಳಿಯಬಹುದು. ಆದರೆ ಈ ಮಟ್ಟವು ಈಶಾನ್ಯ ಮುಂಗಾರು ಮುಗಿಯುವ ವೇಳೆಗೆ ಮಳೆ ನೀರು ಹಾಗೂ ನೀರಾವರಿಗಾಗಿ ಬಳಸಿದ ಮೇಲ್ಮೈ ನೀರು ಭೂಮಿಯಲ್ಲಿ ಹಿಂಗುವುದರಿಂದಾಗಿ ಮತ್ತೆ ಮೊದಲ ಮಟ್ಟಕ್ಕೇರುತ್ತದೆ ಎಂದೂ ಸಹ ಈ ಅಧ್ಯಯನದಿಂದ ತಿಳಿದು ಬಂದಿದೆ. ಇದಲ್ಲದೆ ಕೊಲೆರೂನ್ ಎತ್ತರ ಭಾಗದಲ್ಲಿ ಇನ್ನೂ ೨೧ ಟಿ.ಎಂ.ಸಿ. ನೀರು ಲಭ್ಯವಾಗುತ್ತದೆ. ಇದುವರೆಗೆ ಬಳಸಿಕೊಳ್ಳದಿದ್ದ ಈ ಜಲಮೂಲವನ್ನು ಸಮರ್ಥವಾಗಿ ಬಳಸಿಕೊಂಡಲ್ಲಿ ತಮಿಳುನಾಡು

ಪೋಲು ಮಾಡುತ್ತಿರುವ ಪ್ರಮಾಣವನ್ನು ಕಡಿಮೆ ಮಾಡುವುದಷ್ಟೇ ಅಲ್ಲದೆ ಮಳೆ ನೀರನ್ನು ಅಂತರ್ಜಲಾಶಯಗಳಲ್ಲಿ ಸಂಗ್ರಹಿಸಿಡುವ ಮೂಲಕ ಪ್ರತಿ ವರ್ಷ ಮಳೆ ನೀರಿನ ಪೂರ್ಣ ಪ್ರಮಾಣವನ್ನು ಬಳಸಿಕೊಳ್ಳಬಹುದು. ಹಾಗೆ ಉಳಿಸಿದ ನೀರು ಮೇಲ್ಭಾಗದ ರಾಜ್ಯಗಳ ರೈತರ ಸಹಾಯಕ್ಕೆ ಒದಗಿದಂತಾಗುತ್ತದೆ. ಆದರೆ ಇಂಥ ಯೋಜನೆಯ ಮೂಲಭೂತ ಸೌಲಭ್ಯ ಒದಗಿಸಲು ಅಪಾರ ಹಣ ಬೇಕಾಗುತ್ತದೆಂಬ ನೆಪದಿಂದ ತಮಿಳುನಾಡು ಈ ಜಲಸಂಪನ್ಮೂಲವನ್ನು ಬಳಸಿಕೊಳ್ಳಲು ತಯಾರಿಲ್ಲ. ಇದರಿಂದಾಗಿ ನದಿಯ ನೀರು ನಿರಂತರವಾಗಿ ವ್ಯರ್ಥಗೊಂಡು ಸಮುದ್ರ ಸೇರುತ್ತಿದ್ದು ಕರ್ನಾಟಕದ ರೈತರಿಗೆ ಸಾಕಷ್ಟು ನೀರು ದೊರೆಯದಂತಾಗಿದೆ.

ಕರ್ನಾಟಕ ರಾಜ್ಯದ ಕಾವೇರಿ ಕಣಿವೆಯಲ್ಲಿ ನೀರಾವರಿ ಅಭಿವೃದ್ಧಿ

ಬಹಳ ಹಿಂದಿನಿಂದಲೂ ಕರ್ನಾಟಕವು ಕೆರೆ ಮತ್ತು ಸಣ್ಣ ಅಣೆಕಟ್ಟುಗಳ ಮೂಲಕ ನೀರಾವರಿಯನ್ನು ಅಭಿವೃದ್ಧಿ ಪಡಿಸುತ್ತಾ ಬಂದಿದೆ. ದಿವಾನ್ ಪೂರ್ಣಯ್ಯನವರ ಕಾಲದಲ್ಲಿ (೧೮೦೦-೧೮೧೦) ಕೆರೆಗಳ ಹೂಳೆತ್ತಿಸಿ ಅಚ್ಚುಕಟ್ಟಾಗಿ ನೀರು ಬಳಸುವ ಕಾರ್ಯಕ್ಕೆ ಹೆಚ್ಚು ಗಮನ ನೀಡಲಾಯಿತು. ಬ್ರಿಟಿಷರ ಆಳ್ವಿಕೆಯಲ್ಲಿ ನೀರಾವರಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಗಮನಾರ್ಹ ಕೆಲಸಗಳಾವುವೂ ಆಗಲಿಲ್ಲ. ೧೮೭೨ರಲ್ಲಿ ಕೆರೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರತ್ಯೇಕ ನೀರಾವರಿ ಇಲಾಖೆ ರಚನೆಯಾಯಿತು. ನೀರಾವರಿ ಕೆರೆಗಳ ಸೂಕ್ತ ನಿರ್ವಹಣೆ ಉದ್ದೇಶದಿಂದ ಸಣ್ಣಕೆರೆಗಳ ಉಸ್ತುವಾರಿಯನ್ನು ೧೮೮೬ರಲ್ಲಿ ಕಂದಾಯ ಇಲಾಖೆಗೆ ಒಪ್ಪಿಸಲಾಯಿತು. ೧೯೧೧ರಲ್ಲಿ ಅಂದಿನ ಮೈಸೂರು ಸಂಸ್ಥಾನವು 'ಕೆರೆ ಪಂಚಾಯಿತಿ ನಿಬಂಧನೆ' ಯನ್ನು ಹೊರಡಿಸಿತು.

ಜಲಾಶಯ ನಿರ್ಮಾಣದಂಥ ಉನ್ನತ ತಂತ್ರಜ್ಞಾನ ಬಳಕೆಗೆ ಬಂದ ನಂತರ ಮೊದಲ ಜಲಾಶಯವಾದ ಕೃಷ್ಣರಾಜ ಸಾಗರದ ನಿರ್ಮಾಣದೊಂದಿಗೆ ಕರ್ನಾಟಕದಲ್ಲಿ ನೀರಾವರಿ ಚಟುವಟಿಕೆಗಳು ೧೯೧೧ರಲ್ಲಿ ಪ್ರಾರಂಭವಾದವು. ಇದರ ಶಿಲನ್ಯಾಸ ೧೯೧೧ರ ನವೆಂಬರ್ ತಿಂಗಳಿನಲ್ಲಿ ನೆರವೇರಿತು. ಆದರೆ ಮದ್ರಾಸ್ ಸರ್ಕಾರ ಎತ್ತಿದ ಆಕ್ಷೇಪಣೆಗಳಿಂದಾಗಿ ೧೯೨೪ರ ವರೆಗೆ ಇದರ ನಿರ್ಮಾಣ ಸ್ಥಗಿತವಾಗಿತ್ತು. ಈ ಯೋಜನೆಯ ಉದ್ದೇಶ ೪೪.೮ ಟಿ.ಎಂ.ಸಿ. ನೀರನ್ನು ಸಂಗ್ರಹಿಸಿ ೫೦,೬೦೭ ಹೆಕ್ಟೇರು ಭೂಮಿಗೆ ನೀರಾವರಿ ಒದಗಿಸುವುದು ಹಾಗೂ ಶಿವನಸಮುದ್ರಂ ಜಲವಿದ್ಯುತ್ ಕೇಂದ್ರಕ್ಕೆ ನೀರು ಸರಬರಾಜು ಮಾಡುವುದು.

ಹತ್ತೊಂಭತ್ತನೇ ಶತಮಾನದಲ್ಲಿ ಮಾಡಿಕೊಂಡ ಒಪ್ಪಂದಗಳ ಷರತ್ತುಗಳನ್ನು ಪೂರೈಸಬೇಕೆಂದು ಒತ್ತಾಯಿಸುತ್ತಾ ತಮಿಳುನಾಡು ಆಗಾಗ್ಗೆ ಅಡ್ಡಗಾಲು ಹಾಕುತ್ತಿದ್ದರಿಂದ, ಕರ್ನಾಟಕದಲ್ಲಿ ನೀರಾವರಿ ಕಾರ್ಯಕ್ರಮ ಕುಂಟುತ್ತಾ ಸಾಗಿತು. ಇದರ ಪರಿಣಾಮವಾಗಿ ೧೯೨೪ರಲ್ಲಿ ಕರ್ನಾಟಕದಲ್ಲಿದ್ದ ೩.೧೫ ಲಕ್ಷ ಎಕರೆಗಳ ನೀರಾವರಿ ಪ್ರದೇಶವು ೧೯೭೨ರ ವೇಳೆಗೆ ೬.೬ ಲಕ್ಷ ಎಕರೆಗಳಿಗೆ ಮಾತ್ರ ವಿಸ್ತಾರವಾಯಿತು. ಕರ್ನಾಟಕದ ಈ ನಿಧಾನಗತಿಯ ಪ್ರಗತಿಗೆ ವ್ಯತಿರಿಕ್ತವಾಗಿ ಕಾವೇರಿ ಕಣಿವೆ ಪ್ರದೇಶದಲ್ಲಿ ಶೇ. ೩೧.೯ರಷ್ಟು ನೀರನ್ನು ಮಾತ್ರ ಒದಗಿಸುವ ತಮಿಳುನಾಡು ೧೯೨೪ರಲ್ಲಿ ೧೪.೫ ಲಕ್ಷ ಎಕರೆ ಇದ್ದ ತನ್ನ ನೀರಾವರಿ ಭೂಮಿಯನ್ನು ೧೯೭೨ರ ವೇಳೆಗೆ ೨೨ ಲಕ್ಷ ಎಕರೆಗಳಿಗೆ ವಿಸ್ತರಿಸಿತು. ಇದರಿಂದಾಗಿ ಅದರ ಬೆಳೆ ಪ್ರದೇಶ ೨೮.೦೦ ಲಕ್ಷ ಎಕರೆಗಳಷ್ಟಾಗಿತ್ತು.

೧೯೭೪ರಲ್ಲಿ ಭಾರತ ಸರ್ಕಾರದ ಅಡಿಷನಲ್ ಕಾರ್ಯದರ್ಶಿ ಶ್ರೀ ಸಿ.ಸಿ. ಪಟೇಲ್ ಅವರು ನಡೆಸಿದ ಅಧ್ಯಯನದ ಪ್ರಕಾರ ೧೯೭೨ರ ವೇಳೆಗೆ ತಮಿಳುನಾಡು ೪೮೯ ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳುತ್ತಿದ್ದರೆ, ಕರ್ನಾಟಕವು ೧೭೭ ಟಿ.ಎಂ.ಸಿ. ನೀರನ್ನು ಮಾತ್ರ ಬಳಸಿಕೊಳ್ಳುತ್ತಿತ್ತು. ಈ ರೀತಿ ಕಾವೇರಿ ಕಣಿವೆಗೆ ಶೇ. ೫೦ಕ್ಕೂ ಹೆಚ್ಚು ನೀರನ್ನು ಸಲ್ಲಿಸುವ ಕರ್ನಾಟಕವು ೧೯೭೨ರಲ್ಲಿ ಕೇವಲ ಶೇ. ೨೦ರಷ್ಟು ನೀರನ್ನು ಮಾತ್ರ ಬಳಸಿಕೊಳ್ಳುತ್ತಿತ್ತು.

ಆದರೆ ತಮಿಳುನಾಡು, ಅಪಾರ ಪ್ರಮಾಣದ ನೀರನ್ನು ವ್ಯರ್ಥವಾಗಿ ಸಮುದ್ರ ಸೇರುವಂತೆ ಮಾಡಿ ಜೊತೆಗೆ ಅಂತರ್ಜಲವನ್ನೂ ಬಳಸಿಕೊಳ್ಳದೆ, ಕಣಿವೆಯಲ್ಲಿನ ಶೇ. ೭೦ರಷ್ಟು ನೀರನ್ನು ಬಳಸಿಕೊಳ್ಳುತ್ತಿತ್ತು. ತಮಿಳುನಾಡಿಗೆ ಈ ಪರಿಸ್ಥಿತಿ ಮುಂದುವರಿಯುವುದೇ ಉಚಿತವೆನಿಸಿದೆ.

೧೮೯೨ ಮತ್ತು ೧೯೨೪ರ ಆರೋಪಿತ ಒಪ್ಪಂದಗಳು

ಕರ್ನಾಟಕ ರಾಜ್ಯದಲ್ಲಿ ಉಂಟಾದ ನಿಧಾನಗತಿಯ ನೀರಾವರಿ ಅಭಿವೃದ್ಧಿಗೆ ಅಂದಿನ ಮೈಸೂರು ಸಂಸ್ಥಾನ ಮತ್ತು ಬ್ರಿಟಿಷ್ ಪ್ರೆಸಿಡೆನ್ಸಿ ಆಫ್ ಮದ್ರಾಸ್ ಆಡಳಿತಕ್ಕೊಳಪಟ್ಟಿದ್ದ ಮದರಾಸು ಇವುಗಳ ನಡುವೆ ಆಯಿತೆಂದು ಹೇಳಲಾದ ೧೮೯೨ ಮತ್ತು ೧೯೨೪ರ ಒಪ್ಪಂದಗಳೇ ನೇರ ಕಾರಣ.

೧೮೯೨ರ ಒಪ್ಪಂದವು ಕಾವೇರಿ ಮತ್ತು ಅದರ ಉಪನದಿಗಳನ್ನು ಕರ್ನಾಟಕವು (ಅಂದಿನ ಮೈಸೂರು) ನೀರಾವರಿಗೆ ಒಳಪಡಿಸಿಕೊಳ್ಳುವ ಬಗ್ಗೆ ಅನೇಕ ಕಟ್ಟುಪಾಡುಗಳನ್ನು ಹೇರಿತ್ತು. ಈ ಒಪ್ಪಂದದ ಪ್ರಕಾರ ಅಸ್ತಿತ್ವದಲ್ಲಿರುವ ನೀರಾವರಿ ವ್ಯವಸ್ಥೆಯ ದುರಸ್ತಿಯನ್ನೂ ಸೇರಿದಂತೆ ರಾಜ್ಯದ ಯಾವುದೇ ನೀರಾವರಿ ಯೋಜನೆಯನ್ನು ಎತ್ತಿಕೊಳ್ಳಬೇಕಾದರೂ ಪೂರ್ವಭಾವಿಯಾಗಿ ಅಂದಿನ ಮದರಾಸು ಪ್ರಾಂತದ ಅನುಮತಿ ಪಡೆಯಬೇಕಿತ್ತು. ಆದರೆ ಮದರಾಸು ಪ್ರಾಂತಕ್ಕೆ ಮಾತ್ರ ಕಾವೇರಿ ಕಣಿವೆ ಅಥವಾ ಇನ್ನಾವುದೇ ಕಣಿವೆ ಪ್ರದೇಶಕ್ಕೆ ಸಂಬಂಧಿಸಿದಂತೆ ಈ ಬಗೆಯ ಯಾವುದೇ ಕಟ್ಟುಪಾಡುಗಳಿರಲಿಲ್ಲ.

೧೯೨೪ರ ಒಪ್ಪಂದವು ೧೮೯೨ರ ಒಪ್ಪಂದದ ಮತ್ತೊಂದು ರೂಪ. ಇದು ಕೃಷ್ಣರಾಜಸಾಗರ ಜಲಾಶಯ ನಿರ್ಮಾಣ ಕಾರ್ಯ ಆರಂಭವಾದಾಗ ಮಾಡಿಕೊಂಡ ಒಪ್ಪಂದ. ಈ ಒಪ್ಪಂದವು ಅನೇಕ ಷರತ್ತುಗಳನ್ನು ಮೈಸೂರಿನ ಮೇಲೆ ಹೇರಿತು. ಈ ಒಪ್ಪಂದದ ಪ್ರಕಾರ ಕಾವೇರಿ ನದಿಯಲ್ಲಿ ಒಂದು ಕನಿಷ್ಠ ಮಟ್ಟಕ್ಕಿಂತ ಮೇಲ್ಪಟ್ಟು ನೀರಿನ ಪ್ರವಾಹವಿದ್ದರೆ ಮಾತ್ರ ಅಂದಿನ ಮೈಸೂರುರಾಜ್ಯ ಕೆ.ಆರ್. ಸಾಗರದಲ್ಲಿ ನೀರನ್ನು ಸಂಗ್ರಹಿಸಬಹುದು. ಇದರ ಜತೆಗೆ ೩,೦೧,೦೦೦ ಎಕರೆ ಭೂಮಿಗೆ ನೀರೊದಗಿಸುವ ೯೩.೫ ಟಿ.ಎಂ.ಸಿ. ಸಾಮರ್ಥ್ಯದ ಮೆಟ್ಟೂರು ಜಲಾಶಯವನ್ನು ನಿರ್ಮಿಸಲು ಮದ್ರಾಸಿಗೆ ಅನುವು ಮಾಡಿಕೊಡುವ, ನದಿ ಮುಖಜ ಭೂಮಿಯಲ್ಲಿ ಎರಡನೇ ಬೆಳೆಗೂ ನೀರನ್ನು ನಿರಂತರವಾಗಿ ಒದಗಿಸುವ ಹಾಗೂ ಕಾವೇರಿ ಮತ್ತು ಅದರ ಉಪನದಿಗಳಿಗೆ ಮದ್ರಾಸ್ ಪ್ರದೇಶದಲ್ಲಿ ಅಣೆಕಟ್ಟು ಕಟ್ಟುವ ಅವಕಾಶಗಳನ್ನು ಈ ಒಪ್ಪಂದ ನೀಡಿತು. ಆದರೆ ಈ ಒಪ್ಪಂದ ಅಂದಿನ ಮೈಸೂರು ರಾಜ್ಯದ ಮೇಲೆ ಅನೇಕ ನಿಬಂಧನೆಗಳನ್ನು ಹೇರಿತು. ೧,೨೫,೦೦೦ ಎಕರೆ ಪ್ರದೇಶಕ್ಕೆ ನೀರೊದಗಿಸುವ ೪೪.೮೩ ಟಿ.ಎಂ.ಸಿ. ಸಾಮರ್ಥ್ಯದ ಕೆ.ಆರ್. ಸಾಗರ ನಿರ್ಮಾಣಕ್ಕೆ ಅನುವು ಮಾಡಿಕೊಟ್ಟಿತು. ಅಲ್ಲದೆ ಮುಂದೆ ೧,೧೦,೦೦೦ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬೇಕಾದರೆ ಮತ್ತು ಕಾವೇರಿಯ ಉಪನದಿಗಳಿಗೆ ಮುಂದೆ ಅಣೆಕಟ್ಟು ಕಟ್ಟಬೇಕಾದರೆ ಮದ್ರಾಸ್ ಸರ್ಕಾರದ ಪೂರ್ವಭಾವಿ ಅನುಮತಿ ಕೋರಬೇಕು ಹಾಗೂ ಕಟ್ಟುವ ಇತರ ಜಲಾಶಯಗಳ ಸಂಪೂರ್ಣ ಸಾಮರ್ಥ್ಯ ೪೫ ಟಿ.ಎಂ.ಸಿ.ಯನ್ನು ಮೀರಬಾರದು ಹಾಗೂ ಈ ಸಂಗ್ರಹಣೆಯನ್ನು ಕಾವೇರಿ ನೀರಿನ ಪ್ರವಾಹ ಒಂದು ನಿರ್ದಿಷ್ಟ ಮಟ್ಟಕ್ಕಿಂತ ಜಾಸ್ತಿ ಇದ್ದರೆ ಮಾತ್ರ ಮಾಡಬೇಕೆಂಬ ಷರತ್ತನ್ನು ಹೇರಿತು. ಈ ಒಪ್ಪಂದದ ನಿಬಂಧನೆಗಳ ಪ್ರಕಾರ ಪ್ರತಿ ತಿಂಗಳಿಗೆ ನಿರ್ದಿಷ್ಟಪಡಿಸಿದ ಮಿತಿಗಿಂತ ನೀರಿನ ಹರಿವು ಹೆಚ್ಚಿದಲ್ಲಿ ಮಾತ್ರ ಕರ್ನಾಟಕವು ನೀರನ್ನು ಸಂಗ್ರಹಿಸಬೇಕಾಗಿತ್ತು.

ಈ ಒಪ್ಪಂದಗಳ ಹೇರಿಕೆ ಕರ್ನಾಟಕದ ಅಂದಿನ ಸಾಮಂತ ರಾಜರ ಮೇಲೆ ಸೇಡು ತೀರಿಸಿಕೊಳ್ಳಲು ಬ್ರಿಟಿಷ್ ಸರ್ಕಾರ ನಿಯೋಜಿಸಿದ ತಂತ್ರ ಎಂಬುದು ಸ್ಪಷ್ಟವಾಗುತ್ತದೆ. ಬ್ರಿಟಿಷ್ ಸರ್ಕಾರವು ಕರ್ನಾಟಕ ಸಂಸ್ಥಾನದ ಮೇಲೆ ಮೇಲಿನ ಒಪ್ಪಂದಗಳನ್ನು ಹೇರಿದ್ದರಿಂದ ಕಾವೇರಿ ನೀರಿನಲ್ಲಿ ನ್ಯಾಯೋಚಿತ ಪಾಲನ್ನು ಬಳಸಿಕೊಳ್ಳುವ ತಮ್ಮ ನ್ಯಾಯಬದ್ಧ ಹಕ್ಕಿನಿಂದ ಕರ್ನಾಟಕ ರೈತರನ್ನು ವಂಚಿಸಿದಂತಾಯಿತು. ಆದ್ದರಿಂದ ಸದರಿ ಒಪ್ಪಂದಗಳು ಮೊದಲಿನಿಂದಲೂ ಊರ್ಜಿತವಾದುದಾಗಿರಲಿಲ್ಲ ಮತ್ತು ೧೯೨೪ರ ಒಪ್ಪಂದ ೧೯೭೪ಕ್ಕೆ ಮುಗಿದಿರುವ ಕಾರಣ ಆ ತರುವಾಯ ಯಾವುದೇ ಸಂದರ್ಭದಲ್ಲೂ ಪಾಲಿಸುವಂಥಾದ್ದಾಗಿಲ್ಲ.

ಅಂದಿನ ಸಾಮಂತ ಸಂಸ್ಥಾನದ ರಾಜಕೀಯ ಮತ್ತು ಆರ್ಥಿಕ ದೌರ್ಬಲ್ಯಗಳನ್ನು ವಸಾಹತುಷಾಹಿ ಸರ್ಕಾರದ ಮೂಲಕ ಅಸ್ವಾಭಾವಿಕ ನಿಬಂಧನೆಗಳನ್ನು ಹೇರಿ ತಮಿಳುನಾಡು ಮೊದಲಿನಿಂದಲೂ ಹೆಚ್ಚು ನೀರನ್ನು ಬಳಸಿಕೊಳ್ಳುತ್ತಾ ಬಂದಿದೆ. ಇದರಿಂದಾಗಿ ೧೯೭೧ರ ವೇಳೆಗೆ ತಮಿಳುನಾಡಿನಲ್ಲಿ ಕರ್ನಾಟಕದ ನೀರಾವರಿ ಪ್ರದೇಶದ ನಾಲ್ಕರಷ್ಟು ಅಭಿವೃದ್ಧಿಯಾಗಿತ್ತು. ನೀರಾವರಿ ಅಭಿವೃದ್ಧಿಯಲ್ಲಿ ಕರ್ನಾಟಕಕ್ಕೆ ಆಗಿರುವ ಅನ್ಯಾಯವನ್ನು ಕೆಳಗಿನ ಕೋಷ್ಟಕದಲ್ಲಿರುವ ಅಂಕಿ-ಅಂಶಗಳು ಸ್ಪಷ್ಟಪಡಿಸುತ್ತದೆ:

ಕೋಷ್ಟಕ

ಕಾವೇರಿ ಕಣಿವೆ ಪ್ರದೇಶದ ವಿವಿಧ ರಾಜ್ಯಗಳಲ್ಲಿ ಅಭಿವೃದ್ಧಿಯಾಗಿರುವ ನೀರಾವರಿ ತುಲನಾತ್ಮಕ ಪಟ್ಟಿ

(ಸಾವಿರ ಹೆಕ್ಟೇರುಗಳಲ್ಲಿ ಆಯಕಟ್ಟು)

ವರ್ಷ	ರಾಜ್ಯದ ಹೆಸರು			
	ಕರ್ನಾಟಕ	ಕೇರಳ	ತಮಿಳುನಾಡು	ಪಾಂಡಿಚೇರಿ
೧೯೦೧	೧೨೪.೦	–	೫೭೭.೨	೧೧
೧೯೨೮	೧೨೬.೦	–	೫೭೮.೦	೧೧
೧೯೫೬	೧೯೭.೨	೧.೦	೭೭೬.೦	೧೧
೧೯೭೧	೨೭೩.೦	೨.೧	೮೮೪.೦	೧೧
೧೯೯೦	೪೫೩.೪	ಎನ್.ಎ.	೯೧೮.೦	೧೧

ಕರ್ನಾಟಕದ ಕಾವೇರಿ ಕಣಿವೆ ಪ್ರದೇಶದಲ್ಲಿನ ಪ್ರಮುಖ ನೀರಾವರಿ ಯೋಜನೆಗಳು

ಮೈಸೂರಿನ ಕನ್ನಂಬಾಡಿಯ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಮೊಟ್ಟಮೊದಲ ಬಾರಿ ಜಲಾಶಯವಾದ ಕೃಷ್ಣರಾಜಸಾಗರದ ನಿರ್ಮಾಣ ೧೯೩೧ರಲ್ಲಿ ಮುಕ್ತಾಯಗೊಂಡಿತ್ತು. ಈ ಜಲಾಶಯದಿಂದ ೬೧.೨ ಟಿ.ಎಂ.ಸಿ. ನೀರನ್ನು ಬಳಸಿಕೊಂಡು ೭೯.೩೦೦ ಹೆಕ್ಟೇರು ಪ್ರದೇಶಕ್ಕೆ ನೀರೊದಗಿಸಬಹುದು. ಕಾವೇರಿ ಕಣಿವೆಯಲ್ಲಿ ತನ್ನ ನ್ಯಾಯೋಚಿತ ಪಾಲಿನ ನೀರನ್ನು ಬಳಸಿಕೊಳ್ಳಲು ಕರ್ನಾಟಕವು ಕಬಿನಿ, ಹೇಮಾವತಿ, ಹಾರಂಗಿ ಮತ್ತು ಸುವರ್ಣಾವತಿ ಜಲಾಶಯ ಯೋಜನೆಗಳನ್ನು ಕೈಗೆತ್ತುಕೊಂಡಿತ್ತು. ಇವುಗಳ ಜೊತೆಗೆ ಕೆಲವು ಮಧ್ಯಮ ಹಾಗೂ ಸಣ್ಣ ನೀರಾವರಿ ಯೋಜನೆಗಳನ್ನು ಸಹ ಕೈಗೆತ್ತಿಕೊಂಡಿತ್ತು. ರಾಜ್ಯದ ಕಾವೇರಿ ಕಣಿವೆ ಪ್ರದೇಶದಲ್ಲಿ ಈಗ ಅಸ್ತಿತ್ವದಲ್ಲಿರುವ, ನಿರ್ಮಾಣದ ಹಂತದಲ್ಲಿರುವ ಹಾಗೂ ಪ್ರಸ್ತಾವಿತ ಯೋಜನೆಗಳು ಮತ್ತು ಅವುಗಳಿಗೆ ಮಾಡಿರುವ ವೆಚ್ಚವನ್ನು ವಿವರಣಾ ಪಟ್ಟಿ I ಮತ್ತು IIರಲ್ಲಿ ನೀಡಲಾಗಿದೆ. ಕಾವೇರಿ ಕಣಿವೆಯಲ್ಲಿನ ರಾಜ್ಯದ ಈ ಯೋಜನೆಗಳ ಪ್ರಮುಖ ಉದ್ದೇಶ ಮೈಸೂರು, ಹಾಸನ, ತುಮಕೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿನ ಬರಪೀಡಿತ ಪ್ರದೇಶಗಳ ರೈತರ ಒಂದು ಅರೆ ಖುಷ್ಕಿ ಬೆಳೆಗೆ ನೀರೊದಗಿಸುವುದು. ಈಗ ನಿರ್ಮಾಣ ಹಂತದಲ್ಲಿರುವ ಯೋಜನೆಗಳು ಪೂರ್ಣಗೊಂಡ ನಂತರ, ೨೩.೮೫ ಲಕ್ಷ ಎಕರೆಗೆ ನೀರಾವರಿ ಒದಗಿಸುತ್ತದೆ. ಹಾಗೂ ಪ್ರಸ್ತಾವಿತ ಯೋಜನೆಗಳ ನಿರ್ಮಾಣ ಪೂರ್ಣಗೊಂಡ ನಂತರ ಒಟ್ಟು ನೀರಾವರಿ ಪ್ರದೇಶ ೨೬.೧೦ ಲಕ್ಷ ಎಕರೆಗಳಷ್ಟಾಗುತ್ತದೆ. ಹಾಗಾಗಿ ಕಾವೇರಿ ಕಣಿವೆ ಪ್ರದೇಶದ ಒಟ್ಟು ಸಾಗುವಳಿ ಭೂಮಿಯ ಶೇ. ೪೨.೬೦ರಷ್ಟಾಗುತ್ತದೆ. ಈ ಯೋಜನೆಗಳು ಪೂರ್ಣಗೊಂಡ ನಂತರವೂ ೨೮ ಬರಪೀಡಿತ ಪ್ರದೇಶಗಳ ಪೈಕಿ ಏಳು ತಾಲೂಕುಗಳು ನೀರಾವರಿಯಿಂದ ದೂರವೇ ಉಳಿಯುತ್ತವೆ. ಈ ಪುಸ್ತಕದ ಜೊತೆ ನೀಡಿರುವ ನಕಾಶೆಯಲ್ಲಿ ಅಸ್ತಿತ್ವದಲ್ಲಿರುವ, ನಿರ್ಮಾಣ ಹಂತದಲ್ಲಿರುವ ಹಾಗೂ ಪ್ರಸ್ತಾವಿತ ನೀರಾವರಿ ಯೋಜನೆಗಳ ವಿವರಣೆಯಿದೆ.

ತಮಿಳುನಾಡಿನಿಂದ ಅತ್ಯಧಿಕ ನೀರಿನ ಬಳಕೆ

ಮೇಲಿನ ಆರೋಪಿತ ಒಪ್ಪಂದಗಳನ್ನು ನೆಪಮಾಡಿಕೊಂಡು ತಮಿಳುನಾಡು ತನ್ನ ನೀರಾವರಿ ಭೂಮಿಯನ್ನು ಅಭೂತಪೂರ್ವಕವಾಗಿ ವಿಸ್ತರಿಸಿತು. ೧೯೨೪ರಲ್ಲಿದ್ದ ೧೬.೬೫ ಲಕ್ಷ ನೀರಾವರಿ ಭೂಮಿ ೧೯೭೧ರ ವೇಳೆಗೆ ೨೮.೨ ಲಕ್ಷ ಎಕರೆಗಳಿಗೇರಿತು. ಆದರೆ ಕರ್ನಾಟಕದಲ್ಲಿ ಇದೇ ಅವಧಿಯಲ್ಲಿ ೩.೧೪ ಲಕ್ಷ ಎಕರೆಯಿಂದ ಕೇವಲ ೬.೮೨ ಲಕ್ಷ ಎಕರೆಗೆ ನೀರಾವರಿ ಭೂಮಿ ಹೆಚ್ಚಾಯಿತು. ತಮಿಳುನಾಡು ಎರಡರಿಂದ ಮೂರು ನೀರಾವರಿ ಬೆಳೆ ಬೆಳೆಯುತ್ತಿದ್ದರೆ ಕರ್ನಾಟಕ ಅಂಥ ಒಂದು ಬೆಳೆಗೆ ನೀರು ಕೊಡಲೂ ಕಷ್ಟವನ್ನು ಎದುರಿಸುತ್ತಿತ್ತು. ಬರಪೀಡಿತ ಪ್ರದೇಶಗಳಲ್ಲಿ ಒಂದು ಅರೆ ಖುಷ್ಕಿ ಬೆಳೆಗೆ ಮಾತ್ರ ನೀರನ್ನು ಪೂರೈಸುವ ರೀತಿಯಲ್ಲಿ ಕರ್ನಾಟಕವು ಬೆಳೆ ಪದ್ಧತಿಯನ್ನು ರೂಪಿಸಿದೆ. ಕಾವೇರಿ ಕಣಿವೆ ಪ್ರದೇಶದಲ್ಲಿ ದೊರಕುವ ೭೯೦ ಟಿ.ಎಂ.ಸಿ. ನೀರಿನ ಸಮರ್ಥ ಬಳಕೆಯಿಂದ ನದಿ ಮುಖಜ ಭೂಮಿಯಲ್ಲಿ ದೊರೆಯುವ ಅಂತರ್ಜಲದ ಗರಿಷ್ಠ ಬಳಕೆಯಿಂದ ನೀರಿನ ಪೋಲನ್ನು ಕಡಿಮೆ ಮಾಡುವುದರಿಂದ, ಸಮುದ್ರಕ್ಕೆ ವ್ಯರ್ಥವಾಗಿ

ಹರಿದು ಹೋಗುವ ನೀರನ್ನು ತಡೆಗಟ್ಟಿ ವ್ಯವಸಾಯಕ್ಕೆ ಬಳಸಿಕೊಳ್ಳುವುದರಿಂದ ಹಾಗೂ ಮಳೆಯನ್ನು ಅನುಸರಿಸಿ ಬೆಳೆಯ ವಿಧಾನವನ್ನು ವಿನ್ಯಾಸಗೊಳಿಸುವುದರಿಂದ ಒಂದು ಸಾಮಾನ್ಯ ವರ್ಷದಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಲಭ್ಯವಾಗುವ ನೀರಿನಿಂದ ನದಿಕಣಿವೆಯ ಮೇಲ್ಭಾಗದ ರಾಜ್ಯಗಳ ಅಗತ್ಯವನ್ನು ಪೂರೈಸಬಹುದು. ನದಿ ಕಣಿವೆಯ ಕೆಳ ಪ್ರಾಂತದಲ್ಲಿರುವ ತಮಿಳುನಾಡು ಮತ್ತು ಪುದುಚೇರಿ ಈ ಬಗ್ಗೆ ಸ್ಪಷ್ಟವಾದ ನಿಲುವನ್ನು ತಾಳಿ ಪರಿಸ್ಥಿತಿಯನ್ನು ಸಮತೋಲನ ದೃಷ್ಟಿಯಿಂದ ನೋಡಿ ಕಣಿವೆಯ ಮೇಲ್ಭಾಗದ ರೈತರು ತಮ್ಮ ಹಕ್ಕಿನ ನೀರನ್ನು ಬಳಸಿಕೊಳ್ಳಲು ಅವಕಾಶ ನೀಡಬೇಕು. ಶತ ಶತಮಾನಗಳಿಂದ ನಡೆಯುತ್ತಿರುವ ಕಣಿವೆ ಮೇಲ್ಭಾಗದ ರೈತರ ಶೋಷಣೆ ನಿಲ್ಲಬೇಕು. ಕರ್ನಾಟಕ ರಾಜ್ಯದ ಬರಪೀಡಿತ ಪ್ರದೇಶದ ರೈತರಿಗೆ ನೀರೊದಗಿಸುವ ಮಾನವೀಯ ಕಾರ್ಯಕ್ರಮಕ್ಕೆ ನೆರವಾಗಬೇಕು. ಈ ನ್ಯಾಯೋಚಿತ ನಿಲುವನ್ನು ಕೆಳಪ್ರಾಂತದ ಪ್ರದೇಶಗಳು ತಾಳದಿದ್ದರೆ, ಅಪಾರ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾದ ಕರ್ನಾಟಕದ ಯೋಜನೆಗಳು ರೈತರ ಭವಿಷ್ಯಕ್ಕೆ ಹಾನಿಕರವಾಗುತ್ತವೆ. ಇದರಿಂದ ಕರ್ನಾಟಕ ತಮಿಳುನಾಡಿಗೆ ನೀರು ಸಂಗ್ರಹಿಸಿ ನಿಯತವಾಗಿ ನೀರು ಬಿಡುವ 'ನೀರು ನಿಯಂತ್ರಣ' ಕಾರ್ಯವನ್ನು ಮಾತ್ರ ಮಾಡುತ್ತಾ ತನ್ನ ರಾಜ್ಯದಿಂದ ತಮಿಳುನಾಡಿಗೆ ಹರಿದು ಹೋಗುವ ಜಲಪ್ರವಾಹವನ್ನು ನೋಡುತ್ತಾ ಸುಮ್ಮನೆ ಕೂರಬೇಕಾಗುತ್ತದೆ. ಇಂಥ ಪರಿಸ್ಥಿತಿಯನ್ನು ಸಹಿಸಿಕೊಂಡು ಸುಮ್ಮನೆ ಕೂಡಲು ಯಾವ ರೈತನಿಗೆ ಸಾಧ್ಯ?

ಕೃಪೆ: ಕಾವೇರಿ ಜಲವಿವಾದ, ನೀರಾವರಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು

❑

೩.

ಕಾವೇರಿ ಜಲವಿವಾದ : ತಪ್ಪದ ತಕರಾರು

ವೈ.ಎಸ್.ವಿ. ದತ್ತ

ಈ ಅನ್ಯಾಯದ ಕಥೆ ೧೯೨೪ಕ್ಕೆ ಮುಗಿಯಲಿಲ್ಲ. ಭಾರತ ಸ್ವತಂತ್ರವಾದ ನಂತರವೂ ಕರ್ನಾಟಕದ ನೀರಾವರಿ ಯೋಜನೆಗಳಿಗೆ ತಮಿಳುನಾಡಿನ ಅಡ್ಡಗಾಲು ತಪ್ಪಲಿಲ್ಲ. ೧೮೯೨ ಮತ್ತು ೧೯೨೪ರ ಒಪ್ಪಂದಗಳು ಅಂದಿನ ಮೈಸೂರಿನ ಮೇಲೆ ಅನ್ಯಾಯವಾಗಿ ವಿಧಿಸಿದ ನಿರ್ಬಂಧಗಳ ದೆಸೆಯಿಂದ ಸಿಂಹಪಾಲಿನ ಲಾಭ ಪಡೆದುಕೊಂಡರೂ ಕೂಡ ತಮಿಳುನಾಡು ನಮ್ಮ ನೀರಾವರಿ ಯೋಜನೆಗಳ ಬಗ್ಗೆ ತಕರಾರು ಮಾಡುತ್ತಲೇ ಬಂತು.

೧೯೫೬ರ ರಾಜ್ಯಗಳ ಪುನರ್ವಿಂಗಡಣೆಯಾದ ನಂತರ ಕಾವೇರಿ ಜಲಾನಯನ ಪ್ರದೇಶದ ಸ್ವರೂಪದಲ್ಲೂ ವ್ಯತ್ಯಾಸವಾಯಿತು. ಮದ್ರಾಸಿನ ಭಾಗವಾಗಿದ್ದ ಕೊಳ್ಳೇಗಾಲ ಮತ್ತು ಕೊಡಗು ರಾಜ್ಯ ಮೈಸೂರಿನಲ್ಲಿ ಏಕೀಕರಣವಾದವು. ಮದ್ರಾಸಿನ ಮಲಬಾರ್ ಭಾಗ ಕೇರಳ ರಾಜ್ಯದ ಭಾಗವಾಯಿತು. ಹೀಗೆ ೧೯೫೬ರ ರಾಜ್ಯದ ಏಕೀಕರಣದ ನಂತರ ಕರ್ನಾಟಕವು ಹೇಮಾವತಿ, ಕಬಿನಿ, ಸುವರ್ಣಾವತಿ ಮತ್ತು ಯೋಜನೆಗಳನ್ನು ಕೈಗೊಳ್ಳಲು ಮುಂದಾದೊಡನೆಯೇ ತಮಿಳುನಾಡು ಆಕ್ಷೇಪಣೆಗೆ ಎತ್ತಿತ್ತು. ೧೮೯೨ ಮತ್ತು ೧೯೨೪ರ ಒಪ್ಪಂದಗಳನ್ನು ಕರ್ನಾಟಕ ಉಲ್ಲಂಘಿಸಿತೆಂದು ತಮಿಳುನಾಡು ಅಪಸ್ವರ ತೆಗೆಯಿತು. ತಂಜಾವೂರಿನ ರೈತರ ಹಿತಕ್ಕೆ ಧಕ್ಕೆಯಾಗಿದೆಯೆಂದು ಸುಪ್ರೀಂ ಕೋರ್ಟಿಗೂ ದೂರನ್ನು ಕೊಂಡ್ಯೊಯಿತು. ಆದರೆ ವಾಸ್ತವ ಸಂಗತಿ ಬೇರೆಯೇ ಇದ್ದಿತು.

೧೯೨೪ರಲ್ಲಿ ಒಪ್ಪಂದವನ್ನು ಮೊದಲು ಉಲ್ಲಂಘಿಸಿದ್ದು ಮದರಾಸೇ ಹೊರತು ಮೈಸೂರಲ್ಲ. ಭವಾನಿ ಮತ್ತು ಅಮರಾವತಿ ಉಪನದಿಗಳ ನೀರಾವರಿ ಯೋಜನೆಗಳ ವಿಷಯವನ್ನು ತಮಿಳುನಾಡು ಮೈಸೂರಿನ ಗಮನಕ್ಕೆ ತರಲೇ ಇಲ್ಲ. ಅಷ್ಟೇ ಅಲ್ಲ ತಂಜಾವೂರು ಮುಖಜ ಭೂಮಿಯ ನೀರಾವರಿ ಯೋಜನೆಯನ್ನು ಆಧುನೀಕರಣಗೊಳಿಸುವುದಕ್ಕಾಗಿ ವಿಶ್ವಬ್ಯಾಂಕ್‌ನಿಂದ ನೆರವು ಪಡೆದು ನಿರ್ಮಿಸಲು ಯೋಜಿಸಿದ್ದ ಅಣೆಕಟ್ಟಿನ ವಿವರಗಳನ್ನು ಮೈಸೂರು ಸರ್ಕಾರ ಕೇಳಿದರೂ ತಮಿಳುನಾಡು ಸರ್ಕಾರ ಒದಗಿಸಲಿಲ್ಲ. ಜೊತೆಗೆ 'ಮೆಟ್ಟೂರು

ಹೈಲೆವೆಲ್ ಕೆನಾಲ್' ಮತ್ತು ಕತ್ತಲಾಯಿ ಪುಲ್ಲಾಬಾದಿ ಯೋಜನೆಗಳನ್ನು ತಮಿಳುನಾಡು ಕೈಗೊಂಡಿತು. ಇವೆಲ್ಲಾ ೧೯೨೪ರ ಒಪ್ಪಂದದ ಸ್ಪಷ್ಟ ಉಲ್ಲಂಘನೆಗಳು. ಇದಕ್ಕೆ ಪ್ರತಿಯಾಗಿ ಹೇಮಾವತಿ, ಕಬಿನಿ, ಹಾರಂಗಿ ಯೋಜನೆಗಳನ್ನು ಕೈಗೊಳ್ಳುವಲ್ಲಿ ಕರ್ನಾಟಕದ ನಿಲುವು ನ್ಯಾಯವಾದದ್ದಾಗಿತ್ತು. ಏಕೆಂದರೆ ೧೯೨೪ರ ಒಪ್ಪಂದದ ೧೪ನೇ ಅನುಚ್ಛೇದದ ಪ್ರಕಾರವೇ, ಮದರಾಸು, ಭವಾನಿ, ಅಮರಾವತಿ ಉಪನದಿಗಳ ನಿರ್ಮಾಣ ಕಾರ್ಯವನ್ನು ಮೈಸೂರಿನ ಗಮನಕ್ಕೆ ತಂದು ಕೈಗೊಳ್ಳಬಹುದೆಂದಿರುವುದನ್ನು ಮೈಸೂರು ಬಳಸಿಕೊಂಡಿತು. ಅಷ್ಟೇ ಅಲ್ಲ ೧೯೨೪ರ ಒಪ್ಪಂದವನ್ನು ಮದರಾಸೇ ಉಲ್ಲಂಘಿಸಿತ್ತು. ಹೀಗಾದರೂ ತಮಿಳುನಾಡಿನ ಕುತರ್ಕ ಸಾಗುತ್ತಲೇ ಬಂತು.

ಕೃಪೆ: ಕಾವೇರಿ ಜಲವಿವಾದ, ಕರ್ನಾಟಕ ವಿಕಾಸ ವೇದಿಕೆ, ಬೆಂಗಳೂರು

❑

೪

ಕಾವೇರಿ ಚಳುವಳಿ

ಜಿ.ಟಿ. ವೀರಪ್ಪ

ಕಾವೇರಿ ನ್ಯಾಯ ಮಂಡಳಿಯ ಮಧ್ಯಂತರ ತೀರ್ಪಿನ ವಿರುದ್ಧ ಕರ್ನಾಟಕ ಜನತೆ ಬುಗಿಲೆದ್ದಿತು. "ಮಂಡ್ಯ ಜಿಲ್ಲೆಯಲ್ಲಿ ಮಂಡ್ಯ ಜಿಲ್ಲಾ ರೈತ ಹಿತ ರಕ್ಷಣಾ ಸಮಿತಿ" ರಚಿತಗೊಂಡು ಕರ್ನಾಟಕಕ್ಕಾದ ಅನ್ಯಾಯದ ವಿರುದ್ಧ ತೀವ್ರ ಪ್ರತಿಭಟನೆ ಹಮ್ಮಿಕೊಂಡಿತು. ಶ್ರೀರಂಗಪಟ್ಟಣದ ಬಳಿ ಕಾವೇರಿ ನದಿಯಲ್ಲಿ ರೈತ ಹಿತರಕ್ಷಣಾ ಸಮಿತಿ ಹಾಗೂ ರೈತ ಸಂಘದ ಕಾರ್ಯಕರ್ತರು ನದಿ ನೀರಿನಲ್ಲಿ ನಿಂತು ಪ್ರತಿಭಟನೆಯನ್ನು ನಡೆಸಿದ್ದು ಈಗ ಇತಿಹಾಸ. ಸುಮಾರು ೫೨ ದಿನಗಳ ಕಾಲ ನಿರಂತರವಾಗಿ ಚಳುವಳಿ ನಡೆಯಿತು. ಲಕ್ಷಾಂತರ ಜನರು ಪಕ್ಷಾತೀತವಾಗಿ, ವರ್ಣಾತೀತವಾಗಿ ಪ್ರತಿಭಟನೆ ನಡೆಸಿದರು. ಸಮಿತಿಯ ಅಧ್ಯಕ್ಷರಾಗಿ ಸಂಸದ ಜಿ. ಮಾದೇಗೌಡರು, ಹೆಚ್.ಡಿ. ಚೌಡಯ್ಯ, ಎಂ. ಲಿಂಗಯ್ಯ, ಕೆ.ಟಿ. ಶಿವಲಿಂಗಯ್ಯ, ಕೆ.ಎಸ್. ಪುಟ್ಟಣ್ಣಯ್ಯ, ಜಿ.ಬಿ. ಶಿವಕುಮಾರ್, ಹೆಚ್. ಹೊನ್ನಪ್ಪ, ಕೆ. ಸಿಂಗಾರಿಗೌಡರು, ಕೆ.ಎಸ್. ಪುಟ್ಟಣ್ಣಯ್ಯ, ಜಿ.ಬಿ. ಶಿವಕುಮಾರ್, ಹೆಚ್. ಹೊನ್ನಪ್ಪ, ಕೆ. ಸಿಂಗಾರಿಗೌಡರು, ಕೆ.ಎಸ್. ಸಚ್ಚಿದಾನಂದ, ಕೆ. ಬೋರಯ್ಯ, ಕೆ.ಎಸ್. ನಂಜುಂಡೇಗೌಡ, ಸುನಂದ ಜಯರಾಂ, ಟಿ.ಎಲ್. ಪುರುಷೋತ್ತಮ್, ಡಿ. ರಾಮಲಿಂಗಯ್ಯ, ಬಿ.ಟಿ. ಶ್ರೀನಿವಾಸ್, ಎನ್. ರಾಜು ಮುಂತಾದವರು ಸಮಿತಿಯಲ್ಲಿದ್ದು ಹೋರಾಟದ ನೇತೃತ್ವವನ್ನು ವಹಿಸಿದರು. ೦೫-೦೧-೧೯೯೨ರಂದು ಮಂಡ್ಯದಲ್ಲಿ ನಡೆದ ಬೃಹತ್ ಸಮಾವೇಶ ಜನ ಪ್ರತಿನಿಧಿಗಳು ರಾಜೀನಾಮೆ ನೀಡಬೇಕೆಂದು ನಿರ್ಣಯ ಕೈಗೊಂಡು, ಈ ನಿರ್ಣಯದಂತೆ ಚಳುವಳಿ ಮುಂಚೂಣಿಯಲ್ಲಿದ್ದ ಜಿಲ್ಲಾ ರೈತ ಹಿತ ರಕ್ಷಣಾ ಸಮಿತಿ ಅಧ್ಯಕ್ಷರಾದ ಸಂಸದ ಜಿ. ಮಾದೇಗೌಡರು ತಮ್ಮ ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಜನಪರ ಕಾಳಜಿಯನ್ನು ವ್ಯಕ್ತ ಮಾಡಿದರು. ಎಸ್. ಬಂಗಾರಪ್ಪನವರ ನೇತೃತ್ವದಲ್ಲಿ ಕರ್ನಾಟಕ ಸರ್ಕಾರ ತೀರ್ಪಿನ ವಿರುದ್ಧ ಸುಗ್ರೀವಾಜ್ಞೆ ಹೊರಡಿಸುವ ದೃಢ ನಿರ್ಧಾರ ಕೈಗೊಂಡಿತು. ಜನತೆಯ ಮೆಚ್ಚುಗೆಗೆ ಪಾತ್ರವಾಯಿತು. ಚಳುವಳಿ ನಿರಂತರವಾಗಿ ಮುಂದುವರಿಯಿತು. ೧೯೯೭ರಲ್ಲಿ ೮೦ಕ್ಕೂ ಹೆಚ್ಚು ಶಾಸಕರು ಮಂಡ್ಯಕ್ಕೆ ಆಗಮಿಸಿ ಮಂಡ್ಯದಲ್ಲಿ ಬೃಹತ್ ಸಭೆ ನಡೆಸಿದರು. ಒಂದು ಲಕ್ಷಕ್ಕೂ ಹೆಚ್ಚು ಜನ ಈ ಸಭೆಯಲ್ಲಿ ಭಾಗವಹಿಸಿದ್ದು, ಜನತೆಯಲ್ಲಿ ನೀರಿನ ಬಗ್ಗೆ ಇದ್ದ ತುಡಿತದ ಸಂಕೇತವಾಗಿತ್ತು. ಜಿಲ್ಲೆ ಇತಿಹಾಸದಲ್ಲಿ ಹಿಂದೆಂದೂ ಕಾಣದಷ್ಟು ಪ್ರಮಾಣದಲ್ಲಿ ಜಿಲ್ಲೆಯ ಎಲ್ಲ ವರ್ಗದ ಜನರು ಒಗ್ಗಟ್ಟಾಗಿ ಪ್ರತಿಭಟನೆ ಸಲ್ಲಿಸಿದರು.

ಹೆಚ್.ಡಿ. ದೇವೇಗೌಡರು ಭಾರತದ ಪ್ರಧಾನಿಗಳಾದ ಸಂದರ್ಭದಲ್ಲಿ ಕಾವೇರಿ ನ್ಯಾಯ ಮಂಡಳಿ ಅಧ್ಯಕ್ಷರಾದ ಚಿತ್‌ಘೋಷ್ ಮುಖರ್ಜಿ ತಮ್ಮ ಅಧ್ಯಕ್ಷತೆಗೆ ರಾಜೀನಾಮೆ ನೀಡಿದರು. ಈ ಹಿಂದೆ ಮಾನ್ಯ ದೇವೇಗೌಡರು ನ್ಯಾಯ ಮಂಡಳಿ ಸದಸ್ಯರು, ತಮಿಳುನಾಡಿನ ಆತಿಥ್ಯ ಕೊಡುಗೆಗಳನ್ನು ಪಡೆದಿದ್ದಾರೆಂದು

ಆಕ್ಷೇಪವೆತ್ತಿದ್ದರು. ನಂತರ ಪ್ರಧಾನಿ ದೇವೇಗೌಡರು ಮಾನ್ಯ ಎನ್.ಪಿ. ಸಿಂಗ್‌ರವರನ್ನು ಕಾವೇರಿ ನ್ಯಾಯ ಮಂಡಳಿ ಅಧ್ಯಕ್ಷರನ್ನಾಗಿ ನೇಮಿಸಿದರು. ನಂತರ ಕೂಡ ತಮಿಳುನಾಡಿಗೆ ೬ ಟಿ.ಎಂ.ಸಿ. ನೀರು ಬಿಡುವಂತೆ ಕಾವೇರಿ ನ್ಯಾಯ ಮಂಡಳಿ ಕರ್ನಾಟಕ ಸರ್ಕಾರಕ್ಕೆ ಆದೇಶಿಸಿತು. ಕರ್ನಾಟಕದಲ್ಲೇ ಬೆಳೆ ಒಣಗುತ್ತಿದ್ದರೂ ತಮಿಳು ನಾಡಿಗೆ ನೀರು ಬಿಡುವ ದುಸ್ತರ ಕೆಲಸವನ್ನು ಮುಖ್ಯಮಂತ್ರಿ ಜೆ.ಹೆಚ್. ಪಟೇಲರ ಸರ್ಕಾರ ಮಾಡಿತು.

ಕರ್ನಾಟಕವನ್ನು ಪ್ರತಿನಿಧಿಸುತ್ತಿದ್ದ ಸಂಸದರು ಕೂಡ ಲೋಕಸಭೆಯಲ್ಲಿ ಈ ಸಮಸ್ಯೆಯ ಬಗ್ಗೆ ಸಮರ್ಥವಾಗಿ ಪ್ರತಿನಿಧಿಸಲಿಲ್ಲವೆಂದು ಜನತೆ ಆರೋಪ ಮಾಡುತ್ತಿತ್ತು. ಕಾವೇರಿ ವಿಚಾರ ರಾಜಕೀಯ ಶಕ್ತಿಯಾಗಿ ಪರಿವರ್ತನೆಗೊಂಡು ರಾಜ್ಯಕ್ಕೆ ನ್ಯಾಯ ದೊರಕಿಸಿಕೊಡುವಲ್ಲಿ ವಿಫಲವಾಯಿತು ಎಂಬುದೇ ಜನಾಭಿಪ್ರಾಯವಾಯಿತು. ಇದಕ್ಕೆ ಪ್ರತಿಯಾಗಿ ತಮಿಳುನಾಡಿನ ಸದಸ್ಯರು ಕಾವೇರಿ ನೀರಿನ ವಿಚಾರವನ್ನು ರಾಜಕೀಯ ಅಸ್ತ್ರವಾಗಿ ಬಳಸಿಕೊಂಡು ಕೇಂದ್ರ ಸರ್ಕಾರವನ್ನು ನಿಯಂತ್ರಿಸುತ್ತಲೇ ಬಂದಿದ್ದರು. ಇಂದಿಗೂ ತಮಿಳುನಾಡಿನ ಮುಖಂಡರಿಗೆ ರಾಜಕೀಯ ಮಾಡಲು, ಅಧಿಕಾರ ಹಿಡಿಯಲು ಕಾವೇರಿ ಜಲವಿವಾದ ಒಂದು ಉಪಯುಕ್ತ ಅಸ್ತ್ರವಾಗಿಯೇ ಬಳಕೆಯಾಗುತ್ತಿದೆ.

ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗಲೂ ರಾಜ್ಯದಲ್ಲಿ ಬರಪೀಡಿತವಾಗಿದ್ದರೂ ತಮಿಳುನಾಡಿಗೆ ನೀರು ಬಿಡಬೇಕೆಂದು ಕಾವೇರಿ ನ್ಯಾಯ ಮಂಡಳಿ ಆದೇಶಿಸಿತು. ಇದನ್ನು ತಿರಸ್ಕರಿಸುವ ಧೈರ್ಯ ಎಸ್.ಎಂ. ಕೃಷ್ಣರವರ ಸರ್ಕಾರ ತಾಳಿದರೂ ಕೂಡ ಮುಖ್ಯಮಂತ್ರಿಗಳನ್ನೇ ಆದೇಶ ಉಲ್ಲಂಘನೆಗಾಗಿ ಬಂಧಿಸುವ ಹಂತ ತಲುಪಿದಾಗ ಅನಿವಾರ್ಯವಾಗಿ ಕೃಷ್ಣರವರೂ ನೀರು ಬಿಟ್ಟಿದ್ದು ಮತ್ತೊಂದು ದುರಂತ. ಒಂದು ವೇಳೆ ಕೃಷ್ಣರವರು ಬಂಧಿತರಾಗಿದ್ದರೆ ಮತ್ತೊಮ್ಮೆ ಅವರೇ ಕರ್ನಾಟಕ ಮುಖ್ಯಮಂತ್ರಿಯಾಗುತ್ತಿದ್ದರೆಂದು ಜನತೆ ಮಾತನಾಡಿಕೊಳ್ಳುತ್ತಿದ್ದರು.

ಕಾವೇರಿ ಕುಟುಂಬ: ಕಾವೇರಿ ಜಲವಿವಾದ ಸಂದರ್ಭಗಳಲೆಲ್ಲಾ ಎರಡೂ ರಾಜ್ಯಗಳ ರಾಜಕಾರಣಿಗಳು ತಮ್ಮ ಬೇಳೆ ಬೇಯಿಸಿಕೊಂಡು ದೊಂಬರಾಟವಾಡುತ್ತಿದ್ದಾಗ ಎರಡೂ ರಾಜ್ಯಗಳ ಪ್ರಜ್ಞಾವಂತ ಚಿಂತಕರೂ, ರೈತ ಮುಖಂಡರೂ 'ಕಾವೇರಿ ಕುಟುಂಬ'ವೆಂಬ ಸಂಸ್ಥೆಯನ್ನು ಹುಟ್ಟು ಹಾಕಿದರು.

Madras Institute of Development Studies ಎಂಬ ೯೦ ವರ್ಷಗಳ ಇತಿಹಾಸವುಳ್ಳ ಪ್ರಗತಿಪರ ಆಲೋಚನೆ ಇದ್ದಂತಹ ಸಂಸ್ಥೆಯ ನಿರ್ದೇಶಕರಾದ ಪ್ರೊ. ವಿ.ಕೆ. ನಟರಾಜ್ ಹಾಗೂ ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡರು ಪರಸ್ಪರ ಆಲೋಚನೆ ನಡೆಸಿ ಎರಡೂ ರಾಜ್ಯಗಳ ಪ್ರಗತಿಪರ ಚಿಂತಕರೂ ರೈತ ಮುಖಂಡರ ಸಮಿತಿಗಳು ಎರಡೂ ರಾಜ್ಯಗಳಲ್ಲಿ ಪ್ರವಾಸ ಮಾಡಿ ಎರಡೂ ರಾಜ್ಯಗಳ ವಾಸ್ತವ ಸ್ಥಿತಿ, ಸಮಸ್ಯೆಗಳನ್ನು ತಿಳಿದುಕೊಳ್ಳುವಂತಾಯಿತು.

ಕರ್ನಾಟಕದ ಪರವಾಗಿ ಹಿರಿಯ ಮುಖಂಡರಾದ ಮಾನ್ಯ ಎಚ್.ಎಸ್. ನಂಜೇಗೌಡರು ಮತ್ತು ತಮಿಳುನಾಡಿನ ರಾಮಸ್ವಾಮಿ ಅಯ್ಯರ್, ಭವಾನಿ ಶಂಕರ್, ರೈತ ಸಂಘದ ಮುಖಂಡರು ಆರು ಭಾರಿ ಸಭೆ ನಡೆಸಿ ವಾಸ್ತವ ಸ್ಥಿತಿಯನ್ನು ಎರಡೂ ರಾಜ್ಯಗಳ ಸಾಮಾನ್ಯ ಜನರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ನಡೆಸಿದ್ದಾರೆ. ವಾಸ್ತವವಾಗಿ ವೈಜ್ಞಾನಿಕವಾಗಿ ಬೆಳೆ ಪದ್ಧತಿಯಲ್ಲಿ ಬದಲಾವಣೆ ಮಾಡಿಕೊಂಡರೆ, ನೀರಿನ ಲಭ್ಯತೆಗೆ ತಕ್ಕ ಬೆಳೆಗಳನ್ನು ಬೆಳೆದರೆ ರೈತರ ಸಮಸ್ಯೆಗೆ ಪರಿಹಾರ ಸಿಕ್ಕಬಹುದೆಂದೂ ಅಧ್ಯಯನ ಮಾಡಲಾಗಿದೆ. ಈ ಪ್ರಯತ್ನ ಎರಡೂ ರಾಜ್ಯಗಳ ಸಾಮಾನ್ಯ ಜನರಲ್ಲಿ ಗೊಂದಲವನ್ನು ನಿವಾರಿಸುವ ಪ್ರಯತ್ನದ ಜೊತೆಗೆ ಅವರಲ್ಲಿ ಉದ್ದೀಪನವಾಗಬಹುದಾದ ಭಾಷಾ ಮತ್ತು ಪ್ರಾಂತೀಯ ದ್ವೇಷವನ್ನು ಶಮನಗೊಳಿಸಲು ಸಹಕಾರಿಯಾಗಬಲ್ಲರು.

ಇಷ್ಟೆಲ್ಲಾ ಚಳುವಳಿ ನಡೆದರೂ ಕಾವೇರಿ ಜಲವಿವಾದ ಇಂದೂ ಜೀವಂತವಾಗಿ ಉಳಿದಿರುವುದು ಈ ನಾಡಿನ ದೌರ್ಭಾಗ್ಯವೇ ಸರಿ. ಎರಡೂ ರಾಜ್ಯ ವಾಸ್ತವ ಜಲಸಮಸ್ಯೆಯನ್ನು ಅರಿತು ಅದಕ್ಕೆ ಪರಿಹಾರ ಕಂಡುಕೊಳ್ಳುವಲ್ಲಿ ಹಾಗೂ ರಾಷ್ಟ್ರೀಯ ಜಲನೀತಿಯನ್ನು (National Water Policy) ರೂಪಿಸುವಲ್ಲಿ ಎರಡೂ ರಾಜ್ಯಗಳ ಜನಪ್ರತಿನಿಧಿಗಳು ವಿಫಲರಾಗಿದ್ದಾರೆ. ಪ್ರಕೃತಿದತ್ತವಾಗಿ ಲಭ್ಯವಾಗುವ ನದಿ ನೀರಿನ ವಿಚಾರವನ್ನು ನ್ಯಾಯಾಲಯ ಮಟ್ಟದಲ್ಲಿ ತೀರ್ಮಾನ ಮಾಡಿಕೊಳ್ಳಲಾಗುವುದಿಲ್ಲ. ಈ ವಿಚಾರ ನಿರ್ದಿಷ್ಟವಾಗಿ

ನ್ಯಾಯ ಚಿಂತನೆಗೆ ಒಳಪಡಲಾರದೆಂಬ ಕನಿಷ್ಠ ಜ್ಞಾನ ಕೂಡ ಇಲ್ಲದ ಎರಡೂ ರಾಜ್ಯಗಳ ರಾಜಕಾರಣಿಗಳು ಈ ನೀರಿನ ಸಮಸ್ಯೆಯಿಂದ ಕೆಳಮಟ್ಟದ ರಾಜಕೀಯವನ್ನು ಮಾಡಹೊರಟಿದ್ದಾರೆ.

ಕರ್ನಾಟಕ ಹಾಗೂ ತಮಿಳುನಾಡು ಎರಡೂ ರಾಜ್ಯಗಳ ಮುಖ್ಯಮಂತ್ರಿಗಳನ್ನು ಭೇಟಿಮಾಡಿ ಕಾವೇರಿ ನದಿ ಪ್ರಾಂತ್ಯಗಳ ನೈಜ ಸಮಸ್ಯೆಗಳನ್ನು ತಿಳಿಸಿ ಅವರಿಗೆ ಮನವರಿಕೆ ಮಾಡಿಕೊಡುವುದೂ ಹಾಗೂ ಪ್ರಧಾನಮಂತ್ರಿಗಳಿಗೂ ವಾಸ್ತವ ಪರಿಸ್ಥಿತಿಯ ಅರಿವನ್ನುಂಟು ಮಾಡುವುದು 'ಕಾವೇರಿ ಕುಟುಂಬ' ಅಂತಿಮ ಕಾರ್ಯಾಚರಣೆಯಾಗಿದೆ. ಈ ಸಮಸ್ಯೆ ಶಾಶ್ವತವಾಗಿ ಕೊನೆಗೊಳ್ಳುವುದೂ ಕೂಡ ರಾಜಕಾರಣಿಗಳಿಗೆ ಇಷ್ಟವಿಲ್ಲವೇನೋ. ಪರಿಹಾರವಾದರೆ ಅವರಿಗೆ ರಾಜಕೀಯ ಮಾಡಲು ಬೇರೆ ವಿಷಯಗಳಿಲ್ಲವೆಂಬ ಸಂಶಯ ಜನತೆಯನ್ನು ಕಾಡುವಂತಾಗಿದೆ. ಕಾವೇರಿ ಜಲವಿವಾದ ಕೊನೆಗೊಳ್ಳಲಿ ಎಂಬುದು, ಜನಸಾಮಾನ್ಯರ ಆಶಯವಾಗಿದೆ. ಇಷ್ಟೆಲ್ಲರ ನಡುವೆಯೂ ರಾಜ್ಯಾದ್ಯಂತ ರೈತರ ಆತ್ಮಹತ್ಯೆ ನಡೆದು ಅದರಲ್ಲಿ ಮಂಡ್ಯದ ರೈತರೂ ಸೇರಿದ್ದರು. ಇಂಥ ಕೃತ್ಯ ನಡೆದದ್ದು ನಾಡಿನ ದೊಡ್ಡ ದುರಂತಗಳಲ್ಲೊಂದು. ರೈತರೆಂದಿಗೂ ಸುಖಿಗಳಲ್ಲ!

ಕೃಪೆ : ಸುವರ್ಣಮಂಡ್ಯ (೧೯೯೪). ಸಂ: ದೇ.ಜ.ಗೌ. ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು.
ಬಂದೀಗೌಡ ಬಡಾವಣೆ, ಎಲ್.ಐ.ಸಿ. ಕಟ್ಟಡದ ಹಿಂಭಾಗ, ಮಂಡ್ಯ

❑

೫

ನ್ಯಾಯವಾದ ಪಾಲಿಗೆ ಹೋರಾಟ

ಎಂ. ಲಿಂಗಯ್ಯ

ಕಾವೇರಿ ನ್ಯಾಯಮಂಡಳಿಯ ನಡವಳಿಕೆಗಳು ಏನು ಕಾರಣವೋ ತಮ್ಮ ಶೀಘ್ರ ಚಲನೆಯನ್ನು ಕಳೆದುಕೊಂಡು ನಿಧಾನವಾಗಿ ಸಾಗಲಾರಂಭಿಸಿದವು. ಕರ್ನಾಟಕ ಸರ್ಕಾರ ನ್ಯಾಯ ಮಂಡಳಿಯ ಆದೇಶದನ್ವಯ ತಮಿಳುನಾಡಿಗೆ ನೀರು ಬಿಡದೆ ನೀರಿನ ಲಭ್ಯತೆಯ ಮೇಲೆ ನೀರು ಬಿಡಲಾರಂಭಿಸಿದರು. ಇದನ್ನು ಪ್ರತಿಭಟಿಸಿ ತಮಿಳುನಾಡು ಆಗಿನ ಮುಖ್ಯಮಂತ್ರಿ ಕು॥ ಜಯಲಲಿತಾರವರು ಉಪವಾಸ ಸತ್ಯಾಗ್ರಹ ನಡೆಸಿದ್ದು ಈಗ ಇತಿಹಾಸ.

ಅಲ್ಲಿಂದ ತಣ್ಣಗಿದ್ದ ಕಾವೇರಿ ಜಲವಿವಾದ ೧೯೯೫ನೇ ಜುಲೈ ತಿಂಗಳಲ್ಲಿ ಕಾವೇರಿ ನ್ಯಾಯ ಮಂಡಳಿಯ ಆಜ್ಞೆಯನ್ನು ಕಾರ್ಯಗತಗೊಳಿಸಲು ಕೇಂದ್ರ ಸಕಾರ "ಉಸ್ತುವಾರಿ" ಸಮಿತಿಯೊಂದನ್ನು ನೇಮಿಸಲು ಸಂಬಂಧಪಟ್ಟ ರಾಜ್ಯಗಳ ಒಪ್ಪಿಗೆಗಾಗಿ ಪತ್ರ ಬರೆದಾಗ ಮತ್ತೆ ಕಾವೇರತೊಡಗಿತು. ಆದರೆ ಕರ್ನಾಟಕ ಸರ್ಕಾರ ತಾನು ಉಸ್ತುವಾರಿ ಸಮಿತಿ ರಚನೆಗೆ ಒಪ್ಪಿಗೆ ನೀಲಿಲ್ಲವೆಂದು ತಿಳಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿತು. ಕೇಂದ್ರ ಜಲಸಂಪನ್ಮೂಲ ಸಚಿವರಾದ ವಿ.ಸಿ. ಶುಕ್ಲಾರವರು ಉಸ್ತುವಾರಿ ಸಮಿತಿ ರಚಿಸಲು ತೋರಿದ ತಮಿಳುನಾಡು ಪರ ನಿಲುವಿನಿಂದ ಕರ್ನಾಟಕದ ಜನ ಮತ್ತೊಮ್ಮೆ ಪ್ರತಿಭಟನೆಗೆ ಅಣಿಯಾದರು. ಮತ್ತೆ ವಿ.ಸಿ. ಶುಕ್ಲಾರವರ ಹೇಳಿಕೆಗಳು ವಿವಾದವನ್ನು ಸೃಷ್ಟಿಸಿದವು. ಜನ ಪ್ರತಿಭಟಿಸಿದರು. ಕೇಂದ್ರ ಸರ್ಕಾರ ತಟಸ್ಥವಾಯಿತು. ಈ ಸಂದರ್ಭದಲ್ಲಿ ವಿ.ಸಿ. ಶುಕ್ಲಾರವರ ನಿಲುವನ್ನು ಪ್ರತಿಭಟಿಸಿ ಶ್ರೀ ಜಿ. ಮಾದೇಗೌಡರು ಶ್ರೀ ಶುಕ್ಲಾರವರಿಗೆ ಪತ್ರ ಬರೆದರು.

ದಿನಾಂಕ ೨೭-೦೮-೧೯೯೫ರಂದು ಕರ್ನಾಟಕ ಸರ್ಕಾರ ಅನಿರೀಕ್ಷಿತವಾಗಿ ತಮಿಳುನಾಡಿಗೆ ರಾತ್ರಿ ವೇಳೆಯಲ್ಲಿ ಮುಚ್ಚು ಮರೆಯಿಂದ ೫ ಟಿ.ಎಂ.ಸಿ.ಎಫ್.ಟಿ. ನೀರನ್ನು ಬಿಟ್ಟಿದ್ದರಿಂದ ದಿನಾಂಕ ೨೮-೦೮-೧೯೯೫ರಂದು ಓಡೀರನೆ ಜನ ಬೀದಿಗಿಳಿದು ಚಳುವಳಿ ಪ್ರಾರಂಭಿಸಿದರು. ಮಂಡ್ಯದ ನೀರಾವರಿ ಇಂಜಿನಿಯರ್‌ರವರ ಕಛೇರಿಗಳಿಗೆ ಶ್ರೀ ಜಿ. ಮಾದೇಗೌಡರ ನೇತೃತ್ವದಲ್ಲಿ ಬೀಗ ಹಾಕಲಾಯಿತು. ಈ ಬಾರಿ ಜನ ಸ್ವಯಂ ಪ್ರೇರಿತರಾಗಿ ಚಳುವಳಿಗೆ ಕೂಡಲೇ ಇಳಿಯುವಷ್ಟು ಜಾಗೃತರಾಗಿದ್ದರು. ಏನಲಿಗೆ ಕಾವೇರಿ

ನೀರಿನ ಸಮಸ್ಯೆಯ ಅರಿವು ಚೆನ್ನಾಗಿತ್ತು. ಆದರೆ ಚಳುವಳಿ ಹಿಂಸಾತ್ಮಕವಾಗದಂತೆ ಶಿಸ್ತಿನಿಂದ ನಡೆಯಲು ಮಾರ್ಗದರ್ಶನದ ಅವಶ್ಯಕತೆ ಇತ್ತು. ಆ ಮಾರ್ಗದರ್ಶನವನ್ನು ಶ್ರೀ ಜಿ. ಮಾದೇಗೌಡರು ಒದಗಿಸಿದರು.

ದಿನಾಂಕ ೩೧-೦೮-೧೯೯೫ರಂದು ಮಂಡ್ಯದಲ್ಲಿ ಬೃಹತ್ ಬಹಿರಂಗ ಸಭೆ ಸೇರಿ ಕರ್ನಾಟಕ ಸರ್ಕಾರ ತಮಿಳುನಾಡಿಗೆ ಮುಚ್ಚುಮರೆಯಿಂದ ನೀರು ಬಿಟ್ಟದ್ದನ್ನೇ ಉಗ್ರವಾಗಿ ಖಂಡಿಸಿತು. ಈ ಸಭೆಯಲ್ಲಿ ರಾಜ್ಯ ಮಟ್ಟದ ಅನೇಕ ನಾಯಕರು ಭಾಗವಹಿಸಿದ್ದರು. ಜನತಾದಳವನ್ನು ಬಿಟ್ಟು ಉಳಿದ ಎಲ್ಲಾ ರಾಜಕೀಯ ಪಕ್ಷಗಳ ಧುರೀಣರೂ, ಶಾಸಕರೂ, ಮುಖಂಡರೂ ಈ ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಜಿ. ಮಾದೇಗೌಡರು ವಹಿಸಿದ್ದರು.

ಹಲವಾರು ದಿವಸಗಳ ವರೆಗೆ ಧರಣಿ ಸತ್ಯಾಗ್ರಹ ಪ್ರತಿಭಟನಾ ಮೆರವಣಿಗೆಗಳು ರಸ್ತೆ ತಡೆ ಕಾರ್ಯಕ್ರಮಗಳು ಕಾವೇರಿ ಕಣಿವೆಯ ಎಲ್ಲಾ ಭಾಗಗಳಲ್ಲೂ ವ್ಯವಸ್ಥಿತವಾಗಿ ನಡೆದವು. ವಿದ್ಯಾರ್ಥಿಗಳಿಂದ, ಕಾರ್ಮಿಕರಿಂದ, ರಿಕ್ಷಾಚಾಲಕರಿಂದ, ವಾಹನಗಳ ಮಾಲೀಕರಿಂದ ಕೂಡ ಪ್ರತಿಭಟನಾ ಮೆರವಣಿಗೆ ನಡೆಯಿತು. ಒಂದು ಕಿಲೋಮೀಟರ್‌ಗೂ ಹೆಚ್ಚು ಉದ್ದವಾದ ಮಹಿಳೆಯರ ಖಾಲಿ ಕೊಡ ಪ್ರದರ್ಶನದ ಮೆರವಣಿಗೆ ಈ ಸಾರಿಯ ಚಳುವಳಿಯ ಮುಖ್ಯ ಆಕರ್ಷಣೆಯಾಗಿತ್ತು.

ಕೃಷ್ಣಾ-ಕಾವೇರಿ ಸಮನ್ವಯ ಸಮಿತಿಯ ಸಭೆ ಬೆಂಗಳೂರಿನಲ್ಲಿ ಶ್ರೀ ಜಿ. ಮಾದೇಗೌಡರ ಅಧ್ಯಕ್ಷತೆಯಲ್ಲಿ ನಡೆದು ಸರ್ಕಾರ ಅಕ್ರಮವಾಗಿ ೫ ಟಿ.ಎಂ.ಸಿ.ಎಫ್.ಟಿ. ನೀರನ್ನು ತಮಿಳುನಾಡಿಗೆ ಬಿಟ್ಟಿದ್ದನ್ನು ತೀವ್ರವಾಗಿ ಖಂಡಿಸಿ ಮುಖ್ಯಮಂತ್ರಿಗಳ ರಾಜೀನಾಮೆಗೆ ಒತ್ತಾಯ ಪಡಿಸಿತು.

ಕರ್ನಾಟಕ ರಾಜ್ಯದ ವಿಧಾನಸಭೆ, ವಿಧಾನಪರಿಷತ್ ಈ ಎರಡರಲ್ಲೂ ಸರ್ಕಾರದಿಂದ ನೀರು ಬಿಡಲ್ಪಟ್ಟ ಕ್ರಮವನ್ನು ಖಂಡಿಸಿ ಎರಡು ಮೂರು ದಿವಸ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಈ ಸಾರಿ ನಡೆದ ಸರ್ಕಾರದ ಜನ ವಿರೋಧಿ ಕೆಲಸ ಮುಂದೆ ನಡೆಯದಂತೆ ಎಚ್ಚರಿಕೆ ವಹಿಸಲು "ಕಾವೇರಿದಳ" ಎಂಬ ಕಾವಲು ದಳವನ್ನು ರಚಿಸಲು ತೀರ್ಮಾನ ಕೈಗೊಂಡರು ಶ್ರೀ ಜಿ. ಮಾದೇಗೌಡರು. ಸ್ವಯಂಪ್ರೇರಣೆಯಿಂದ ಕಾವೇರಿದಳದಲ್ಲಿ ಕೆಲಸ ಮಾಡಲು ಪ್ರತಿಜ್ಞೆ ಸ್ವೀಕರಿಸಿ ಸುಮಾರು ೫೦ ಸಾವಿರ ಸ್ವಯಂ ಸೇವಕರು ಕಾವೇರಿ ದಳವನ್ನು ಸೇರಿಸಿದ್ದಾರೆ.

೧೯೯೦ರಿಂದ ೧೯೯೫ರ ಸೆಪ್ಟಂಬರ್ ಕೊನೆಯವರೆಗೆ ಕಾವೇರಿ ಜಲ ವಿವಾದದ ಚಳುವಳಿಯಲ್ಲಿ ಬುದ್ಧಿ ಜೀವಿಗಳು, ವಕೀಲರು, ಸಾಹಿತಿಗಳು, ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ವರ್ತಕರು ಮೊದಲಾಗಿ ಎಲ್ಲಾ ವರ್ಗದ ಜನ ಭಾಗವಹಿಸಿದ್ದಾರೆ. ಅನೇಕ ಸಭೆಗಳು, ಧರಣಿ, ಮೆರವಣಿಗೆ, ಪ್ರದರ್ಶನ, ರಸ್ತೆತಡೆ ಇತ್ಯಾದಿಗಳು ನಡೆದಿವೆ. ಇವೆಲ್ಲವನ್ನೂ ಜಿ. ಮಾದೇಗೌಡರು ಒಬ್ಬರೇ ಮಾಡಲಿಲ್ಲ. ಅವರು ಮಾಡಿದ್ದಿಷ್ಟೆ. ಯಾರ ಯಾರ ಸಹಾಯವನ್ನು ಯಾವ ಯಾವ ಕೆಲಸಕ್ಕೆ ಪಡೆಯಬೇಕೆಂದು ನಿರ್ಧರಿಸಿ ಅಂತಹ ಸಮರ್ಥರನ್ನು ಸಂಘಟಿಸಿ ಚಳುವಳಿಯನ್ನು ಯಶಸ್ವಿಗೊಳಿಸಿದ್ದಾರೆ.

ಈ ಎಲ್ಲಾ ವಿದ್ಯಮಾನಗಳನ್ನು ನೋಡಿದರೆ ಕಾವೇರಿ ಜಲ ವಿವಾದ ತಕ್ಷಣವೇ ಬಗೆ ಹರಿಯುವ ಸಾಧ್ಯತೆ ಕಾಣುತ್ತಿಲ್ಲ. ಜನಾಂದೋಳನ ನಿರಂತರವಾಗಿ ನಡೆಯಬೇಕಾಗುತ್ತದೆ. ಕಾವೇರಿ ನೀರಿನಲ್ಲಿ ಕರ್ನಾಟಕ ರಾಜ್ಯಕ್ಕೆ ನ್ಯಾಯವಾದ ಪಾಲು ದೊರೆಯುವವರೆಗೆ ಕನ್ನಡದ ಜನ ಸೋಲರಿಯದ ಹೋರಾಟಕ್ಕೆ ಸಿದ್ಧರಾಗಬೇಕು. ಶ್ರೀ ಜಿ. ಮಾದೇಗೌಡರು ಮತ್ತವರ ಮಿತ್ರರು ಈ ಚಳುವಳಿಯನ್ನು ಜಯ ಸಿಕ್ಕುವವರೆಗೆ ನಡೆಸಲು ಪ್ರಯತ್ನಿಸುವುದರಲ್ಲಿ ಸಂದೇಹವಿಲ್ಲ. ಕರ್ನಾಟಕದ ಜನತೆ ಅವರಿಗೆ ಎಲ್ಲಾ ಬೆಂಬಲವನ್ನು ನೀಡಿ ಕೊನೆಯತನಕ ಅವರಿಗೆ ಬೆಂಬಲವಾಗಿದ್ದರೆ ಜಯ ದೊರಕುವುದರಲ್ಲಿ ಸಂದೇಹವಿಲ್ಲ.

ಕೃಪೆ : ಅಪರಂಜಿ (೨೦೦೧) ಪ್ರಧಾನ ಸಂಪಾದಕ : ಡಾ||. ಮಾದೇಗೌಡ ಅಭಿನಂದನ ಗ್ರಂಥ ಸಮಿತಿ, ಭಾರತೀ ಕಾಲೇಜು, ಭಾರತೀ ನಗರ (ಕಾಳಮುದ್ದನದೊಡ್ಡಿ), ಮದ್ದೂರು, ಮಂಡ್ಯ

❑

ಕಾವೇರಿ ಪ್ರಶ್ನೆಗೆ ಪರಿಹಾರ ಇಲ್ಲವೇ?

ಶೇಷನಾರಾಯಣ

ತಮಿಳುನಾಡು ಉದ್ದಕ್ಕೂ ತನ್ನ ರಾಜಕೀಯ ಇಚ್ಛಾಶಕ್ತಿಗಳಿಂದಲೇ ಕಾವೇರಿಯ ಪ್ರಶ್ನೆಯನ್ನು ಗಲಾಟೆ ಮಾಡಿ ಕೂಗೆಬ್ಬಿಸಿ ಅಥವಾ ನ್ಯಾಯಾಲಯಗಳಿಗೆ ಎಡತಾಕಿ ಪ್ರಶ್ನೆಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಿಲ್ಲ. ಹದಿನೈದು ಎಂದೂ ಹದಿನೈದಾಗಿಯೇ ಉಳಿಯುವುದಿಲ್ಲ. ಅದು ಇನ್ನೊಂದು ದಿನ ಹಠಾತ್ತನೆ ಮಳೆ ಆಗದೆ ಜಲಾಶಯಗಳು ಬತ್ತುವಂತೆ ಹದಿನೈದೂ ಒಂದಲ್ಲ ಒಂದು ದಿನ ಮುರರ ಸಂಖ್ಯೆಗೆ ಇಳಿದೀತು ಅಥವಾ ಸೊನ್ನೆಯೇ ಆದೀತು. ತಾಂತ್ರಿಕ ಪ್ರಶ್ನೆಗಳನ್ನು ರಾಜಕೀಯದಿಂದಲೇ ರಾಜಕೀಯ ಮಾಡಿಯೇ ಪರಿಹರಿಸಿಕೊಳ್ಳುತ್ತೇವೆ ಎನ್ನುವುದು ಎಂದೂ ಆಗದ ಮಾತು. ಇದನ್ನು ರಾಜಕೀಯ ಮಾಡುವ ಪಕ್ಷಗಳು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು.

ರಾಷ್ಟ್ರೀಯ ಜಲನೀತಿಗಳನ್ನು ರೂಪಿಸದೆ ಕಾವೇರಿಯ ಪ್ರಶ್ನೆ ಬಗೆಹರಿಯುವುದಿಲ್ಲ. ಅಂತರರಾಜ್ಯ ಜಲವಿವಾದದ ಕಾಯಿದೆಯನ್ನು ನಮ್ಮ ಸಂಸತ್ತು ಅಂಗೀಕರಿಸಿದರೆ ಆಗಷ್ಟೇ ನ್ಯಾಯ ಮಂಡಳಿಗೂ ಒಂದು ಕಡಿವಾಣ ಬೀಳುತ್ತದೆ. ಇಷ್ಟು ವರುಷಗಳೊಳಗಾಗಿಯೇ ತೀರ್ಪು ನೀಡಬೇಕು ಎಂದು. ಆಗ ಅಂತರ ರಾಜ್ಯ ಜಲವಿವಾದಗಳು ಕಾಲಬದ್ಧವಾಗಿ ಇತ್ಯರ್ಥಗೊಳ್ಳುತ್ತವೆ.

ಹೆಲ್ಸಿಂಕಿ ನಿಯಮಗಳೋ ಅಥವಾ ಹೊಸದಾಗಿ ರಚಿತವಾಗುವ ರಾಷ್ಟ್ರೀಯ ಜಲಸಂಪನ್ಮೂಲ ಮಂಡಳಿಯೋ ಯಾವುದೇ ಆದರೂ ಸರಿ : 'ಕರ್ನಾಟಕ ಈಗ ಉಪಯೋಗಿಸಿಕೊಳ್ಳುತ್ತ ಇರುವ ನೀರು ಕ್ರಮಬದ್ಧವಲ್ಲ. ತಮಿಳುನಾಡಿಗೇ ಪ್ರರಾ ನೀರೂ ಹರಿದು ಹೋಗಬೇಕು' ಎಂದು ಆದೇಶ ನೀಡುವುದಿಲ್ಲ. ಕಾವೇರಿಯಿಂದ ಈಗ ದೊರಕುವ ನೀರಿನಿಂದ ಮಳೆಯಿಂದ ಇಷ್ಟು ವಿಸ್ತೀರ್ಣ ಇಷ್ಟು ನೀರು ಬಳಸಿಕೊಳ್ಳಲು ಹಕ್ಕಿದೆ ಎಂದೇ ನೀತಿಸೂತ್ರಗಳನ್ನು ಉಹೂ ಜಲಸೂತ್ರವನ್ನು ಜಾರಿಗೆ ತರುತ್ತವೆ. ಅಂತೆಯೇ ಕರ್ನಾಟಕ ಹೊಸ ಅಣೆಕಟ್ಟುಗಳನ್ನು ಕಟ್ಟುವುದು ಕಟ್ಟಿದ್ದು ತಪ್ಪು ಎಂದು ಜಲಸಂಪನ್ಮೂಲ ಮಂಡಳಿ ಎಂದೂ ಹೇಳಲು ಸಾಧ್ಯವಿಲ್ಲ; ಹೇಳುವುದಿಲ್ಲ.

ಹಾಗೆಯೇ ಕರ್ನಾಟಕ ತಮಿಳುನಾಡಿಗೆ ಹರಿದುಹೋಗುವ ಎಲ್ಲ ನೀರನ್ನೂ ದುರುದ್ದೇಶದಿಂದ ತಡೆಗಟ್ಟಿ ತಾನೇ ಉಪಯೋಗಿಸಿಕೊಳ್ಳುತ್ತಲೂ ಇಲ್ಲ. ಹಾಗೆಯೇ ಸುಳ್ಳು ಹೇಳಿ ಸುಳ್ಳು ಲೆಕ್ಕ ತೋರಿಸುವುದೂ ಈಗ ಸಾಧ್ಯವಿಲ್ಲ. ಆಧುನಿಕ ಮಾಪನಗಳು ಬಂದಿವೆ. ಅವನ್ನು ತಿರುಚಲು ಯಾರಿಂದಲೂ ಸಾಧ್ಯವಿಲ್ಲ. ಕರಾರುವಾಕ್ಕಾಗಿ ಅವು ಲೆಕ್ಕಗಳನ್ನು ತೋರಿಸಿ ಬಿಡುತ್ತವೆ. ಹಾಗೆಯೇ ಕಂಪ್ಯೂಟರ್‌ಗಳು ಅಂಥ ಲೆಕ್ಕಗಳನ್ನು ದಾಖಲು ಮಾಡಿಕೊಂಡು ಬಿಡುತ್ತವೆ. ವಿಜ್ಞಾನ–ತಾಂತ್ರಿಕತೆ ಈಗ ಅದ್ಭುತವಾಗಿ ಬೆಳೆದಿದೆ. ನಿಖರತೆ ಎನ್ನುವುದು ಮುದ್ರೆಯೊತ್ತಿ ಬಿಡುತ್ತದೆ.

ಕರ್ನಾಟಕ ಎಲ್ಲ ನೀರನ್ನೂ ಹಿಡಿದಿಟ್ಟುಕೊಳ್ಳುತ್ತದೆ ಎನ್ನುವುದು ಬರೇ ಅಪಪ್ರಚಾರ. ಹಿಂದಣ ದಿನಗಳಲ್ಲಿ ಕಾವೇರಿಯ ನೀರನ್ನು ಎಂದರೆ ತನ್ನ ಪಾಲಿನ ನೀರನ್ನು ಕರ್ನಾಟಕ ಯಾವುಯಾವುದೋ ಕಾರಣಗಳಿಂದ ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ. ಈಗ ಸಾಧ್ಯವಾಗಿದೆ; ಬಳಸಿಕೊಳ್ಳುತ್ತ ಇದೆ – ಅಷ್ಟೆ. ಆದರೆ ಕರ್ನಾಟಕ ಎಲ್ಲ ನೀರನ್ನೂ ತಡೆಗಟ್ಟಿ ಕೆಳಗಣ ರಾಜ್ಯಕ್ಕೆ ಎಂದರೆ ತಮಿಳುನಾಡಿಗೆ ನೀರೇ ಹೋಗದ ಹಾಗೆ ಮಾಡಿದರೆ. ಆಗ ಹೊಸದಾಗಿ ರಚನೆಯಾಗುವ ರಾಷ್ಟ್ರೀಯ ಜಲಸಂಪನ್ಮೂಲ ಮಂಡಳಿ ಎನ್ನುವುದು ಇದ್ದೇ ಇರುತ್ತದೆ. ಅದಕ್ಕೆ ಅಧಿಕಾರವೂ ಇರುತ್ತದೆ; ಇದ್ದೇ ತೀರಬೇಕು. ಆಗ ಈ ಮಂಡಳಿ ಎಚ್ಚರಿಕೆಯ ಕರೆಗಂಟೆ ಬಾರಿಸುತ್ತದೆ. ಕರೆಗಂಟೆಯ ಸದ್ದು ಕಿವಿಗೆ ಬೀಳಲಿಲ್ಲ ಎಂದು ಸೋಗು ಹಾಕಿದರೆ ಅಥವಾ ಉಲ್ಲಂಘಿಸಿದರೆ ಶಿಕ್ಷೆ ವಿಧಿಸುವ ಅಧಿಕಾರವೂ ಅದಕ್ಕೆ ಇರುತ್ತದೆ. ಎಂದರೆ ಕಡಿವಾಣ. ಈ ಬಗೆಯ ಜಲ ವಿವಾದ ಕಾಯಿದೆಯನ್ನು ಸಂಸತ್ತು ಅಂಗೀಕರಿಸಿದರೆ ಮಾತ್ರ ನೀರಿನ ವಿಚಾರದ ತಾಂತ್ರಿಕ ಪ್ರಶ್ನೆಗಳು

ಬಗೆಹರಿಯುತ್ತವೆ; ಬಗೆಹರಿಯಲು ಸಾಧ್ಯ. ಉಭಯತ್ತರೂ ಸರಿಯಾಗಿ ಆಗ ನಡೆದುಕೊಳ್ಳುತ್ತಾರೆ; ಉಭಯತ್ತರಿಗೂ ಕ್ಷೇಮ. ನ್ಯಾಯ ಎಲ್ಲರಿಗೂ ಸಿಗುತ್ತದೆ.

ಆದರೆ ತಮಿಳುನಾಡಿಗೆ ಇಂಥ ಜಲಸಂಪನ್ಮೂಲ ಮಂಡಳಿ ಹಾಗೆ ಹೀಗೆ ಯಾವುದೂ ಬೇಕಾಗಿಲ್ಲ. ಯಾಕೆಂದರೆ ಹೀಗಾಗಿ ಬಿಟ್ಟರೆ ಕರ್ನಾಟಕಕ್ಕೆ ನ್ಯಾಯ ದೊರಕಿ ಬಿಡುತ್ತದೆ. ಆದಷ್ಟೂ ಇಂಥ ಪ್ರಶ್ನೆಗಳನ್ನು ಜೊಟ್ಟೆ ಹಾಕಿ ಗಲಾಟೆ ಮಾಡಿ, ಮಾಡಿಯೇ ತನ್ನ ನಿಲುವನ್ನು ಕಾಯ್ದುಕೊಳ್ಳಬೇಕು ಎನ್ನುವುದೇ ಅದರ ಉದ್ದೇಶ. ಪ್ರಶ್ನೆ ಇತ್ಯರ್ಥದ ವಿಚಾರ ಅಲ್ಲ. ಪ್ರಶ್ನೆ ಇತ್ಯರ್ಥ ಆಗಿ ಬಿಟ್ಟರೆ ತನ್ನ ಉದ್ದೇಶ ಭಗ್ನಗೊಳ್ಳುತ್ತದೆ ಎಂದು ತಮಿಳುನಾಡಿಗೆ ಚೆನ್ನಾಗಿ ಗೊತ್ತು. ಆದುದರಿಂದ ಇತ್ಯರ್ಥಕ್ಕಿಂತ ಹೆಚ್ಚಾಗಿ ಕೂಗು, ಅಪಪ್ರಚಾರಗಳಲ್ಲಿಯೇ ಅದು ಹೆಚ್ಚು ನಂಬಿಕೆಯನ್ನು ಹೊಂದಿದೆ. ಆ ರೀತಿ ತನ್ನ ವ್ಯಾಪ್ತಿಯನ್ನು ನೀರಾವರಿ ಮೇಲೂ ಮೇಲೂ ವೃದ್ಧಿಸಿಕೊಳ್ಳಲು ಕಾರ್ಯತತ್ಪರವಾಗುತ್ತದೆ. ಆ ವಿಧಾನಗಳಲ್ಲಿಯೇ ಅದಕ್ಕೆ ನಂಬಿಕೆ ಜಾಸ್ತಿ. ನಡವಳಿಕೆಯೂ ಹಾಗೆಯೇ. ಆರ್ಭಟ : ಘೋಷಣೆ : ಒತ್ತಡ ಈ ರೀತಿ...

ಕಾವೇರಿ ನಮಗೆ ತಿಳಿದ ಇತಿಹಾಸದ ದಿನಗಳಿಂದಲೂ ಎಷ್ಟು ಉದ್ದ ಇದೆಯೋ ಅಷ್ಟೇ ಉದ್ದ ಈಗಲೂ ಇದೆ; ಹರಿಯುತ್ತ ಇದೆ. ಈಗ ಜನಸಂಖ್ಯೆ ಹೆಚ್ಚಿದೆ; ವ್ಯವಸಾಯ ಕ್ಷೇತ್ರ ಹೆಚ್ಚಿದೆ. ಅದೇ ಮಳೆ; ಅದೇ ನೀರು. ಯಾವುದೇ ಒಂದು ರಾಜ್ಯಕ್ಕೆ ನೀರಿನ ಹಕ್ಕು ಇರುವುದಿಲ್ಲ. ಹಾಗೆಯೇ ನೀರನ್ನು ದುರುಪಯೋಗ ಪಡಿಸಿಕೊಳ್ಳುವುದೂ ಇಂದಿನ ಕಂಪ್ಯೂಟರ್ ಯುಗದಲ್ಲಿ ಸಾಧ್ಯವೇ ಇಲ್ಲ. ಜನಸಂಪನ್ಮೂಲ ಮಂಡಳಿ ಏರ್ಪಟ್ಟು ವಿಧಿವಿಧಾನಗಳು ರೂಪುಗೊಂಡು ಕಾಯದೆ ಬದ್ಧ ತೀರ್ಮಾನಗಳಾದರೆ ಮಾತ್ರ ತಮಿಳುನಾಡು – ಕರ್ನಾಟಕದ ನೀರಿನ ಪ್ರಶ್ನೆಗಳನ್ನು ಬಗೆಹರಿಸಲು ಸಾಧ್ಯ. ಕೂಗು ಕುಯುಕ್ತಿ ಗಲಾಟೆ ವಿನಾಶಗಳಿಂದ ಅಲ್ಲ.

ಹಾಗೆಯೇ ಎರಡೂ ರಾಜ್ಯಗಳು ಪ್ರಾಚೀನ ಕಾಲದ ಗತವೈಭವವನ್ನು ತೊರೆದು ಅಥವಾ ಮರೆತು – ಜಲಸಂಪನ್ಮೂಲ ಸಂರಕ್ಷಣೆ, ನೀರಾವರಿ ಸಮಾನತೆಯ ಬಳಕೆ ಮತ್ತು ನಿಬಂಧನೆಗೊಳಪಟ್ಟ ವಿತರಣೆ, ಜಲಸಂಗ್ರಹಗಳು ಮಾಲಿನ್ಯ ಆಗದಂತೆ ತಡೆಗಟ್ಟುವುದು, ಅಂತರ್ಜಲ ಸಂರಕ್ಷಣೆ, ತ್ಯಾಜ್ಯ ನೀರಿನ ಮರುಬಳಕೆ – ಇಂಥ ಕ್ರಮಗಳನ್ನು ಅನುಸರಿಸಲೇಬೇಕಾಗುತ್ತದೆ. ತಜ್ಞರ ಸಲಹೆಗಳನ್ನು ಕೇಳಲೇಬೇಕಾಗುತ್ತದೆ; ಅನುಷ್ಠಾನಕ್ಕೆ ತರಬೇಕಾಗುತ್ತದೆ. ಆಗಷ್ಟೆ ಪರಿಹಾರ ಸಾಧ್ಯ. ಆಲೂಗಡ್ಡೆ, ಈರುಳ್ಳಿ, ಬಟಾಣಿ, ಕ್ಯಾರೆಟ್ ಮಿಶ್ರಣದ ವಾಂಗಿಭಾತ್ ಅಥವಾ ಕಿಚಡಿ ಸರಕಾರಗಳಿಂದ ಅಲ್ಲ. ರಾಜಕೀಯ ಮಡುವವರಿಂದ ಅಲ್ಲ. ಭೂಮಿಯ ಮೇಲಿನ ಎಲ್ಲ ಮನುಷ್ಯರಿಗೆ ಮತ್ತು ಜೀವಿಗಳಿಗೆ ನೀರಿನ ಮೇಲೆ ಪ್ರಕೃತಿದತ್ತವಾದ ಹಕ್ಕು ಇದೆ ಎನ್ನುವ ಬಾಲಪಾಠವನ್ನು ಹೇಳಿಕೊಡಬೇಕಾದದ್ದು ಹಾಗೆಯೇ ಕಲಿತುಕೊಳ್ಳಬೇಕಾದದ್ದೂ ಮೊದಲ ಕೆಲಸ ಆಗಬೇಕು. ಅಂತೆಯೇ ನೀರು ಎಂದಾಗ ಹಲವು ವಿಷಯಗಳು ಅದರಲ್ಲಿ ಅಡಕವಾಗುತ್ತವೆ. ಬರೇ ಜಲಾಶಯಗಳು ಮಾತ್ರವೇ ಅಲ್ಲ. ಕುಡಿಯುವ ನೀರು, ಪರಿಸರ, ಕೃಷಿ, ಕೈಗಾರಿಕೆ, ಕೃಷಿಯೇತರ ಕೈಗಾರಿಕೆ, ಒಳನಾಡಿನ ಜಲಸಂಚಾರಕ್ಕೆ ಪ್ರಾಧಾನ್ಯತೆ – ಹೀಗೆ ಹತ್ತು ಹಲವು. ಒಂದೇ ಮೂಲದವು; ಭಿನ್ನಭಿನ್ನ ಬಗೆಯವು.

ಹಾಗೆಯೇ ಪರಿಸರ ಮತ್ತು ಅಂತರ್ಜಲ ವಿಚಾರವೂ ಬಹಳ ಮುಖ್ಯವಾದದ್ದು. ಪರಿಸರವನ್ನು ಹಾಳು ಮಾಡಿದರೆ ನೀರು ಎಲ್ಲಿ ದೊರಕುತ್ತದೆ? ಪರಿಸರ ಸಂರಕ್ಷಣೆಯೇ ನಮ್ಮ ಮೊದಲ ಆದ್ಯ ಕರ್ತವ್ಯ ಆಗಬೇಕು. ಪರಿಸರದ ವಿನಾಶ ಮನುಕುಲದ ವಿನಾಶ. ಪರಿಸರದ ವಿನಾಶಗಳಾದರೆ ನದಿಗಳೂ ಹರಿಯುವುದಿಲ್ಲ. ಕಾಲುವೆಗಳೂ ತುಂಬಿಕೊಳ್ಳುವುದಿಲ್ಲ. ಎಲ್ಲ ನದಿಗಳೂ ಟೈಫಾಯ್ಡ್ ಹಿಡಿದವರ ಮುಖಗಳಾಗಿ ಬಿರಿದು ಹೋಗುತ್ತವೆ.

ಅಂತರ್ಜಲದ ವಿಚಾರವೂ ಹಾಗೆಯೇ. ಸಿಕ್ಕಸಿಕ್ಕಲ್ಲೆಲ್ಲ ಬಾವಿಗಳನ್ನು ತೋಡುತ್ತ ಹೋದರೆ ನೀರು ಹೇಗೆ ಉಕ್ಕುತ್ತದೆ? ಉಕ್ಕಲು ಸಾಧ್ಯ? ಅಂತರ್ಜಲದ ದುರ್ಬಳಕೆಯಿಂದ ಇಂದು ಜಲಮಟ್ಟ ಆಳ ಆಳಕ್ಕೆ ಹೋಗುತ್ತ ಇದೆ ಎಂದು ನೀರಿನ ಒರತೆ ಕ್ಷೀಣಿಸುತ್ತ ಇದೆ ಎಂದು ನೀರಾವರಿ ತಜ್ಞರು ಹೇಳುತ್ತ ಇದ್ದಾರೆ. ಅದನ್ನು ಹೆಚ್ಚಿಸುವ ಕಾರ್ಯ ಆಗಬೇಕು. ಸಮುದಾಯಕ್ಕೆ ಉತ್ತೇಜನ ನೀಡಬೇಕು. ಉತ್ಪತ್ತಿಯಿಂದ ಬಳಕೆ. ಸಫಲ ಬಳಕೆಯಿಂದ ಸಮಸ್ತರಿಗೂ ಕ್ಷೇಮ. ಉತ್ಪಾದನೆಯನ್ನು ಹೆಚ್ಚಿಸದಿದ್ದ ಮೇಲೆ ಬಳಕೆ ಎಲ್ಲಿಂದ? ಹೇಗೆ ಸಾಧ್ಯ?

ಮಾನವನಿಗೆ ಭೂಮಿಯೇ ಸರ್ವಸ್ವ ಆಧಾರ. ಹೀಗಿರುವಾಗ ಭೂಮಿಗೆ ಮಾನವ ಏನು ಕಾಣಿಕೆಯನ್ನು ಸಲ್ಲಿಸಿದ್ದಾನೆ? ಸಲ್ಲಿಸುತ್ತ ಇದ್ದಾನೆ? ಭೂಮಿ ಎಂದಾಗ ಬರಿಯ ನೀರು, ಬರಿಯ ಜಾಗ–ಇವಿಷ್ಟೇ ಮಾತ್ರ ಅಲ್ಲ. ಗಾಳಿ, ಬೆಳಕು, ನೀರು, ಪರಿಸರ, ನದಿಬೆಟ್ಟ ಗುಡ್ಡ ಕಾಡು ಸಮುದ್ರ–ಹೀಗೆ ಎಲ್ಲವೂ ಸೇರಿಕೊಳ್ಳುತ್ತದೆ. ಭೂಮಿ ಎಂದರೆ ಪರಿಸರ. ಪರಿಸರ ಎಂದರೇ ಭೂಮಿ. ನಮಗೆ ಅಗೋಚರವಾದ ಒಂದು ಶಕ್ತಿ ಭೂಮಿಯನ್ನು ನಮಗೆ ಬಳುವಳಿಯಾಗಿ ನೀಡಿದೆ. ಅಂಥ ಭೂಮಿಯನ್ನು ನಾವು ಜತನದಿಂದ ಕಾಯ್ದುಕೊಳ್ಳಬೇಕಾಗಿದೆ. ಪ್ರಾಥಮಿಕ ಪಾಠದಿಂದಲೇ ನಮ್ಮ ವಿದ್ಯಾರ್ಥಿಗಳಿಗೆ ಈ ಪ್ರಜ್ಞೆಯನ್ನು ನಾವು ಮೂಡಿಸಬೇಕಾಗಿದೆ; ಪಾಠ ಮಾಡಬೇಕಾಗಿದೆ.

ಪ್ರತಿಯೊಂದು ಮಳೆ ಹನಿಯ ನೀರನ್ನೂ ಪೋಲಾಗದೆ ಸಂಗ್ರಹಿಸುವುದು, ಕೃಷಿ ಕ್ಷೇತ್ರದಲ್ಲಿ ನೀರಿನ ಬಳಕೆ, ರೈತರಿಗೆ ಕೆರೆ ಬಾವಿಗಳನ್ನು ಬಳಸುವಂತೆ ಪ್ರೋತ್ಸಾಹ ನೀಡುವುದು – ಇಂಥ ಕ್ರಮಗಳಿಂದಲೂ ನೀರಿನ ಅನೇಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಿದೆ. ಮುಖ್ಯವಾಗಿ ಮಳೆ ಸಮೃದ್ಧಿ ಇದ್ದಾಗ ಮೌನ, ಮಳೆ ಇಲ್ಲದಾಗ ಬೊಬ್ಬೆ ಈ ಕ್ರಮ ತಪ್ಪಬೇಕು. ಎಲ್ಲ ಕಾಲಗಳಿಗೂ ಅನ್ವಯ ಆಗುವ ಹಾಗೆ ಕಾಯಿದೆ ರೂಪಿಸಬೇಕು. ಆಗ ನೀರಿನ ವಿಚಾರವನ್ನು ಎತ್ತಿಕೊಂಡು ರಾಜಕೀಯ ಮಾಡುವವರ ಚೌಕಾಬಾರ ಹುಲಿಕಲ್ಲು ಆಟ ತಪ್ಪುತ್ತದೆ. ನದೀ ಬಯಲಿನ ಪರಿಷ್ಕೃತ ಸಮಗ್ರ ಅಭಿವೃದ್ಧಿ ಯಾವುದೇ ನದಿಯ ಮೇಲಣ ಮತ್ತು ಕೆಳಗಿನ ರಾಜ್ಯಗಳ ಪರಿಹಾರಕ್ಕೆ ದಾರಿ ಮಾಡಿಕೊಡುತ್ತದೆ.

ಒಂದು ಮುಖ್ಯ ವಿಚಾರವೆಂದರೆ ತಮಿಳುನಾಡಿಗೆ ೨೦೫ ಟಿ.ಎಂ.ಸಿ. ನೀರನ್ನು ಬಿಡಬೇಕು ಎಂದು ನ್ಯಾಯಮಂಡಳಿ ತೀರ್ಮಾನ ಮಾಡಿದೆಯಷ್ಟೆ. ಅದರ ಬಗ್ಗೆ ಹಿಂದಣ ಅಧ್ಯಾಯದಲ್ಲಿ ಸಾಕಷ್ಟು ವಿವರಿಸಿದ್ದೇವೆ. ಮಳೆ ಸಮೃದ್ಧಿಯಾದ ವರ್ಷಗಳಲ್ಲಿ ಕರ್ನಾಟಕ ೨೦೫ ಟಿ.ಎಂ.ಸಿ. ನೀರನ್ನೇ ಬಿಟ್ಟಿಲ್ಲ. ಅದಕ್ಕೂ ಹೆಚ್ಚಿಗೆ ಹರಿಸಿದೆ. 'ಮಳೆ ಇಲ್ಲದಾಗ ಕಷ್ಟ ಕಾಲವನ್ನು ಎರಡೂ ರಾಜ್ಯಗಳು ಸಹ ಹಂಚಿಕೊಳ್ಳಬೇಕು' ಎಂದೂ ನ್ಯಾಯಮಂಡಳಿ ಒಂದು ಮಾತು ಹೇಳಿದೆ. ಈ ಮಾತನ್ನು ಎಂದರೆ ಕಷ್ಟಕಾಲದಲ್ಲಿ ಎರಡೂ ರಾಜ್ಯಗಳು ಕುಳಿತು ಬಗೆಹರಿಸಿಕೊಳ್ಳುವ ವಿಧಾನವನ್ನು ತಮಿಳುನಾಡು ಕಿವಿಗೇ ಹಾಕಿಕೊಳ್ಳುವುದಿಲ್ಲ. ಅದು ಬರೇ ೨೦೫, ೨೦೫, ೨೦೫, ೨೦೫ ಎಂದು ಪಾಂಚಜನ್ಯ ಮೊಳಗಿಸುತ್ತದೆ. 'ಮಳೆ ನೀರು ಸಮೃದ್ಧಿ ಆಗಿದ್ದಾಗ ಎಲ್ಲವನ್ನೂ ತಾನು ಹಿಡಿದಿಟ್ಟುಕೊಂಡು ಅಥವಾ ಬಳಸಿಕೊಂಡು, ಮಳೆ ಇಲ್ಲದಿದ್ದಾಗ ಅದೇ ನೆಪವನ್ನು ಮುಂದೆ ಮಾಡಿ ಕರ್ನಾಟಕ ತನ್ನ ಹೊಣೆಗಾರಿಕೆಯಿಂದ ಜಾರಿಕೊಳ್ಳುತ್ತ ಇದೆ' ಎನ್ನುವುದು ಮಳೆ ಇಲ್ಲದ ಅಥವಾ ಕಡಿಮೆಯಾದ ದಿನಗಳಲ್ಲಿ ತಮಿಳುನಾಡು ಮಾಡುವ ಮುಖ್ಯ ಆಪಾದನೆ ಹಾಗೂ ಬೊಬ್ಬೆ. ಹೀಗಾಗದಂತೆ ತಪ್ಪಿಸಲು ಬೊಬ್ಬೆ ಆಗದಿರಲು ಕಾಯಿದೆಬದ್ಧ ಪರಿಷ್ಕೃತ ರಾಷ್ಟ್ರೀಯ ಜಲನೀತಿ ಆಗಲೇಬೇಕಾಗಿದೆ. ಹೀಗೆ ಆಗದೆ ಬೇರೆ ಪರಿಹಾರ ಎಂದಿಗೂ ಸಾಧ್ಯವಿಲ್ಲ.

ತಮಿಳುನಾಡಿಗೆ ೨೦೫ ಟಿ.ಎಂ.ಸಿ. ನೀರಿನ ಅವಶ್ಯಕತೆಯೂ ಬೇಕಾಗಿಲ್ಲ. ಉದಾಹರಣೆಗೆ ೧೯೮೯-೯೦ನೆಯ ಇಸವಿಗಳಲ್ಲಿ ತಮಿಳುನಾಡಿನಲ್ಲಿ ಭತ್ತದ ಬೆಳೆ ಸಮೃದ್ಧಿಯಾಗಿದೆ. ಆಗ ಮೆಟ್ಟೂರು ಜಲಾಶಯಕ್ಕೆ ಕರ್ನಾಟಕದಿಂದ ಹರಿದು ಬಂದ ನೀರು ೧೭೬ ಟಿ.ಎಂ.ಸಿ. ಮಾತ್ರ, ಎಂದರೆ ಅಷ್ಟು ನೀರು ಮೆಟ್ಟೂರಿಗೆ ಸಾಕಾಗುತ್ತದೆ ಎಂದ ಹಾಗಾಯಿತು. ೨೦೫ ಟಿ.ಎಂ.ಸಿ. ನೀರು ಅಲ್ಲ. ಹಾಗಾದರೆ ಯಾಕೆ ಈ ೨೦೫ ಟಿ.ಎಂ.ಸಿ. ನೀರಿನ ಬೊಬ್ಬೆ? ಇದೇ ರಾಜಕೀಯ. ಅಷ್ಟಲ್ಲದೆ ಗ್ರಾಂಡ್ ಅಣೆಕಟ್ಟಿನ ಮೇಲುಭಾಗ ಎರಡು ಟಿ.ಎಂ.ಸಿ. ನೀರನ್ನು ಸಂಗ್ರಹಣೆ ಮಾಡಿದರೆ ಪ್ರತಿ ವರ್ಷ ೫೦ ಟಿ.ಎಂ.ಸಿ. ನೀರು ಪೋಲು ಮಾಡುವುದನ್ನು ತಮಿಳುನಾಡು ತಪ್ಪಿಸಬಹುದು. ಹಾಗೆಯೇ ಭವಾನಿ, ಅಮರಾವತಿ, ನೊಯ್ಯಲ್ ನದಿಗಳ ವಿಚಾರಗಳೂ ಸಹ. ಅವುಗಳ ಸಂಗಮಗಳ ಬಳಿ ೧೫ ಟಿ.ಎಂ.ಸಿ. ಗಾತ್ರದ ಜಲಾಶಯವನ್ನು ನಿರ್ಮಿಸಿದರೆ, ಆಗ ಕೊಲ್ಲಡದಿಂದ ನೀರು ಪೋಲಾಗುವ ಸುಮಾರು ೩೦ ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಬಹುದು. ತಮಿಳುನಾಡು ಈ ಕ್ರಮಗಳನ್ನು ಅನುಸರಿಸಿದರೆ ತಮಿಳುನಾಡಿನ ನೀರಿಗೆ ಸಂಬಂಧಿಸಿದ ಅನೇಕ ಪ್ರಶ್ನೆಗಳು ಬಗೆಹರಿಯುತ್ತವೆ, ರಾಜಕೀಯದ ಬೊಬ್ಬೆಯಿಂದ ಅಲ್ಲ ಎಂದು ಅನೇಕ ನೀರಾವರಿ ತಜ್ಞರು ಹೇಳುತ್ತಾರೆ. ಎಂದರೆ ಬಳಕೆಗಿಂತ ಆದ್ಯತೆಗಿಂತ ಬೊಬ್ಬೆಯೇ ಜಾಸ್ತಿ ಎನ್ನುವುದೇ ಇದರ ಒಟ್ಟು ಸಾರಾಂಶ. ಹಾಗೆ ಆಗಬೇಕಾದರೆ ಹಿಂದೆ ಹೇಳಿದ ಹಾಗೆ ಕಾಯ್ದೆಬದ್ಧ ರಾಷ್ಟ್ರೀಯ ಜಲನೀತಿ ಅನುಷ್ಠಾನಕ್ಕೆ ಬರಬೇಕು. ಅದರ ತೀರ್ಪೇ ಅಂತಿಮ ಆಗಬೇಕು.

ಹೀಗಾಗದೆ ಹದಿನೈದು ಸಂಸದರು ನಮ್ಮ ಪಕ್ಷದಲ್ಲಿ ಇದ್ದಾರೆ ಎಂದು ರಾಜಕೀಯ ಮಾಡಲು ಹೊರಟರೆ ಕಾವೇರಿಯ ಪ್ರಶ್ನೆಗಳು ಬಗೆಹರಿಯುವುದಿಲ್ಲ. ಮತ್ತಷ್ಟು ಕಗ್ಗಂಟುಗಳಾಗುತ್ತವೆ. ಬಗೆಹರಿಯಲಾಗದ ಪ್ರಶ್ನೆ ಯಾವುದೂ ಇಲ್ಲ. ನಮ್ಮ ಮನಸ್ಸು ತಿಳಿಯಾದರೆ ಎಲ್ಲರೂ ಬಾಳಿ ಬದುಕಬೇಕು ಎನ್ನುವ ತತ್ತ್ವವನ್ನು ಅನುಸರಿಸಿದರೆ ಮಾತ್ರ ಎಂಥ ಪ್ರಶ್ನೆಯನ್ನೂ ಬಗೆಹರಿಸಲು ಸಾಧ್ಯ.

ಇನ್ನೊಂದು ವಿಚಾರ : ಮಂಡ್ಯದ ರೈತನೂ ತಂಜಾವೂರು ರೈತನು ಒಂದೇ ಬಗೆಯವರು. ಕೆಸರಿನಲ್ಲಿ ಹೊರಳುವವರು; ಕಷ್ಟಪಟ್ಟು ದುಡಿಯುವವರು; ದುಡಿಮೆಗಾರರು. ಈ ದುಡಿಮೆಗಾರರ ದುಡಿಮೆಯಿಂದ ನಾವು ಕುಳಿತು ಅನ್ನ ತಿನ್ನುತ್ತ ಇದ್ದೇವೆ ಎನ್ನುವುದನ್ನು ಯಾರೂ ಮರೆಯಬಾರದು. ಇಂಥ ದುಡಿಮೆಗಾರರ ತಲೆಗೆ ವಿಷ ತುಂಬುವ ಪ್ರಯತ್ನವನ್ನು ಯಾರು ಮಾಡಿದರೂ ಬುದ್ಧಿವಂತ ಜನ ಅದನ್ನು ಕಿತ್ತೊಗೆಯಬೇಕು. ಇದು ಹೀಗಲ್ಲ ಹಾಗೆ ಎಂದು ತಿಳಿವಳಿಕೆ ಹೇಳಬೇಕು. ನಮ್ಮ ಜನ ಮುಗ್ಧ ಜನ. ನಮ್ಮ ರೈತ ಮಕ್ಕಳು ಮುಗ್ಧ ಮಕ್ಕಳು. ಅವರನ್ನು ಮುಂದಿಟ್ಟುಕೊಂಡು ರಾಜಕೀಯ ಮಾಡುವವರನ್ನು ತಿರಸ್ಕರಿಸುವಂತೆ ನಮ್ಮ ರೈತ ಮಕ್ಕಳಿಗೆ ನಾವು ಎಚ್ಚರಿಕೆಯ ಮಾತುಗಳನ್ನು ಹೇಳಬೇಕು.

ಕೂಗು ಹೆಚ್ಚು ಪ್ರತಿಧ್ವನಿತವಾದರೂ ನಮ್ಮ ನಾಡಿನಲ್ಲಿ ಕಾವೇರಿಯದು ಒಂದು ಪ್ರಶ್ನೆ ಅಲ್ಲ. ಕಾವೇರಿಗೆ ಟ್ರಿಬ್ಯೂನಲ್ ರಚನೆಗೊಂಡ ಹಾಗೆ ಕೃಷ್ಣಾ, ಗೋದಾವರಿ, ನರ್ಮದಾ, ರಾವಿ, ಮುಲ್ಲಾ, ಪೆರಿಯಾರ್ ಈ ನದಿಗಳಿಗೂ ಟ್ರಿಬ್ಯೂನಲ್‌ಗಳು ಆಗಿವೆ. ಗೋದಾವರಿ, ಕೃಷ್ಣಾ, ನರ್ಮದಾ ನದಿಗಳಿಗೆ ೧೯೬೯ರಲ್ಲಿಯೇ ಟ್ರಿಬ್ಯೂನಲ್‌ಗಳು ಏರ್ಪಟ್ಟವೆ. ಆದರೆ ಬಹುಪಾಲು ಇವುಗಳ ಸಮಸ್ಯೆ ಮುಗಿದಿದೆ. ೧೯೮೬ರಲ್ಲಿ ರೂಪುಗೊಂಡ ರಾವಿ ಮತ್ತು ಬಿಯಾಸ್ ನದಿ, ಹಾಗೆಯೇ ೧೯೯೦ರಲ್ಲಿ ಏರ್ಪಟ್ಟ ಕಾವೇರಿ ಟ್ರಿಬ್ಯೂನಲ್ ಪ್ರಶ್ನೆಗಳು ಮಾತ್ರ ಇನ್ನೂ ಇತ್ಯರ್ಥ ಆಗಿಲ್ಲ; ಬಗೆಹರಿದಿಲ್ಲ. ಇವುಗಳೂ ಬಗೆಹರಿಯುವಂತಾಗಬೇಕು. ಆಗ ಅಕ್ಕಪಕ್ಕದ ನಾಡುಗಳು ಸೋದರ ದೇಶಗಳು ದುರ್ಯೋಧನ ದುಶ್ಶಾಸನರಾಗದೆ ಸೌಹಾರ್ದತೆಯಿಂದ ಬಾಳಿ ಬದುಕಲು ಸಾಧ್ಯ. ಮನಸ್ಸು ಮುಕ್ತವಾಗಿ ತಿಳಿಯಾಗಲೂ ಸಾಧ್ಯವಿದೆ.

ನೀರು ನಿಸರ್ಗ ನಮಗೆ ನೀಡಿರುವ ಅನರ್ಘ್ಯ ಸಂಪತ್ತು. ಇಂಥ ಸಂಪತ್ತನ್ನು ನಾವು ಎಲ್ಲರೂ ಕೂಡಿ ಅನುಭವಿಸೋಣ. ಕಹಿ ಮೆತ್ತುಕೊಳ್ಳುವುದು ಬೇಡ. ನೀರಿನಂತೆಯೇ ನಾವು ತಿಳಿಯಾಗೋಣ; ಶುಭ್ರವಾಗೋಣ; ಸಿಹಿಯಾಗೋಣ. ನೀರಿನಿಂದಲೇ ನಮ್ಮ ಬದುಕು ಎನ್ನುವುದನ್ನೂ ಮರೆಯದಿರೋಣ.

ಕೃಪೆ : ಕಾವೇರಿ ಒಂದು ಚಿಮ್ಮು ಒಂದು ಹೊರಳು (೨೦೦೩). ಕಾವ್ಯಾಲಯ ಪ್ರಕಾಶಕರು. ಜಯನಗರ, ಮೈಸೂರು ೧೧

❑

೭

ಯಾರ‍್ಯಾರಿಗೆ ಎಷ್ಟೆಷ್ಟು ಪ್ರಮಾಣ

ಈ ಹಿಂದಿನ ವಸಾಹತುಶಾಹಿ ಹಿತಾಸಕ್ತಿ ಕಾಪಾಡಲು ರೂಪುಗೊಂಡ ಅಸಮಾನ ಒಪ್ಪಂದಗಳನ್ನು, ನಂತರ ಬಂದ ಕೇಂದ್ರ ಸರಕಾರ ಚಿತಾವಣೆಯ ಏಕಪಕ್ಷೀಯ ಮಧ್ಯಂತರ ತೀರ್ಪನ್ನು ನಾವು ಅನುಸರಣಾ ಯೋಗ್ಯವಲ್ಲ ಎಂದು ತಿರಸ್ಕರಿಸಿದ್ದೇವೆ. ಕಾವೇರಿ ಜಲಾನಯನ ಪ್ರದೇಶದ ಫಲಾನುಭವಿ ರಾಜ್ಯಗಳು ಒಂದು ನಿಗದಿತ ಕಾಲಾವಧಿಯಲ್ಲಿ ಸಮಗ್ರ ಪರಿಹಾರೋಪಾಯಗಳನ್ನು ಅಳವಡಿಸಿಕೊಂಡು ದೀರ್ಘಕಾಲಿಕ ಇತ್ಯರ್ಥಗಳನ್ನು ಜಾರಿಗೆ ತಂದುಕೊಳ್ಳಬೇಕೆಂದು ಅಭಿಪ್ರಾಯ ಪಟ್ಟಿದ್ದೇವೆ.

ಈ ದೀರ್ಘಕಾಲಿಕ ಪರಿಹಾರಗಳು ಅನುಷ್ಠಾನಕ್ಕೆ ಬರುವವರೆಗೆ ನೀರು ಹಂಚಿಕೆಕೊಳ್ಳುವಲ್ಲಿ ಏನು ವಿಧಾನ ಅನುಸರಿಸಬೇಕು ಎಂಬುದು ಗಮನಿಸಬೇಕಾದ ಪ್ರಶ್ನೆ. ಯಾಕೆಂದರೆ ಪ್ರಸ್ತುತದಲ್ಲಿ ಜ್ವಲಂತವಾಗಿರುವ ಸಮಸ್ಯೆಯೊಂದಕ್ಕೆ ಸುದೀರ್ಘ ಕಾಲಾವಧಿಯ ಪರಿಹಾರಗಳನ್ನು ಸೂಚಿಸಿ ಕೈಬಿಟ್ಟರೆ ಅದು ತಕ್ಷಣದ ವಿವಾದದಿಂದ ತಪ್ಪಿಸಿಕೊಳ್ಳುವ ಉಪಾಯ ಮಾತ್ರವೇ ಆಗಿಬಿಡಬಹುದು. ಆದ್ದರಿಂದ ಜನರ ಸಮಗ್ರ ಹಿತಾಸಕ್ತಿಯನ್ನು ವಸ್ತುನಿಷ್ಠವಾಗಿ ಪರಿಶೀಲಿಸಿ ಸುದೀರ್ಘ ಪರಿಹಾರೋಪಾಯಗಳನ್ನು ಸೂಚಿಸಿದಂತೆಯೇ, ಜಟ್ಟಟ್ಟು ಬಗೆಹರಿಯದಿರುವ ಈ ಸಂದರ್ಭದಲ್ಲಿ, ನಾವು ಸೂಚಿಸುವ ಸುಧಾರಣೆಗಳು ಜಾರಿಯಾಗುವವರೆಗೆ

ಮಧ್ಯಂತರ ನಿಲುವು ಒಂದು ನಮಗೆ ಬೇಕಾಗುತ್ತದೆ. ಇಂತಹ ಮಧ್ಯಂತರ ನಿಲುವೊಂದನ್ನು ಕೆಲವು ವಾಸ್ತವಾಂಶಗಳನ್ನು ಗಮನದಲ್ಲಿಟ್ಟುಕೊಂಡೇ ರೂಪಿಸಬೇಕು.

ಮಧ್ಯಂತರ ಪರಿಹಾರ ಇಂತಿಷ್ಟು ಟಿ.ಎಂ.ಸಿ. ನೀರನ್ನು ಇಂತಹ ರಾಜ್ಯ ಇಂತಹ ರಾಜ್ಯಕ್ಕೆ ಬಿಡಲೇಬೇಕು ಎಂದು ನಿಗದಿಪಡಿಸುವಂತಿರಬಾರದು. ಇದಕ್ಕೆ ತಾಂತ್ರಿಕವಾಗಿ ಹಲವಾರು ಕಾರಣಗಳಿವೆ.

ಮೊದಲನೆಯದು; ಕರ್ನಾಟಕ ಈಗ ೩೧೨ ಟಿ.ಎಂ.ಸಿ. ನೀರು ಬಳಸುತ್ತಿದೆ. ಮಳೆ ಸಾಕಷ್ಟು ಆಗಿದೆ ಎನ್ನುವಂತಹ ವರ್ಷಗಳಲ್ಲಿ ಕಾವೇರಿ ನೀರಿನ ಹರಿವಿನ ಪ್ರಮಾಣ ಮೆಟ್ಟೂರು ಜಲಾಶಯದವರೆಗೆ ಸುಮಾರು ೫೦೩ ಟಿ.ಎಂ.ಸಿ. ಇರುತ್ತದೆ. ಮಧ್ಯಂತರ ತೀರ್ಪು ಹೇಳಿರುವ ಪ್ರಕಾರ ೨೦೫ ಟಿ.ಎಂ.ಸಿ. ನೀರನ್ನು ಕರ್ನಾಟಕ ಬಿಡಲೇಬೇಕಾಗಿ ಬಂದರೆ ಕರ್ನಾಟಕಕ್ಕೆ ಆಗ ಉಳಿಯುವುದು ೨೯೮ ಟಿ.ಎಂ.ಸಿ. ನೀರು. ಅದರಲ್ಲಿ ಕೇರಳಕ್ಕೆ ೭ ಟಿ.ಎಂ.ಸಿ. ಕೊಡಬೇಕು. ಅಂದರೆ ಕರ್ನಾಟಕದ ಬಳಕೆಗೆ ೨೧ ಟಿ.ಎಂ.ಸಿ. ಕಡಿತವುಂಟಾಗುತ್ತದೆ.

ಮಳೆ ಚೆನ್ನಾಗಿ ಆಗಿಲ್ಲದ ವರ್ಷಗಳಲ್ಲಿ ಮೆಟ್ಟೂರು ಜಲಾಶಯದವರೆಗೆ ಕಾವೇರಿಯಲ್ಲಿ ಹರಿಯುವ ನೀರು ಸುಮಾರು ೩೩೪ ಟಿ.ಎಂ.ಸಿ. ಮಾತ್ರ ಇರುತ್ತದೆ. ಮಧ್ಯಂತರ ತೀರ್ಪಿನ ಪ್ರಕಾರ ೨೦೫ ಟಿ.ಎಂ.ಸಿ. ತಮಿಳುನಾಡಿಗೆ, ೭ ಟಿ.ಎಂ.ಸಿ. ಕೇರಳಕ್ಕೆ ಕೊಡಲೇಬೇಕಾಗಿ ಬಂದರೆ ಕರ್ನಾಟಕಕ್ಕೆ ಉಳಿಯುವುದು ೧೨೨ ಟಿ.ಎಂ.ಸಿ. ನೀರು ಮಾತ್ರ, ಅಂದರೆ ಅದರ ಬಳಕೆಯಲ್ಲಿ ೬೧% ಕಡಿತವುಂಟಾಗುತ್ತದೆ. ಅನಾವೃಷ್ಟಿಯ ವರ್ಷದಲ್ಲಿ ತಮಿಳುನಾಡಿಗೆ ಸುಮಾರು ೩೨೫ ಟಿ.ಎಂ.ಸಿ. ದೊರೆತಂತಾಗಿ ಅದರ ಬಳಕೆಯಲ್ಲಿ ಕೇವಲ ೩೦% ಖೋತಾ ಆಗುತ್ತದೆ. ಅಂದರೆ ನಷ್ಟದ ಪ್ರಮಾಣ ಕರ್ನಾಟಕದ ಮೇಲೆ ತೀವ್ರವಾಗಿ ಬೀಳುತ್ತದೆ.

ಎರಡನೆಯದಾಗಿ; ಮಳೆ ಚೆನ್ನಾಗಿದ್ದ ಕಳೆದ ಸಲದ ಮಳೆಗಾಲದಲ್ಲಿ ಕರ್ನಾಟಕ ೨೦೫ ಟಿ.ಎಂ.ಸಿ.ಗಿಂತ ಹೆಚ್ಚು ನೀರು ಬಿಡಲೂ ಇಲ್ಲ, ಅಥವಾ ತಮಿಳುನಾಡು ಕೂಡ ಆ ಸಮಯದಲ್ಲಿ ಕಾವೇರಿಯಲ್ಲಿ ಹರಿದ ಎಲ್ಲಾ ಹೆಚ್ಚುವರಿ ನೀರನ್ನು ಬಳಸಿಕೊಳ್ಳಲೂ ಇಲ್ಲ. ಅಂದರೆ ವಿವಾದ ಕೇಂದ್ರೀಕೃತವಾಗಿರುವುದು ಹೆಚ್ಚಾಗಿ ಕೆಟ್ಟ ಮಳೆಯ ವರ್ಷಗಳನ್ನು ಕುರಿತಂತೆ. ಅಂದರೆ ಈ ಕೆಟ್ಟ ಮಳೆಯ ವರ್ಷಗಳ ಸಾಧ್ಯತೆ ಎಷ್ಟು ಎಂಬುದನ್ನು ನೋಡಲು ಮಳೆ ಬೀಳುವುದರಲ್ಲಿರುವ ಏರುಪೇರುಗಳ ಅಂಕಿ ಅಂಶ ನೋಡಬೇಕು.

೧೯೩೬ರಿಂದ ೧೯೫೩ರ ವರೆಗೆ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೩೭ಸೆಂ.ಮೀ. ನಂತರದ ೧೨ ವರ್ಷಗಳಲ್ಲಿ ೨೫% ಹೆಚ್ಚಿತು. ಆದರೆ ೧೯೭೭ರಿಂದ ೧೯೮೭ರ ವರೆಗಿನ ಮಳೆಯ ಪ್ರಮಾಣ ೧೯೫೪ರಿಂದ ೬೫ ವರೆಗಿನ ಮಳೆಯ ಪ್ರಮಾಣಕ್ಕಿಂತ ೪೦% ಕಡಿಮೆ ಹಾಗೂ ೧೯೩೬-೫೩ರ ಪ್ರಮಾಣಕ್ಕೆ ಹೋಲಿಸಿದರೆ ೨೦% ಕಡಿಮೆಯಾಗಿದೆ. ಅಂದರೆ ಮಳೆಯ ಪ್ರಮಾಣದಲ್ಲಿ ಸರ್ವ ಸಾಧಾರಣತೆಯನ್ನು ಪಡೆಯುವುದು ಕಷ್ಟ.*

ಆದ್ದರಿಂದ ನಾವು ಸೂಚಿಸುವ ಮಧ್ಯಂತರ ಪರಿಹಾರ ಎಷ್ಟು ಟಿ.ಎಂ.ಸಿ. ನೀರು ಬಿಡಬೇಕು ಎಂಬುದರ ಬದಲಾಗಿ ಎಷ್ಟು ಶೇಕಡಾ ನೀರು ಬಿಡಬೇಕು ಎಂಬುದಾಗಿದ್ದರೆ ವೈಜ್ಞಾನಿಕವಾಗಿರುತ್ತದೆ. ಆಯಾ ವರ್ಷದ ಮಳೆಯಲ್ಲಿ ಸಂಗ್ರಹವಾದ ನೀರಿನ ಪ್ರಮಾಣದಲ್ಲಿ ಪ್ರತಿ ರಾಜ್ಯಕ್ಕೆ ತನ್ನ ಶೇಕಡಾವಾರು ಪ್ರಮಾಣದ ನೀರು ದೊರೆಯುತ್ತದೆ. ನಷ್ಟವಿದ್ದರೆ ಆ ಶೇಕಡಾವಾರಿನ ಅನುಸಾರ ನಷ್ಟವುಂಟಾಗುತ್ತದೆ ಎಲ್ಲರಿಗೂ.

ನಂತರದ ಸಮಸ್ಯೆ ಹಾಗಾದರೆ ಯಾರ್‍ಯಾರಿಗೆ ಎಷ್ಟೆಷ್ಟು ಪ್ರಮಾಣ (Ratio) ಎಂಬುದು.

೧೯೬೮ರಲ್ಲಿ ನವದೆಹಲಿಯಲ್ಲಿ ನಡೆದ ಅಂತರ್‍ರಾಜ್ಯ ಸಚಿವರ ಸಮ್ಮೇಳನದಲ್ಲಿ ಇಡೀ ಕಾವೇರಿ ಪ್ರದೇಶದ ಒಟ್ಟಾರೆ ಅಗತ್ಯಗಳನ್ನು ಆಧರಿಸಿ ಮಾಸ್ಟರ್ ಪ್ಲಾನ್ ಒಂದನ್ನು ತಯಾರಿಸಿ ಕರ್ನಾಟಕ ಮಂಡಿಸಿತು. ಈ ಮಾಸ್ಟರ್ ಪ್ಲಾನ್ ಆಧರಿಸಿ ಪ್ರತಿ ಕಣಿವೆ ರಾಜ್ಯವೂ ತನ್ನ ಅಭಿಪ್ರಾಯ ಮಂಡಿಸಿ ಆಗ ಕಾವೇರಿ ನೀರಿನ ಹಂಚಿಕೆ ಬಗ್ಗೆ ಒಪ್ಪಂದವೊಂದಕ್ಕೆ ಬರಲಾಯಿತು. ಆದರೆ ಸಹಿ ಹಾಕಿ ಅದನ್ನು ಜಾರಿಗೊಳಿಸಲಿಲ್ಲ. ಆ ಮಾಸ್ಟರ್ ಪ್ಲಾನ್‌ಅನ್ನು ಇಡೀ ಕಾವೇರಿ ಪ್ರದೇಶದ ಅಗತ್ಯಗಳಿಗಾಗಿ ನೀರು ಹಂಚಿಕೆಯ ಪ್ರಮಾಣ ನಿಗದಿಸುವುದಕ್ಕೆ ಮಾರ್ಗದರ್ಶಕವಾಗಿ ಅಲ್ಲದಿದ್ದರೂ ಪರಿಶೀಲನಾಂಶವಾಗಿ ತೆಗೆದುಕೊಳ್ಳಬಹುದು.

ಹಲವಾರು ತಜ್ಞರಿಂದ ಪ್ರಶಂಸೆಗೊಳಗಾಗಿದ್ದ ಈ ಮಾಸ್ಟರ್ ಪ್ಲಾನ್ ಮೂಲಕ ಇಡೀ ಕಾವೇರಿ ಕಣಿವೆಯಲ್ಲಿ ೫೭% ಪ್ರದೇಶದಲ್ಲಿ ನೀರಾವರಿ ಬೆಳೆ ತೆಗೆಯುವಂತಾಗುತ್ತಿತ್ತು. ಕರ್ನಾಟಕದಲ್ಲಿ ಇದ್ದ ೧೧%

* ಡಿ. ನಾರಾಯಣ, ಅಭಿವೃದ್ಧಿ ಅಧ್ಯಯನ ಸಂಸ್ಥೆ, ತ್ರಿವೇಂದ್ರಂ, ೧೯೯೨

ನೀರಾವರಿ ಬೆಳೆ ಪ್ರದೇಶ ಇದರ ಪ್ರಕಾರ ೪೯%ಕ್ಕೆ ಏರುತ್ತಿತ್ತು. ತಮಿಳುನಾಡಿನಲ್ಲಿ ೨೯% ಇದ್ದ ನೀರಾವರಿ ಬೆಳೆ ಪ್ರದೇಶ ೬೦% ಕ್ಕೆ ಏರುತ್ತಿತ್ತು.

ಇವನ್ನು ಸ್ಥೂಲವಾಗಿ ಆಯಾ ರಾಜ್ಯವು ಸಮುಚಿತವಾಗಿ ಇಷ್ಟಪಡಬಹುದಾದ ಪ್ರಗತಿಯಾಗಿ ನಾವು ಭಾವಿಸಬಹುದು.

ಇದನ್ನೇ ನಮ್ಮ ಮಧ್ಯಂತರ ಪರಿಹಾರ ಸೂಚನೆಯ ಪರಿಣಾಮವಾಗಿ ತೆಗೆದುಕೊಳ್ಳಬಹುದು. ಅಥವಾ ಇನ್ನೂ ಖಚಿತವಾಗಿ ಕರ್ನಾಟಕ ಹಾಗೂ ತಮಿಳುನಾಡಿನ ಸರ್ಕಾರಗಳು ಕಾವೇರಿ ನೀರು ಹಂಚಿಕೆಯ ಕೊನೆಯ ಸುತ್ತಿನ ಮಾತುಕತೆಯಲ್ಲಿ ತಮ್ಮ ರಾಜ್ಯದ ಅಗತ್ಯಗಳೆಂದು ಸೂಚಿಸಿದ ನೀರಿನ ಪ್ರಮಾಣವನ್ನು ಶೇಕಡಾವಾರಿಗೆ ಪರಿವರ್ತಿಸಿ ಪರಿಮಾಣ ನಿಗದಿಪಡಿಸಬಹುದು. ಮಾಸ್ಟರ್ ಪ್ಲಾನಿನ ಸೂಚನೆಗಳಿಗೂ ಇದಕ್ಕೂ ಅಂತಹ ಮೌಲಿಕ ವ್ಯತ್ಯಾಸವೇನಿಲ್ಲದಿದ್ದರೂ, ಮಾಸ್ಟರ್ ಪ್ಲಾನ್ ಎಲ್ಲರಿಂದ ಸಹಿಯಾಗಿ ಅಧಿಕೃತಗೊಳ್ಳಲಿಲ್ಲವಾದ್ದರಿಂದ ಇದು ಎಲ್ಲರ ಸ್ವಯಂ ಸೂಚನೆ ಎಂದು ಪರಿಗಣಿಸುವುದು ತಾಂತ್ರಿಕವಾಗಿ ಕಷ್ಟ. ಆದರೆ ಮಾತುಕತೆಗಳಲ್ಲಿ ಆಯಾ ರಾಜ್ಯ ಸರ್ಕಾರಗಳೇ ಮುಂದಿಟ್ಟ ನೀರಿನ ಬೇಡಿಕೆಯನ್ನು ಆಯಾ ಸರ್ಕಾರಗಳ ಅಧಿಕೃತ ಅಭೀಷ್ಟವೆಂದು ಕರೆದರೆ ತಪ್ಪಾಗುವುದಿಲ್ಲ.

ಕರ್ನಾಟಕ ತನ್ನ ನೀರಿನ ಅಗತ್ಯವೆಂದು ೪೬೫ ಟಿ.ಎಂ.ಸಿ. ಸೂಚಿಸಿದೆ. ತಮಿಳುನಾಡು ತನ್ನ ಅಗತ್ಯವೆಂದು ೫೬೬ ಟಿ.ಎಂ.ಸಿ. ನೀರು ಸೂಚಿಸಿದೆ. ಇದು ಒಟ್ಟಾರೆ ೧೦೩೧ ಟಿ.ಎಂ.ಸಿ.ಯಾಗುತ್ತದೆ. ಇಷ್ಟು ಪ್ರಮಾಣದ ನೀರು ಕಾವೇರಿಯಲ್ಲಿ ಹರಿಯುವಂತಾದರೆ ಅವರವರ ಬೇಡಿಕೆಯ ಪ್ರತಿ ಪಾಲನ್ನು ಪಡೆಯಬಹುದಿತ್ತು. ಆದರೆ ಕಾವೇರಿ ನಿರು ಒಟ್ಟಾರೆ ಹರಿಯುವುದು ಸರಾಸರಿ ವಾರ್ಷಿಕ ೭೪೦ ಟಿ.ಎಂ.ಸಿ. ಮಾತ್ರ, ಆದ್ದರಿಂದ ಇರುವ ನೀರಿನಲ್ಲೆ ಹಂಚಿಕೊಳ್ಳಬೇಕಾದ ಭೌತಿಕ ನಿರ್ಬಂಧವನ್ನು ಪ್ರಕೃತಿ ವಿಧಿಸಿದೆ. ಇದನ್ನು ಮೀರಲು ಬಹುಶಃ ಸದ್ಯಕ್ಕೆ ಯಾವ ರಾಜ್ಯಕ್ಕೂ ಸಾಧ್ಯವಿಲ್ಲ. ಈಗ ಅವರವರ ಗರಿಷ್ಠ ಬೇಡಿಕೆಯನ್ನು ಶೇಕಡಾವಾರಾಗಿ ಪರಿವರ್ತಿಸಿದರೆ ಕಾವೇರಿಯಲ್ಲಿ ಲಭ್ಯವಿರುವ ನೀರಿನಲ್ಲಿ ಕರ್ನಾಟಕ ೪೫.೧೫% ಬಳಸಬಹುದು, ತಮಿಳುನಾಡು ೫೪.೮೫% ನೀರನ್ನು ಬಳಸಬಹುದು.

ಕೇರಳ ಹಾಗೂ ಪಾಂಡಿಚೇರಿಗಳು ಈ ಮೊದಲು ಬಳಸುತ್ತಿದ್ದ ನೀರಿನ ಪ್ರಮಾಣವನ್ನೇ ಶೇಕಡಾವಾರಾಗಿ ಪರಿವರ್ತಿಸಿ ಅವರ ಪಾಲನ್ನು ತೆಗೆದು, ಉಳಿದ ನೀರಿನಲ್ಲಿ ಕರ್ನಾಟಕ, ತಮಿಳುನಾಡು ಈ ಶೇಕಡಾವಾರನ್ನು ನಿಗದಿಪಡಿಸಬೇಕು.

ಈ ಶೇಕಡಾವಾರು ಹಂಚಿಕೆಯ ಪ್ರಕಾರ ಕಾವೇರಿಯಲ್ಲಿ ನೀರಿನ ಹರಿವು ೭೪೦ ಟಿ.ಎಂ.ಸಿ. ಇದ್ದಾಗ ಕರ್ನಾಟಕಕ್ಕೆ ಅದು ಈಗ ಬಳಸುತ್ತಿರುವ ೩೧೭ ಟಿ.ಎಂ.ಸಿ. ನೀರಿಗೆ ಬದಲಾಗಿ ೩೫೬.೬ ಟಿ.ಎಂ.ಸಿ. ನೀರು ದೊರೆಯುತ್ತದೆ. ಮತ್ತು, ಇದರಲ್ಲಿ ೨ ಟಿ.ಎಂ.ಸಿ.ಯನ್ನು ಕೇರಳಕ್ಕೆ ಕೊಟ್ಟ ನಂತರ ಮಿಗುವ ಹೆಚ್ಚುವರಿ ೩೭.೬ ಟಿ.ಎಂ.ಸಿ. ನೀರನ್ನು ಬಳಸಿದರೆ – ಸರ್ಕಾರಿ ಮೂಲಗಳ ಲೆಕ್ಕಾಚಾರದ ಪ್ರಕಾರ ೧ ಟಿ.ಎಂ.ಸಿ. ನೀರಿನಿಂದ ೧೧,೦೦೦ ಎಕರೆಗೆ ನೀರುಣಿಸಬಹುದಾದರೆ, ಈ ಮಧ್ಯಂತರ ಪರಿಹಾರದ ಅವಧಿಯಲ್ಲೆ ೪,೧೩,೦೦೦ ಎಕರೆಯಷ್ಟು ಹೆಚ್ಚು ಭೂಮಿಗೆ ನೀರಾವರಿ ಕಲ್ಪಿಸಬಹುದು.

ಅಥವಾ ೧ ಟಿ.ಎಂ.ಸಿ. ನೀರಿನಿಂದ ೧೧ ಸಾವಿರ ಎಕರೆಗೆ ನೀರೊದಗಿಸುವುದು ಕಾರ್ಯತಃ ಕಷ್ಟ ಎಂದಾದರೆ, ಕನಿಷ್ಠ ೧ ಟಿ.ಎಂ.ಸಿ.ಯಿಂದ ೬,೦೦೦ ಎಕರೆಗೆ ನೀರುಣಿಸಿದರೂ, ೨,೨೫,೬೦೦ ಎಕರೆಗೆ ಹೊಸದಾಗಿ ನೀರಾವರಿ ವಿಸ್ತರಿಸಬಹುದಾಗಿರುತ್ತದೆ.

ದೀರ್ಘಕಾಲಿಕ ಪರಿಹಾರ ಜಾರಿಯಾಗುವವರೆಗೆ ನೀರು ಹಂಚಿಕೆಯನ್ನು ಅಮಾನತ್ತಿನಲ್ಲಿಡಲಾಗುವುದಿಲ್ಲವಾದ್ದರಿಂದ ಬಿಕ್ಕಟ್ಟಿನ ತಕ್ಷಣದ ಪರಿಹಾರವಾಗಿ ನಾವು ಈ ಶೇಕಡಾವಾರು ಪರಿಣಾಮವನ್ನು ಮಧ್ಯಂತರ ಪರಿಹಾರವಾಗಿ ಸೂಚಿಸುತ್ತಿದ್ದೇವೆ.

ಕೃಪೆ : ಕಾವೇರಿ ವಿವಾದದ ಜಲ ಅಥವಾ ವಿಭೇದದ ಜಾಲ? (೧೯೯೨) ಕರ್ನಾಟಕ ವಿಮೋಚನಾರಂಗ

ವಿ.ಸೂ. : 'ಕಾವೇರಿ – ವಿವಾದದ ಜಲ ಅಥವಾ ವಿಭೇದದ ಜಾಲ' ಪುಸ್ತಕದಲ್ಲಿ ನೀರಿನ ಬಳಕೆ, ಲಭ್ಯತೆ ಹಾಗೂ ಇತರೆ ಅಂಶಗಳ ಬಗ್ಗೆ ನಾವು ಬಳಸಿರುವ ಅಂಕಿ ಅಂಶಗಳನ್ನು ಯಾವ ಮೂಲದಿಂದ ಬಳಸಿಕೊಂಡಿದ್ದೇವೆ ಎಂಬುದನ್ನು ಸೂಚಿಸಿದ್ದೇವೆ. ಆ ಅಂಕಿಅಂಶಗಳ ಆಧಾರದಲ್ಲಿ ನಾವು ಈ ನಿರ್ಣಯಗಳಿಗೆ ತಲುಪಿದ್ದೇವೆ. ಆ ಅಂಕಿ ಅಂಶಗಳ ಅಧಿಕೃತತೆಗೆ ಮೂಲಗ್ರಂಥಗಳೇ ಹೊಣೆ. ❑

ದೊರಕಬೇಕಾದ ನ್ಯಾಯ

(ಕಾವೇರಿ ಕಣಿವೆಯ ಸಮಗ್ರ ಅಭ್ಯುದಯ ಯೋಜನೆ)

ಎಸ್.ಜಿ. ಬಾಳೇಕುಂದ್ರಿ

ಎಲ್ಲ ರಾಜ್ಯಗಳ ಹಿತಗಳನ್ನು ಕಾಪಾಡಬಲ್ಲ ಒಂದು ಯೋಜನೆಯನ್ನು ರೂಪಿಸಲಾಗಿದೆ. ಇದರ ಮುಖ್ಯ ಅಂಶಗಳೆಂದರೆ:

೧) ಶೇ. ೫೦ ಅವಲಂಬಿತ ಜಲಸಂಪತ್ತನ್ನು ಜಲಾನಯನದ ಭೂಜಲ ನಿಧಿಯ ಪ್ರಾತಿನಿಧ್ಯದ ಪ್ರಮಾಣದಲ್ಲಿ ಆಯಾ ರಾಜ್ಯಗಳಿಗೆ ಹಂಚುವುದು. ಇಂಥ ಜಲ ಸಂಪತ್ತಿನಲ್ಲಿ ಕಾವೇರಿಯ ಮುಖಜ (ಡೆಲ್ಟಾ)ದ ಮೇಲೆ ಬೀಳುವ ೩೨೮ ಟಿ.ಎಂ.ಸಿ. ಮಳೆಯಿಂದ ಲಭಿಸುವ ಪ್ರವಾಹವನ್ನೂ ಕೂಡಿಸಬೇಕು.

೨) ತಮ್ಮ ನ್ಯಾಯಯುತ ನೀರಿನ ಪಾಲು ಸಾಕಾಗದಿದ್ದ ಪಕ್ಷದಲ್ಲಿ, ಆಯಾ ರಾಜ್ಯಗಳು (೧) ತಮ್ಮಲ್ಲಿ ಪೋಲಾಗುತ್ತಿರುವ ಜಲಸಂಪತ್ತು ಹಾಗೆ ಪೋಲಾಗುತ್ತಿರುವುದನ್ನು ತಪ್ಪಿಸಿ ಅದನ್ನು ಬಳಕೆಗೆ ತರಬಹುದು. ಮತ್ತು/ಅಥವಾ (೨) ನೀರಿನ ಬಳಕೆಯಲ್ಲಿ ಮಿತವ್ಯಯ ಸಾಧಿಸತಕ್ಕದ್ದು. (೩) ಅಂತರ್ಜಲದ ಬಳಕೆಯನ್ನು ಅನುಷ್ಠಾನಗೊಳಿಸಬಹುದು. ಮತ್ತು (೪) ಕ್ಯಾರಿಓವರ್ ಶೇಖರಣೆಯ ಲಾಭ ಪಡೆಯಬಹುದು. ಇಂಥ ಯೋಜನೆಯೊಂದನ್ನು ಮಾನ್ಯ ಪ್ರಧಾನ ಮಂತ್ರಿಗಳಿಗೆ ಅರ್ಪಿಸಲಾಗಿದೆ. ಅದರ ತಪಶೀಲು:

೧) ಮೊದಲ ಹಂತ : ೧೯೯೨-೯೬

ಅ) ವೈಜ್ಞಾನಿಕ ಕೃಷಿ ಪದ್ಧತಿಗಳನ್ನು ಬಳಸಿ ನೀರನ್ನು ಹಿತವಾಗಿ ಮಿತವಾಗಿ ಬಳಸಿದ್ದರಿಂದ ೧೯೮೯-೯೦ರಲ್ಲಿ ಮುಖಜದಲ್ಲಿ ಭತ್ತದ ಉತ್ಪಾದನೆ ದ್ವಿಗುಣಗೊಂಡಿತು. ಮೆಟ್ಟೂರಿನಲ್ಲಿ ಆಗ ಬಂದ ನೀರು ೧೭೬ ಟಿ.ಎಂ.ಸಿ. ಆದ್ದರಿಂದ ಈಗಿನ ಪರಿಸ್ಥಿತಿಯಲ್ಲಿ ಮೆಟ್ಟೂರಿಗೆ ಸರಾಸರಿ ವರ್ಷದಲ್ಲಿ ಬೇಕಾದ ನೀರು ೧೭೬ ಇದ್ದರೆ ಸಾಕು. ತತ್ಪರಿಣಾಮವಾಗಿ ಮೆಟ್ಟೂರಿನ ಮೇಲಿನ ಜಲಾನಯನಕ್ಕೆ ಉಳಿಯುವ ನೀರು ೫೦೩-೧೭೬=೩೨೭ ಟಿ.ಎಂ.ಸಿ. (ಕೇರಳ – ೪, ಕರ್ನಾಟಕ – ೩೧೯ ಮತ್ತು ತಮಿಳುನಾಡು – ೪)

ಆ) ಈ ಅವಧಿಯಲ್ಲಿ ತಮಿಳುನಾಡು ಗ್ರಾಂಡ್ ಅಣೆಕಟ್ಟೆಯ ಮೇಲ್ಗಡೆಗೆ ೨ ಟಿ.ಎಂ.ಸಿ. ಸಂಚಯ ಸಾಮರ್ಥ್ಯದ ಅಣೆಕಟ್ಟು ನಿರ್ಮಿಸಿ ಪ್ರತಿ ವರ್ಷ ೫೦ ಟಿ.ಎಂ.ಸಿ. ನೀರಿನ ಪೋಲನ್ನು ತಪ್ಪಿಸಬೇಕು.

ಇ) ಅದರಂತೆಯೇ ಭವಾನಿ, ಅಮರಾವತಿ, ನೋಯಿಲ್ ನದಿಗಳ ಮೇಲೆ ಅವುಗಳ ಸಂಗಮಗಳ ಸಮೀಪವಾಗಿ ೧೫ ಟಿ.ಎಂ.ಸಿ. ಗಾತ್ರದ ಜಲಾಶಯಗಳನ್ನು ನಿರ್ಮಿಸಿ ಪ್ರತಿವರ್ಷ ಕೊಲ್ಲೇರುವಿನಿಂದ ನೆರೆಯ ರೂಪದಲ್ಲಿ ಪೋಲಾಗುವ ಸುಮಾರು ೩೦ ಟಿ.ಎಂ.ಸಿ. ನೀರನ್ನು ಹಿಡಿದಿಟ್ಟುಕೊಳ್ಳಬೇಕು.

ಈ) ಬೆಂಗಳೂರು ನೀರು ಸರಬರಾಜು ಯೋಜನೆಯನ್ನೊಳಗೊಂಡಂತೆ ಮೇಕೆದಾಟು – ಹೊಗೇನಕಲ್ ಜಲ ವಿದ್ಯುತ್ ಯೋಜನೆಗಳನ್ನು ಪ್ರಾರಂಭಿಸಬೇಕು. ಮತ್ತು ಕ್ರಿ.ಶ. ೨,೦೦೦ದ ಹೊತ್ತಿಗೆ ಮುಗಿಸತಕ್ಕದ್ದು.

೨) ಎರಡನೇ ಹಂತ : ೧೯೯೬-೨೦೦೦

ಅ) ಮೇಲ್ಕಂಡ (ಅ) ಯೋಜನೆಯು ಕಾರ್ಯಗತವಾಗಿ ೫೦+೩೦=೮೦ ಟಿ.ಎಂ.ಸಿ. ನೀರು ಪೋಲಾಗುವುದು ನಿಂತು ಅದು ಡೆಲ್ಟಾಕ್ಕೆ ಲಭ್ಯವಾಗುವುದರಿಂದ ಮೆಟ್ಟೂರಿನಲ್ಲಿ ಸಿಗಬೇಕಾದ ನೀರು ೧೭೬-೮೦=೯೬ಕ್ಕೆ ಇಳಿಯುತ್ತದೆ. ಆದ್ದರಿಂದ ಮೆಟ್ಟೂರಿನ ಮೇಲ್ಗಡೆ ಬಳಸಬಹುದಾದ ನೀರಿನ ಪ್ರಮಾಣ ೫೦೩-೯೬=೪೦೭ಕ್ಕೆ ಏರುತ್ತದೆ. ಇದನ್ನು ಕೆಳಗಿನಂತೆ ಬಳಸಬಹುದು.

೧) ಕೇರಳ	೨೫ ಟಿ.ಎಂ.ಸಿ.
೨) ತಮಿಳುನಾಡು	೪ ಟಿ.ಎಂ.ಸಿ.

೩) ಕರ್ನಾಟಕ:

ಅ) ನೀರಾವರಿ ೩೬೨ ಟಿ.ಎಂ.ಸಿ.

ಆ) ನೀರು ಸರಬರಾಜು ೧೬ ಟಿ.ಎಂ.ಸಿ.

(ಬಿ.ಡಬ್ಲ್ಯುಎಸ್.ಎಸ್.ಬಿ. ಇತರೆ

ಒಟ್ಟು ೪೦೭ ಟಿ.ಎಂ.ಸಿ.

ಆ) ಕ್ರಿ.ಶ. ೨೦೦೦ಕ್ಕೆ ಮೇಕೆದಾಟು ಹೊಗೇನಕಲ್ ಯೋಜನೆಗಳು ಪ್ರರ್ತಿಗೊಳ್ಳತಕ್ಕದ್ದು.

೩) ಮೂರನೇ ಹಂತ : ಕ್ರಿ.ಶ. ೨೦೦೦-೨೦೦೫

ಈ ಹಂತದಲ್ಲಿ ಡೆಲ್ಟಾ ಪ್ರದೇಶದಲ್ಲಿದ್ದ ೩೭೮ ಟಿ.ಎಂ.ಸಿ. ಮಳೆ ನೀರಿನಿಂದ ಲಭಿಸುವ ಪ್ರವಾಹದ ಅಂದಾಜನ್ನು ನಿಗದಿಪಡಿಸಿ ಅದನ್ನು ನ್ಯಾಯಯುತ ಪಾಲುಗಳಲ್ಲಿ ಸೇರ್ಪಡೆ ಮಾಡುವುದು.

೪) ಕ್ಷಾಮ (ಅಭಾವ) ಪರಿಸ್ಥಿತಿಯನ್ನು ಎದುರಿಸುವ ಪರಿ:

ಶೇ. ೫೦ ವರ್ಷಗಳಲ್ಲಿ ಸರಾಸರಿಗಿಂತ ಕಡಿಮೆ ನೀರು ಲಭಿಸುವುದು. ಈ ಪರಿಸ್ಥಿತಿಯನ್ನು ಆಯಾ ರಾಜ್ಯಗಳು ನೈಸರ್ಗಿಕ ರೀತಿಯಲ್ಲಿಯೇ ಎದುರಿಸತಕ್ಕದ್ದು. ಅಂದರೆ ಸೆಪ್ಟಂಬರ್ ನಂತರ ಜಲ ಸಂಚಯನಗಳನ್ನು ಪರಿಶೀಲಿಸಿ ೨ನೇ ಬೆಳೆಯ ರೂಪರೇಷೆಗಳನ್ನು ನಿರ್ಣಯಿಸತಕ್ಕದ್ದು. ಅಂದರೆ ನೀರಿನ ಲಭ್ಯತೆಯ ಪ್ರಕಾರ ಆಯಾ ಬೆಳೆಗಳ ವ್ಯಾಪ್ತಿಯನ್ನು ನಿರ್ಣಯಿಸತಕ್ಕದ್ದು. ತಮಿಳುನಾಡಿನ ಮುಖಜ ಪ್ರದೇಶಕ್ಕೆ ಹೆಚ್ಚು ಕೊರತೆ ಆಗಲಾರದು. ಏಕೆಂದರೆ ಮೇಕೆದಾಟು – ಹೊಗೇನಕಲ್ಲು – ಮೆಟ್ಟೂರುಗಳಲ್ಲಿಯ ೨೪೦ ಟಿ.ಎಂ.ಸಿ. ಜಲಶೇಖರಣೆಯಿಂದ ಕ್ಯಾರಿಓವರ್ ಲಾಭವಾಗುವುದು. ಅದರಿಂದ ಅತಿವೃಷ್ಟಿಯ ವರ್ಷಗಳಲ್ಲಿಯ ನೀರು ಅನಾವೃಷ್ಟಿಯ ವರ್ಷಗಳಿಗೆ ವರ್ಗಾಯಿಸಲ್ಪಡುತ್ತದೆ. ವಿದ್ಯುತ್ ಉತ್ಪತ್ತಿ ಹಾಗೂ ನೀರಾವರಿಗೂ ಕೊರತೆಯಾಗುವುದಿಲ್ಲ. ಹೀಗಾಗಿ ಮುಖಜ ಪ್ರದೇಶದ ಪರಿಸ್ಥಿತಿ ಅಷ್ಟೊಂದು ಉಲ್ಬಣಗೊಳ್ಳಲಾರದು. ಅಲ್ಲದೆ ಅಲ್ಲಿಯ ಅಂತರ್ಜಲವನ್ನೂ ಮಳೆಯನ್ನೂ ಪ್ರರಕವಾಗಿ ಬಳಸುವುದೂ ಸಾಧ್ಯ.

ಇಷ್ಟಿದ್ದರೂ ಏನಾದರೂ ಸಂಕಷ್ಟಕಾಲೀನ ಜಲಸಹಾಯವು ಮುಖಜ ಪ್ರದೇಶಕ್ಕೆ ಬೇಕಾದ ಸಂದರ್ಭದಲ್ಲಿ ಅಂಥ ಸಹಾಯದ ಶೇಕಡ ೩೦ ರಷ್ಟು ತಮಿಳುನಾಡಿನಿಂದ ಮೊದಲು ಒದಗಬೇಕು. ತಮಿಳುನಾಡಿನಿಂದ ಬರುವ ನೀರು ಶೇಕಡ ೩೦.

ಕೃಪೆ : ಕನ್ನಡ ಶಕ್ತಿ ಕೇಂದ್ರ, ಬೆಂಗಳೂರು

❑

ಕಾವೇರಿ ನದಿ ನೀರಿನ ನ್ಯಾಯಾಧಿಕರಣ

ಅಂತಿಮ ಆದೇಶ

ನ್ಯಾಯಾಧಿಕರಣವು ಈ ಕೆಳಕಂಡ ತನ್ನ ಅಂತಿಮ ಆದೇಶವನ್ನು ನೀಡುತ್ತದೆ :

೧) ನ್ಯಾಯಾಧಿಕರಣದ ಈ ಆದೇಶವು ಕಾಲಕಾಲಕ್ಕೆ ಬದಲಾವಣೆಯಾದ ೧೯೫೬ನೇ ಅಂತರ್‌ರಾಜ್ಯ ನೀರು ಹಂಚಿಕೆ ವಿವಾದ ಕಾಯ್ದೆಯಡಿಯ ೬ನೇ ವಿಭಾಗದ ಪ್ರಕಾರ ಸರ್ಕಾರಿ ವೃತ್ತ ಪತ್ರಿಕೆಯಲ್ಲಿ ಅಧಿಕೃತವಾಗಿ ಪ್ರಕಟವಾದ ತಾರೀಖಿನಿಂದ ಜಾರಿಗೆ ಬರುತ್ತದೆ.

೨) ೧೮೯೨ ಮತ್ತು ೧೯೨೪ನೇ ವರ್ಷಗಳಲ್ಲಿ ಆದ ಒಪ್ಪಂದಗಳು ೧೮೯೨ನೇ ಮತ್ತು ೧೯೨೪ನೇ ವರ್ಷಗಳಲ್ಲಿ ಆಗ ಅಧಿಕಾರ ನಡೆಸುತ್ತಿದ್ದ ಮೈಸೂರು ಮತ್ತು ಮದ್ರಾಸ್ ಸರ್ಕಾರಗಳ ನಡುವೆ ವಿಶೇಷವಾಗಿ ೧೧೦ ಮತ್ತು ೮೦ ವರ್ಷಗಳು ಕ್ರಮವಾಗಿ ಕಳೆದ ಮೇಲೆ ಏರ್ಪಟ್ಟಿದ್ದ ಒಪ್ಪಂದಗಳನ್ನು ಅಸಿಂಧು ಎಂದು ಪರಿಗಣಿಸಲಾಗದು.

ಈ ಎರಡು ಒಪ್ಪಂದಗಳು ಏರ್ಪಡುವ ಮೊದಲು ಮದ್ರಾಸ್ ಮತ್ತು ಮೈಸೂರು ಸರ್ಕಾರಗಳ ನಡುವೆ ಸಂಪೂರ್ಣ ಪರ್ಯಾಲೋಚನೆ ನಡೆದಿತ್ತು. ಹೀಗಾಗಿ ೧೯೨೪ರ ಒಪ್ಪಂದವು ೧೯೭೪ರ ನಂತರ ಕೆಲವು ವಾಕ್ಯಾಂಗಗಳ ಪುನರ್ವಿಮರ್ಶೆಗೆ ಅವಕಾಶ ಕಲ್ಪಿಸಿದೆ. ಅದರಂತೆ ನಾವು ಆ ಒಪ್ಪಂದದ ಅನೇಕ ಮುನ್ನೇರ್ಪಾಡುಗಳನ್ನು ನ್ಯಾಯ ಮತ್ತು ಸಮಾನ ಹಂಚಿಕೆಗನುಗುಣವಾಗಿ ಪುನರ್ ಪರೀಕ್ಷಿಸಿದ್ದೇವೆ.

೩) (ಅ) ಮದ್ರಾಸ್ ಸರ್ಕಾರ ಮತ್ತು ಮೈಸೂರು ಸರ್ಕಾರಗಳ ನಡುವೆ ಕಾವೇರಿ ನದಿ ನೀರಿನ ಹಂಚಿಕೆ ವ್ಯವಸ್ಥೆಗೆ ಸಂಬಂಧಿಸಿದಂತೆ ಏರ್ಪಟ್ಟಿದ್ದ ೧೮೯೨ರ ಒಪ್ಪಂದವನ್ನು ನ್ಯಾಯಾಧಿಕರಣದ ಈ ಆದೇಶವು ಚ್ಯುತಿಗೊಳಿಸುತ್ತದೆ.

(ಆ) ಮದ್ರಾಸ್ ಸರ್ಕಾರ ಮತ್ತು ಮೈಸೂರು ಸರ್ಕಾರದ ನಡುವೆ ಕಾವೇರಿ ನದಿ ನೀರಿನ ಹಂಚಿಕೆಯ ವ್ಯವಸ್ಥೆಗೆ ಸಂಬಂಧಿಸಿದಂತೆ ಏರ್ಪಟ್ಟಿದ್ದ ೧೯೨೪ರ ಒಪ್ಪಂದವನ್ನು ನ್ಯಾಯಾಧಿಕರಣದ ಈ ಆದೇಶವು ಚ್ಯುತಿಗೊಳಿಸುತ್ತದೆ.

೪) ಕಾವೇರಿ ನದಿಯ ಕೆಳಭಾಗದ ಕೊಲೆರೂನ್ ಜಲಾಶಯ ಪ್ರದೇಶದಲ್ಲಿ ಉಪಯೋಗವಾಗುವ ಶೇ. ೫೦% ಭಾಗದ ಅವಲಂಬನಾರ್ಹ ನೀರಿನ ಪ್ರಮಾಣವನ್ನು ೭೪೦ ಸಾವಿರ ಮಿಲಿಯನ್ ಘನ ಅಡಿ (ಟಿ.ಎಂ.ಸಿ.) (೨೦೯೫೪ M^3)ಗೆ ಮಿತಿಗೊಳಿಸುತ್ತದೆ.

೫) ಕೇರಳ, ಕರ್ನಾಟಕ, ತಮಿಳುನಾಡು ಮತ್ತು ಕೇಂದ್ರಾಡಳಿತ ಪ್ರದೇಶವಾದ ಪಾಂಡಿಚೇರಿಯ ನಡುವೆ ಅನುಕೂಲಕರ ಉಪಯೋಗಕ್ಕಾಗಿ ಕಾವೇರಿ ನದಿ ನೀರಿನ ಹಂಚಿಕೆಯ ಪ್ರಮಾಣವು ಈ ರಾಜ್ಯಗಳ ನಡುವೆ ಈ ಕೆಳಗೆ ನಮೂದಿಸಿರುವಂತೆ ಇರತಕ್ಕದ್ದೆಂದು ನ್ಯಾಯಾಧಿಕರಣವು ಈ ಮೂಲಕ ಆದೇಶಿಸುತ್ತದೆ.

೧.	ಕೇರಳ ರಾಜ್ಯ	೩೦ ಟಿ.ಎಂ.ಸಿ.	
೨.	ಕರ್ನಾಟಕ ರಾಜ್ಯ	೨೭೦ ಟಿ.ಎಂ.ಸಿ.	
೩.	ತಮಿಳುನಾಡು ರಾಜ್ಯ	೪೧೯ ಟಿ.ಎಂ.ಸಿ.	
೪.	ಕೇಂದ್ರಾಡಳಿತ ಪಾಂಡಿಚೇರಿ	೭ ಟಿ.ಎಂ.ಸಿ.	**೭೨೬ ಟಿ.ಎಂ.ಸಿ.**

ಇದರ ಜೊತೆಗೆ (೧) ಪರಿಸರ ರಕ್ಷಣೆ ಮತ್ತು
(೨) ಅಪರಿಹಾರ್ಯವಾಗಿ ಸಮುದ್ರದ ಪಾಲಾಗುವ
ನೀರಿಗಾಗಿ ಈ ಕೆಳಕಂಡಂತೆ ಸ್ವಲ್ಪ ಪ್ರಮಾಣದ
ನೀರನ್ನು ನಾವು ಮೀಸಲಿಟ್ಟಿದ್ದೇವೆ.

೧.	ಪರಿಸರ ರಕ್ಷಣೆಗಾಗಿ ಮೀಸಲಿಟ್ಟ ಪ್ರಮಾಣ	೧೦ ಟಿ.ಎಂ.ಸಿ.	
೨.	ಅನಿವಾರ್ಯವಾಗಿ ಸಮುದ್ರದ ಪಾಲಾಗುವ ನೀರಿನ ಪ್ರಮಾಣ	೪ ಟಿ.ಎಂ.ಸಿ.	೧೪ ಟಿ.ಎಂ.ಸಿ.
		ಒಟ್ಟು ಮೊತ್ತ	**೭೪೦ ಟಿ.ಎಂ.ಸಿ.**

೬) ಕೇರಳ ರಾಜ್ಯಕ್ಕೆ ೩೦ ಟಿ.ಎಂ.ಸಿ. ನೀರನ್ನು ಹಂಚಲಾಗಿದೆ ವಿವಿಧ ಉಪನದಿಗಳ ರೇವು ಪ್ರದೇಶದ ಈ ಹಂಚಿಕೆ ಹೀಗಿದೆ.

೧.	ಕಬಿನಿ ನದಿದಂಡೆ (ಉಪರೇವು)		೨೧ ಟಿ.ಎಂ.ಸಿ.
೨.	ಭವಾನಿ	–"–	೬ ಟಿ.ಎಂ.ಸಿ.
೩.	ಪಾಂಬರ್	–"–	೩ ಟಿ.ಎಂ.ಸಿ.

೭) ದುರ್ಭಿಕ್ಷ್ಯ (ದುಸ್ತರ ಸಂದರ್ಭದಲ್ಲಿ) ಕಾಲದಲ್ಲಿ ಕಾವೇರಿ ನದಿದಂಡೆ ಪ್ರದೇಶದಲ್ಲಿ ಮಳೆಯ ಪ್ರಮಾಣವು ಕಡಿಮೆಯಾದಲ್ಲಿ ಕೇರಳ, ಕರ್ನಾಟಕ, ತಮಿಳುನಾಡು ಮತ್ತು ಕೇಂದ್ರಾಡಳಿತ ಪ್ರದೇಶದ ಪಾಂಡಿಚೇರಿ ನೀರಿನ ಹಂಚಿಕೆಯು ಅನುಪಾತ ಪ್ರಮಾಣದಲ್ಲಿ ಕಡಿಮೆಯಾಗಬೇಕು.

೮) ನೀರಿನ ಬಿಡುಗಡೆಯನ್ನು ನಿಯಂತ್ರಿಸಲು ಈ ಕೆಳಕಂಡ ಅಂತರ್‌ರಾಜ್ಯದ ಸಂಪರ್ಕ ಸ್ಥಳಗಳನ್ನು ಗುರುತುಪಡಿಸಲಾಗಿದೆ

೧. ಕೇರಳ ಕರ್ನಾಟಕಗಳ ಮಧ್ಯೆ	ಕಬಿನಿ ಅಣೆಕಟ್ಟು ಪ್ರದೇಶ
೨. ಕೇರಳ ಮತ್ತು ತಮಿಳುನಾಡು	
ಅ. ಭವಾನಿ ನದಿನಂಡೆ ವರದಿ ಲಭ್ಯವಿರುವಂತೆ ಈ ಹಿಂದೆ ಕೇರಳ ರಾಜ್ಯದಿಂದ ನಿಯಂತ್ರಿಸಲ್ಪಡುತ್ತಿದ್ದ ಅಂತರ್‌ರಾಜ್ಯದ ಅವಲೋಕನಕ್ಕೆ ತೆರೆದಿಡಲ್ಪಡುತ್ತಿದ್ದ ಜೆ.ಡಿ. ಸೈಟು ಪ್ರದೇಶವನ್ನು ಪುನರುಜ್ಜೀವನಗೊಳಿಸಬಹುದಾಗಿದೆ.	ಚಾವಡಿಯೂರು ಜಿ.ಡಿ. ಸೈಟ್
ಆ. ಪಾಂಬರು ನದಿದಂಡೆ ಪ್ರದೇಶ	ಅಮರಾವತಿ ಜಲಾಶಯ ಪ್ರದೇಶ
೩. ಕರ್ನಾಟಕ ಮತ್ತು ತಮಿಳುನಾಡು ರಾಜ್ಯದ ನಡುವೆ	ಬಿಳಿಗುಂಡ್ಲು ಜಿ.ಡಿ. ಪ್ರದೇಶ/ಬೇರೆ ಯಾವುದಾದರೂ ಎರಡು ರಾಜ್ಯಗಳಿಗೂ ಸಾಮಾನ್ಯವಾಗಿರುವ ಗಡಿ ಪ್ರದೇಶದ ಸ್ಥಳ
೪. ತಮಿಳುನಾಡು ಮತ್ತು ಪಾಂಡಿಚೇರಿಯ ನಡುವೆ	ಈಗಾಗಲೇ ರೂಢಿಯಲ್ಲಿರುವ ೭ ಸಂಪರ್ಕ ಸ್ಥಳಗಳು

೯) ಕಾವೇರಿ ನೀರಿನ ಪ್ರಮುಖ ಪಾಲುದಾರರು ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಾದ್ದರಿಂದ ಸಾಧಾರಣ ಜಲ ವರ್ಷದಲ್ಲಿ ಮಾಸಿಕ ನೀರು ಬಿಡುಗಡೆಯನ್ನು ಪ್ರಾಯೋಗಿಕವಾಗಿ ಅಂತರ್ ರಾಜ್ಯ ಪ್ರದೇಶವೆಂದು ಸದ್ಯಕ್ಕೆ ಗುರುತು ಮಾಡಿರುವ ಸಾಮಾನ್ಯ ಗಡಿ ಪ್ರದೇಶದ ಮಾಪನ ಮತ್ತೆ ಹೊರಬಿಡುಗಡೆಯ ನಿಲ್ದಾಣವಾದ ಬಿಳಿಗುಂಡ್ಲುವಿನಲ್ಲಿ ಈ ಕೆಳಕಂಡಂತೆ ಕರ್ನಾಟಕ ರಾಜ್ಯವು ಪ್ರಾಪ್ತವಾಗಿಡಬೇಕೆಂದು ನಾವು ಆದೇಶಿಸುತ್ತೇವೆ.

ತಿಂಗಳು	ಟಿ.ಎಂ.ಸಿ.
ಜೂನ್	೧೦.೦
ಜುಲೈ	೩೪.೦
ಆಗಸ್ಟ್	೫೦.೦
ಸೆಪ್ಟೆಂಬರ್	೪೦.೦
ಅಕ್ಟೋಬರ್	೨೨.೦
ನವೆಂಬರ್	೧೫.೦
ಡಿಸೆಂಬರ್	೮.೦
ಜನವರಿ	೩.೦
ಫೆಬ್ರುವರಿ	೨.೫
ಮಾರ್ಚಿ	೨.೫
ಏಪ್ರಿಲ್	೨.೫
ಮೇ	೨.೫
	೧೯೨.೦

ಮೇಲ್ಕಂಡ ೧೯೨ ಟಿ.ಎಂ.ಸಿ. ನೀರಿನ ಪ್ರಮಾಣವು ತಮಿಳುನಾಡಿಗೆ ನಿಗದಿಪಡಿಸಿದ ೧೮೨ ಮತ್ತು ಪರಿಸರ ರಕ್ಷಣೆಯ ಉದ್ದಿಶ್ಯಕ್ಕೆ ಮೀಸಲಿಟ್ಟ ೧೦ ಟಿ.ಎಂ.ಸಿ. ನೀರಾಗಿರುತ್ತದೆ. ಈ ಮೇಲ್ಕಂಡ ಮಾಸಿಕ ನೀರಿನ ಬಿಡುಗಡೆಯ ವ್ಯವಸ್ಥೆ ಮಾಡುವ ಅಧಿಕಾರದಿಂದ ೧೦ ಹಂತದಲ್ಲಿ ಬಿಡುಗಡೆಯಾಗ ಬೇಕು.

ನಿಯಂತ್ರಣ ಪ್ರಾಧಿಕಾರವು ಸಂಬಂಧಿಸಿದ ರಾಜ್ಯಗಳ ಮತ್ತು ಕೇಂದ್ರೀಯ ಜಲ ನಿಯೋಗದ ಸಹಾಯದಿಂದ ೫ ವರ್ಷಗಳವರೆಗೆ ಮತ್ತು ನಂತರ ಅವಶ್ಯ ಬಿದ್ದಲ್ಲಿ ಅನುಬಂಧ ಬದಲಾವಣೆ/ ವ್ಯವಸ್ಥಾಪನೆಗಳನ್ನು ಕೇಂದ್ರ ಜಲನಿಯೋಗ ಮತ್ತು ಕಕ್ಷಿಗಾರ ರಾಜ್ಯಗಳ ಸಲಹೆ ಪಡೆದು ಕಕ್ಷಿಗಾರ ರಾಜ್ಯಗಳ ನಡುವಿನ ವಾರ್ಷಿಕ ಹಂಚಿಕೆಯನ್ನು ಬದಲಾಯಿಸದೇ ಮುಂದಿನ ವ್ಯವಸ್ಥೆಯನ್ನು ರೂಪಿಸಬಹುದು.

೧೦) ಒಂದು ನೀರಾವರಿ ವರ್ಷದಲ್ಲಿ ಉಪಯೋಗಕ್ಕೆ ದೊರಕಬಹುದಾದ ನೀರು ಹಿಂದಿನ ವರ್ಷಗಳಲ್ಲಿ ಉಪಯೋಗಿಸದೆ ಬಿಟ್ಟ ಶಿಲ್ಕನ್ನು ಒಳಗೊಂಡಿರುತ್ತದೆ. ಈ ಲೆಕ್ಕಾಚಾರವು ಜೂನ್ ೧ರಂದು ಎಲ್ಲ ಜಲಾಶಯಗಳಲ್ಲಿ ಪರಿಣಾಮಕಾರಿಯಾಗಿ ಶೇಖರವಾದ ನೀರಿನ ದೊರಕುವಿಕೆಯ ೩ ಟಿ.ಎಂ.ಸಿ. ಮತ್ತು ಅದಕ್ಕೆ ಹೆಚ್ಚಾದ ಸಾಮರ್ಥ್ಯದ ಆಧಾರದ ಮೇಲೆ ನಿರ್ಧರಿಸಲ್ಪಡುತ್ತದೆ.

೧೧) ಮೇಲಿನ ನದಿಯ ತೀರಕ್ಕೆ ಸಂಬಂಧಿಸಿದ ಯಾವುದೇ ರಾಜ್ಯವು ಕೆಳಗಿನ ನದಿ ತೀರಕ್ಕೆ ಸಂಬಂಧಿಸಿದ ರಾಜ್ಯಕ್ಕೆ ತಪಶೀಲು ಪಟ್ಟಿಯಲ್ಲಿ ಸೇರಿಸಿದ ನೀರಿನ ಬಿಡುಗಡೆಗೆ ಪರಿಣಾಮವಾಗುವ ಯಾವುದೇ ಕ್ರಮವನ್ನು ತೆಗೆದುಕೊಳ್ಳಕೂಡದು. ಆದಾಗ್ಯೂ ಸಂಬಂಧಿಸಿದ ರಾಜ್ಯಗಳು ಪರಸ್ಪರ ಒಪ್ಪಂದ ಮತ್ತು ನಿಯಂತ್ರಣ ಅಧಿಕಾರದ ಸಲಹೆ ಪಡೆದು ನೀರಿನ ಬಿಡುಗಡೆಯ ವಿಧಾನಕ್ಕೆ ಯಾವುದೇ ಬಗೆಯ ತಿದ್ದುಪಡಿಯನ್ನು ಮಾಡಿಕೊಳ್ಳಬಹುದು.

೧೨) ಯಾವುದೇ ನದಿ ತೀರಕ್ಕೆ ಸಂಬಂಧಿಸಿದ ರಾಜ್ಯದ ಮತ್ತು ಕೇಂದ್ರಾಡಳಿತ ಪ್ರದೇಶವಾದ ಪಾಂಡಿಚೇರಿಯ ಅಂತರ್ಜಲವನ್ನು ಕಾವೇರಿ ನದಿಯ ಉಪಯೋಗದ ನೀರಿಗೆ ಎಣಿಕೆ ಮಾಡಲಾಗದು. ಈ ಮೇಲ್ಕಂಡ ಪ್ರಕಟಣೆಯು ಹಾಲಿ ಜಾರಿಯಲ್ಲಿರುವ ಕಾನೂನಿ ನಡಿಯಲ್ಲಿ ಯಾವುದೇ ಖಾಸಗಿ ವ್ಯಕ್ತಿಗಳ ಅಥವಾ ಸಂಸ್ಥೆಗಳ ಹಕ್ಕನ್ನು ಯಾವುದೇ ವಿಧದಲ್ಲಿ ಬದಲಾಯಿಸಲಾಗದು.

೧೩) ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳು ಅವುಗಳ ಸಾಮಾನ್ಯ ಗಡಿ ಪ್ರದೇಶದಲ್ಲಿ ಕೆಲವು ಜಲವಿದ್ಯುತ್ ಯೋಜನೆಗಳನ್ನು ರೂಪಿಸಲು ರಾಷ್ಟ್ರೀಯ ಜಲವಿದ್ಯುತ್ ನಿಗಮ ದೊಡನೆ ಸಂಧಾನ ನಡೆಸುತ್ತಿರುವ ವಿಚಾರವನ್ನು ನಮ್ಮ ಗಮನಕ್ಕೆ ತಂದಿವೆ. ಈ ನೇರದಲ್ಲಿ ನಾವು ಲಕ್ಷಿಸಬೇಕಾದ್ದೇನೆಂದರೆ ಯಾವಾಗಲಾದರೂ ಅಂತಹ ಜಲವಿದ್ಯುತ್ ಯೋಜನೆಗಳು ಯೋಜಿತವಾಗಿ ಕಾವೇರಿಯ ನೀರು ಆ ಅಣೆಕಟ್ಟುಗಳಲ್ಲಿ ಶೇಖರವಾದಲ್ಲಿ ಕೆಳ ಪ್ರದೇಶಗಳಿಗೆ ಹರಿಬಿಡುವ ನೀರು ನಮ್ಮ ಆದೇಶಕ್ಕೆ ಸಮಂಜಸವಾಗಿರಬೇಕು. ಹೀಗಾಗುವುದರಿಂದ ವ್ಯವಸಾಯದ ಅವಶ್ಯಕತೆಗಳು ಗೊಂದಲ ಕ್ಕೀಡಾಗಲಾರವು.

೧೪) ನೀರಿನ ಉಪಯೋಗವನ್ನು ಕಾವೇರಿ ನದಿ ಮತ್ತು ಅದರ ಉಪನದಿಗಳಲ್ಲಿ ಹೇಗೆ ಮತ್ತು ಯಾವುದೇ ರೀತಿಯಲ್ಲಿ ಬರಿದಾಗುವ ನೀರಿನ ಅಳತೆಯಲ್ಲಿ ಅಳೆಯಲಾಗುವುದು. ಈ ಬರಿದಾಗುವಿಕೆಯ ಅಣೆಕಟ್ಟಿನ ನೀರು ಆವಿಯಾಗಿ ನಷ್ಟವಾಗುವುದನ್ನು ಒಳಗೊಂಡಿರುವುದು. ಕಾವೇರಿನದಿಯ ಪ್ರವಾಹದಡಿ ಯಲ್ಲಿ ಬರುವ ಯಾವುದೇ ಅಣೆಕಟ್ಟಿನ ನೀರಿನ ಶೇಖರಣೆಯು ವಾರ್ಷಿಕವಾಗಿ ಆವಿಯಾಗಿ ಆಗುವ ನಷ್ಟದ ನೀರಿನ ಪ್ರಮಾಣದ ಹೊರತಾಗಿ ಉಳಿಯುವ ನೀರಿನ ಪ್ರಮಾಣವಾಗಿರುವುದು. ಯಾವುದೇ ರಾಜ್ಯ ಜಲಾಶಯದಿಂದ ತನ್ನ ಉಪಯೋಗಕ್ಕಾಗಿ ಉಪಯೋಗಿಸಿಕೊಳ್ಳುವ ನೀರನ್ನು, ಆ ನೀರಾವರಿ ವರ್ಷದಲ್ಲಿ ಆ ರಾಜ್ಯ ಉಪಯೋಗಿಸಿದ ನೀರೆಂದು ಪರಿಗಣಿಸಲಾಗುವುದು. ಗೃಹಬಳಕೆ, ಮುನಿಸಿಪಲ್ ಸರಬರಾಜು ಮತ್ತು ಕೈಗಾರಿಕೆಯಲ್ಲಿನ ನೀರಿನ ಉಪಯೋಗವು ಈ ಕೆಳಕಂಡಂತೆ ಅಳತೆ ಮಾಡಲ್ಪಡುವುದು:

ಉಪಯೋಗ	ಮಿತಿ
ಗೃಹ ಮತ್ತು ಮುನಿಸಿಪಲ್ ನೀರಿನ	ನದಿಯಿಂದ ಅಥವಾ ಅದರ ಉಪನದಿ
ಸರಬರಾಜು	ಯಿಂದ ಅಥವಾ ಅಣೆಕಟ್ಟಿನಿಂದ ಅಥವಾ
ಶೇಖರಣೆ ಪ್ರದೇಶದಿಂದ ಅಥವಾ ಅದರ	ಕಾಲುವೆಯಿಂದ ಹೊರತೆಗೆದ ನೀರಿನ ಪ್ರಮಾಣದ
	ಶೇ. ೨೦%ರಷ್ಟು
ಕೈಗಾರಿಕಾ ಉಪಯೋಗಕ್ಕೆ	ನದಿಯಿಂದ ಅಥವಾ ಅದರ ಉಪನದಿ
ಯಿಂದ ಅಥವಾ ಅಣೆಕಟ್ಟಿನಿಂದ ಅಥವಾ	ಶೇಖರಣೆ ಪ್ರದೇಶದಿಂದ ಅಥವಾ ಅದರ
ಕಾಲುವೆಯಿಂದ ಹೊರತೆಗೆದ ನೀರಿನ	ಪ್ರಮಾಣದ ಶೇ. ೨.೩ರಷ್ಟು

೧೫) ನದಿ ತೀರಕ್ಕೆ ಸಂಬಂಧಿಸಿದ ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶವಾದ ಪಾಂಡಿಚೇರಿಯ ತನ್ನ ಭಾಗಕ್ಕೆ ಹಂಚಿಕೆಯಾದ ನೀರನ್ನು ಒಂದು ನಿಗದಿತ ಜಲವರ್ಷದ ಯಾವುದೇ ತಿಂಗಳಲ್ಲಿ ಉಪಯೋಗಿಸಿಕೊಳ್ಳಲಾಗದಿದ್ದಲ್ಲಿ ಹಾಗೆ ಉಪಯೋಗಿಸಿಕೊಳ್ಳಲಾಗದ ನೀರಿನ ಶೇಖರಣೆಯನ್ನು ಯಾವುದೇ ನಿರ್ದೇಶಿತ ಜಲಾಶಯದಲ್ಲಿ ಶೇಖರಿಸಿಡಲು ಬೇಡಿಕೆ ಸಲ್ಲಿಸಿದಲ್ಲಿ, ಈ ವ್ಯವಸ್ಥೆಯನ್ನು ಕಾರ್ಯಗತಗೊಳಿಸುವ ಅಧಿಕಾರ ಹೊಂದಿರುವ ಅಧಿಕಾರ ಕೇಂದ್ರವು ಇದನ್ನು ಅನುಮೋದಿಸಿದಲ್ಲಿ ಈ ನೀರನ್ನು ಆ ಜಲವರ್ಷದ ಯಾವುದೇ ತಿಂಗಳಲ್ಲಿ ಉಪಯೋಗಿಸಿಕೊಳ್ಳಲು ಅರ್ಹವಿರುತ್ತದೆ.

೧೬) ಯಾವುದೇ ರಾಜ್ಯವು ಯಾವುದೇ ಜಲವರ್ಷದಲ್ಲಿ ತನ್ನ ಭಾಗಕ್ಕೆ ಹಂಚಿಕೆಯಾದ ನೀರಿನ ಸ್ವಲ್ಪ ಪ್ರಮಾಣವನ್ನು ಉಪಯೋಗಿಸಿಕೊಳ್ಳಲು ಅಸಮರ್ಥವಾದಲ್ಲಿ ಇದು ಆ ನಂತರದ ಜಲವರ್ಷದಲ್ಲಿ ಆ ರಾಜ್ಯದ ನೀರನ್ನು ಮುಟ್ಟುಗೋಲು ಹಾಕಿಕೊಳ್ಳುವುದ ಕ್ಕಾಗಲೀ ಅಥವಾ ಪರಿತ್ಯಜನೆಗಾಗಲೀ ಒಳಗಾಗಕೂಡದು ಅಥವಾ ಬೇರೆ ರಾಜ್ಯ ಅಂತಹ ನೀರನ್ನು ಉಪಯೋಗಿಸಿಕೊಂಡಿದ್ದಲ್ಲಿ ನಂತರದ ವರ್ಷದಲ್ಲಿ ಆ ರಾಜ್ಯ ತನ್ನ ಹಂಚಿಕೆಯ ಪ್ರಮಾಣವನ್ನು ಹೆಚ್ಚಿಸಿಕೊಳ್ಳಲಾಗದು.

೧೭) ಈ ವರದಿಯ ಬೇರೆ ಬೇರೆ ಅಧ್ಯಾಯದಲ್ಲಿ, ಸಂಪುಟದಲ್ಲಿ ನಿರ್ಧರಿತವಾಗಿ ಯುಕ್ತವಾದ ಕಾರ್ಯ ನಿರ್ವಹಣೆಗಾಗಿ ಇಂತಹ ಎಲ್ಲ ಆದೇಶಗಳು, ನಿರ್ದೇಶನಗಳು, ಶಿಫಾರಸ್ಸುಗಳು, ಸಲಹೆಗಳು ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

೧೮) ಈ ನ್ಯಾಯಾಧಿಕರಣದ ಆದೇಶವು ನ್ಯಾಯಾಧಿಕರಣದ ಆದೇಶದ ಚೌಕಟ್ಟಿನಲ್ಲಿ ಯಾವುದೇ ರಾಜ್ಯವು ತನ್ನ ರಾಜ್ಯದ ಗಡಿಯೊಳಗೆ ನೀರಿನ ಬಳಕೆಯ ಕ್ರಮಗೊಳಿಸುವಿಕೆಯ ಶಕ್ತಿ, ಹಕ್ಕು, ಅಧಿಕಾರವನ್ನು ದುರ್ಬಲಗೊಳಿಸುವುದಿಲ್ಲ.

೧೯) ಅ) ಈ ಆದೇಶದಲ್ಲಿ ಸಾಮಾನ್ಯ ವರ್ಷವೆಂದರೆ ಯಾವುದೇ ವರ್ಷದಲ್ಲಿ ಕಾವೇರಿ ಕೊಳ್ಳದಲ್ಲಿನ ೭೪೦ ಟಿ.ಎಂ.ಸಿ. ನೀರಿನ ಸಮಗ್ರ ಉತ್ಪನ್ನ

ಆ) ಒಂದು ರಾಜ್ಯದ ಸರಹದ್ದಿನೊಳಗಿನ ಯಾವುದೇ ವ್ಯಕ್ತಿ ಅಥವಾ ಅಸ್ತಿತ್ವವುಳ್ಳ ಯಾವುದೇ ಬಗೆಯ ವಸ್ತು ಉಪಯೋಗಿಸಿಕೊಳ್ಳುವ ಕಾವೇರಿನ ನದಿಯ ನೀರನ್ನು ಆ ರಾಜ್ಯದ ನೀರಿನ ಉಪಯೋಗವೆಂದು ಪರಿಗಣಿಸಲಾಗುವುದು

ಇ) ಜಲವರ್ಷವೆಂದರೆ ೧ನೇ ಜೂನ್‌ನಿಂದ ಪ್ರಾರಂಭವಾಗಿ ಮುಂದಿನ ವರ್ಷದ ೩೧ನೇ ಮೇಗೆ ಅಂತ್ಯವಾಗುವ ವರ್ಷ

ಈ) ವ್ಯವಸಾಯಿಕ ಋತುವೆಂದರೆ ಜೂನ್ ೧ರಿಂದ ಪ್ರಾರಂಭವಾಗಿ ಮುಂದಿನ ವರ್ಷದ ೩೧ನೇ ಜನವರಿಗೆ ಅಂತ್ಯವಾಗುವ ಕಾಲ

ಉ) ಕಾವೇರಿ ನದಿಯ ವ್ಯಾಖ್ಯಾನವು ಕಾವೇರಿ ಮುಖ್ಯನದಿ ಮತ್ತು ಅದರ ಎಲ್ಲ ಉಪನದಿಗಳು ಮತ್ತು ಕಾವೇರಿ ನದಿಗೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ನೀರನ್ನು ಒದಗಿಸುವ ಎಲ್ಲ ಒರತೆಗಳು

ಊ) ಟಿ.ಎಂ.ಸಿ. ಅಂದರೆ ಒಂದು ಸಾವಿರ ಮಿಲಿಯನ್ ಘನ ಅಡಿ ನೀರು

೨೦) ಭಾಗಿದಾರರ ನಡುವಿನ ಒಪ್ಪಂದದ ಮೂಲಕ ಇಲ್ಲಿ ಸೇರದಿರುವ ಯಾವುದೇ ಅಥವಾ ಎಲ್ಲ ಮೊದಲಿನ ವಾಕ್ಯಾಂಗಗಳ ಬದಲಾವಣೆ ತಿದ್ದುಪಡಿ ಅಥವಾ ಮಾರ್ಪಾಡು ಮಾಡಲು ಅಡ್ಡಿಇಲ್ಲ

೨೧) ಕೇರಳ, ಕರ್ನಾಟಕ, ತಮಿಳುನಾಡು ಮತ್ತು ಕೇಂದ್ರಾಡಳಿತ ಪ್ರದೇಶವಾದ ಪಾಂಡಿಚೇರಿ ರಾಜ್ಯಗಳು ಈ ನ್ಯಾಯಾಧಿಕರಣದ ಖರ್ಚುವೆಚ್ಚವನ್ನು ೧೫:೪೦:೪೦:೫ ಪ್ರಮಾಣದಲ್ಲಿ ಭರಿಸತಕ್ಕದ್ದು ಈ ಭಾಗಿದಾರರು ಈ ನ್ಯಾಯಾಧಿಕರಣದ ಮುಂದಿನ ಅವರವರ ಖರ್ಚುವೆಚ್ಚವನ್ನು ಅವರವರೇ ಭರಿಸತಕ್ಕದ್ದು

ಸುಧೀರ್ ನಾರಾಯಣ	ಎನ್.ಎಸ್. ರಾವ್	ಎನ್.ವಿ. ಸಿಂಗ್
ಸದಸ್ಯರು	ಸದಸ್ಯರು	ಅಧ್ಯಕ್ಷರು

ನವದೆಹಲಿ ೫-೨-೨೦೦೭

ಅನುವಾದ : ಶ್ರೀಕಂಠಯ್ಯ

ಕೃಪೆ : ಕಾವೇರಿ : ಕನ್ನಡಿಗರ ಹಣೆಬರಹ, ಕನ್ನಡಗೆಳೆಯರ ಬಳಗ / ಕಾರ್ಮಿಕಲೋಕ, ಸಿ.ಕೆ.ಸಿ. ಗಾರ್ಡನ್, ಬೆಂಗಳೂರು - ೨೭

❑

೧೦

ಗಿರೀಶ ಕಾರ್ನಾಡರ ಸ್ಪಷ್ಟೀಕರಣ

ನಾನು ಫೆಬ್ರವರಿ ಐದರಂದು ದೂರದರ್ಶನದ ವಾಹಕ (Channel) ಒಂದರಲ್ಲಿ ಕಾವೇರಿ ನ್ಯಾಯಪೀಠದ ತೀರ್ಪಿನ ವಿಚಾರವಾಗಿ ನೀಡಿದ ಹೇಳಿಕೆಯನ್ನು ಸಾಕಷ್ಟು ತಪ್ಪಾಗಿ ಗ್ರಹಿಸಲಾಗಿದೆ. ಆದ್ದರಿಂದ ನಾನು ನನ್ನ ನಿಲುವನ್ನು ಸ್ಪಷ್ಟಪಡಿಸಬೇಕು :

ಈ ನ್ಯಾಯಪೀಠವನ್ನು ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ಪಾಂಡಿಚೇರಿಯ ಒಪ್ಪಂದದಿಂದ ರೂಪಿಸಲಾಗಿತ್ತು. ಆ ವೇಳೆ, ಈ ನಾಲ್ಕು ರಾಜ್ಯಗಳು ಕಾವೇರಿ ನೀರಿನ ಹಂಚಿಕೆ ವಿವಾದಕ್ಕೆ, ಇದರ ನಿರ್ಧಾರವನ್ನು ಪಾಲಿಸುವುದೇ ಶಾಶ್ವತ ಪರಿಹಾರ ಎಂಬ ಬಾಧ್ಯತೆಗೆ ಒಳಗಾಗಿದ್ದರಿಂದ, ನಾನು ಹೇಳಿದ್ದಿಷ್ಟೇ : ನಮಗೆ ಎಷ್ಟೇ ಅಹಿತ ಎನ್ನಿಸಿದರೂ ನಾವು ಈ ತೀರ್ಪನ್ನು ಒಪ್ಪಿಕೊಳ್ಳಲು ಬದ್ಧರಾಗಿದ್ದೆವು.

ಸುಯೋಗದಿಂದ ಈ ತೀರ್ಪು ಪ್ರಕಟವಾದಾಗಿನಿಂದಲೂ ಹಲವಾರು ವಿಶ್ಲೇಷಕರು ಸೂಚಿಸಿರುವಂತೆ ಇದರ ಅವಕಾಶಗಳು/ನಿಯಮಗಳು ಯಾವ ರೀತಿಯಲ್ಲೂ ಕರ್ನಾಟಕದ ಹಿತಕ್ಕೆ ಹಾನಿ ಮಾಡುವುದಿಲ್ಲ; ಆದರೆ, ಪ್ರತಿಯಾಗಿ, ಹೆಚ್ಚಿನವು ನಮ್ಮ ಅಭಿವೃದ್ಧಿಯ ಅಗತ್ಯಕ್ಕೆ ಸಾಧಕವಾಗಿವೆ. ಏನೇ ಸಂಗತಿಯಿರಲಿ, ನಾನು ಸೂಚಿಸಿದ್ದು : ಈ ತೀರ್ಪನ್ನು ಒಪ್ಪಿಕೊಳ್ಳಲು ನಾವು ಔದಾರ್ಯ ಬದ್ಧವಾಗಿದ್ದೇವೆ. ಮತ್ತು ಹೀಗಾಗದಿದ್ದಲ್ಲಿ, ಈ ವಿವಾದ ಎಂದಿಗೂ ಮುಂದುವರೆಯುವುದು.

ನಾವು ಈ ತೀರ್ಪಿನ ವಿರುದ್ಧ ಮೇಲುಮನವಿ ಮಾಡಬಾರದೆಂದು ನಾನು ಹೇಳಿಲ್ಲ. ಈ ನ್ಯಾಯಪೀಠ ಮೇಲುಮನವಿಗಾಗಿ ಅವಕಾಶ ಒದಗಿಸಿಕೊಟ್ಟಿದೆ. ಆದರೆ ಈ ನಿರ್ಧಾರ ಕರ್ನಾಟಕ ಸರ್ಕಾರಕ್ಕೆ ಬಿಟ್ಟಿದ್ದಾದ್ದರಿಂದ ನಾನು ಅದರೆಡೆ ಪರಾಮರ್ಶೆ ಮಾಡಲಿಲ್ಲ.

ನಿಮ್ಮ ಪ್ರಾಮಾಣಿಕ,

ಗಿರೀಶ ಕಾರ್ನಾಡ

ಅನುವಾದ : ಸಾತವಳ್ಳಿ ಜಾಗೃತಿಪ್ರಿಯ

❑

೧೧

ನ್ಯಾಯ ಸಿಕ್ಕದಿದ್ದರೂ ತೀರ್ಪು ಸಿಕ್ಕಿದೆ

ದೊಡ್ಡಪ್ಪಯ್ಯ ಗಂಗಪ್ಪ

ಕಾವೇರಿ ವಿವಾದ

ವಿವಾದವೂ ಸಹ ಕಾವೇರಿ ನದಿಯಷ್ಟೇ ಬಹಳ ಹಳೆಯದು. ೧೮೯೨ ಮತ್ತು ೧೯೨೪ರಲ್ಲಿ ಅಂದಿನ ಮೈಸೂರು ಸಂಸ್ಥಾನಕ್ಕೂ ಹಾಗೂ ಬ್ರಿಟಿಷರ ಮದ್ರಾಸ್ ರಾಜ್ಯಕ್ಕೂ ಏರ್ಪಟ್ಟ ಒಪ್ಪಂದಗಳು ಬಹಳ ಮುಖ್ಯಪಾತ್ರ ವನ್ನು ವಹಿಸುತ್ತವೆ. ೧೯೨೪ರ ಒಪ್ಪಂದದ ಪ್ರಕಾರ ಮೈಸೂರು ಸಂಸ್ಥಾನದಲ್ಲಿ ಕನ್ನಂಬಾಡಿಕಟ್ಟೆ (ಕೃಷ್ಣರಾಜಸಾಗರ) ಹಾಗೂ ತಮಿಳುನಾಡಿನಲ್ಲಿ ಮೆಟ್ಟೂರುಡ್ಯಾಂ (ಸ್ಟ್ಯಾನ್ಲೆ ರಿಸರ್ವಾಯರ್) ಅಸ್ತಿತ್ವಕ್ಕೆ ಬಂದುವು. ಐವತ್ತು ವರ್ಷಗಳ ನಂತರ ಅಂದರೆ ೧೯೭೪ರಲ್ಲಿ ತಮಿಳುನಾಡು ಹಾಗು ಕರ್ನಾಟಕದ ಸರ್ಕಾರಗಳು ಅಂದಿನ ಸ್ಥಿತಿಗತಿ ಗಳನ್ನನುಸರಿಸಿ ಒಂದು ಹೊಸ ಒಪ್ಪಂದವನ್ನು ಮಾಡಿಕೊಳ್ಳಬೇಕಾಗಿತ್ತು. ಆದರೆ ಈ ಕೆಲಸ ನಡೆಯಲಿಲ್ಲ. ೧೯೯೦ರಲ್ಲಿ ಕೇಂದ್ರ ಸರ್ಕಾರದ ಮಧ್ಯಸ್ತಿಕೆಯಲ್ಲಿ ಒಂದು ನ್ಯಾಯ ಮಂಡಳಿಗೆ ಈ ಸಮಸ್ಯೆಯನ್ನು ಕೊಂಡೊಯ್ಯಲು ಅಂಗೀಕಾರವಾಯಿತು. ಇದು ಒಂದು ದೊಡ್ಡ ದುರಂತವೆಂದರೆ ತಪ್ಪಾಗಲಾರದು. ಉಭಯ ರಾಜ್ಯದವರೂ ತಮ್ಮ ತಮ್ಮ ಹಕ್ಕಿಗನುಗುಣವಾಗಿ, ರೈತರ ಹಿತರಕ್ಷಣೆಗಾಗಿ, ನಾಡಿನ ಹಿತ ಬಯಸಿ ಕಾವೇರಿ ನದಿ ನೀರಿನ ಹಂಚಿಕೆ ಅನ್ನುವ ಬದಲು ನೀರಿನ ಬಳಕೆಯ ಯೋಜನೆಯನ್ನು ರೂಪಿಸಿ ಸಂವಿಧಾನದ ಚೌಕಟ್ಟಿನಲ್ಲಿ, ಪರಸ್ಪರ ಏಳಿಗೆಯ ನಿಟ್ಟನಲ್ಲಿ ಸಾಧ್ಯಬಿದ್ದರೆ ಕೇಂದ್ರ ಸರ್ಕಾರದ ಮಾರ್ಗದರ್ಶನದಲ್ಲಿ ಒಂದು ಒಪ್ಪಂದಕ್ಕೆ ಬರುವುದು ಸೂಕ್ತ ಹಾಗೂ ಅನಿವಾರ್ಯವಾಗಿತ್ತು. ದುರಂತವೆಂದರೆ ನಮ್ಮ ಸರ್ಕಾರಗಳ ಸಮಯ ಪ್ರಜ್ಞೆ ಕೊರತೆಯಿಂದಾಗಿ, ಸಮಯೋಚಿತ ನಿರ್ಧಾರಗಳ ಅಭಾವದಿಂದಾಗಿ, ತಪ್ಪು ತಪ್ಪು ನಿರ್ಣಯಗಳ, ಅಜಾಗರೂಕತೆಯ ನಿರ್ಧಾರಗಳಿಂದ ಈ ದಿನ ಕಾವೇರಿ ವಿವಾದ ದಿಕ್ಕು ತಪ್ಪುತ್ತಿದೆ, ಅಡ್ಡದಾರಿ ಹಿಡಿಯುತ್ತಿದೆ. ಅಂಚಿನಲ್ಲಿ ಕಾರ್ಮೋಡಗಳು ಕಾಣುತ್ತಿವೆ ಹಾಗೆಯೇ ಬಿಟ್ಟರೆ ಅನೇಕ ಅನಾಹುತಗಳಿಗೆ ಎಡೆಕೊಟ್ಟಂತಾಗುತ್ತದೆ. ಕರ್ನಾಟಕದವರಿಗೆ ನಾಟಕವಾಡಲೂ ಸಾಮರ್ಥ್ಯವಿಲ್ಲ. ವಾದ ಮಾಡಿ ಗೆಲ್ಲುವ ಅಭ್ಯಾಸವನ್ನೂ ಮೈಗೂಡಿಸಿ ಕೊಂಡಿಲ್ಲ. ಪ್ರಜಾಪ್ರಭುತ್ವದಲ್ಲಿ ಕೇವಲ ಒಳ್ಳೆಯತನವೇ ಕೆಲಸಕ್ಕೆ ಬಾರದು, ಜಾಣತನವೂ ಬೇಕು.

ಕೃಷ್ಣರಾಜ ಸಾಗರ:

ಮೈಸೂರು ಕಂಡ ಅರಸರಲ್ಲಿ ಬಹು ಅಪರೂಪದ ವ್ಯಕ್ತಿ ನಾಲ್ವಡಿ ಕೃಷ್ಣರಾಜ ಒಡೆಯರವರು. ಇವರ ಕಾರ್ಯವೈಖರಿಗೆ ತಲೆಬಾಗಿ ಮಹಾತ್ಮಾಗಾಂಧೀಜಿಯವರು ಇವರಿಗೆ ರಾಜಋಷಿಯೆಂದು ಸಂಬೋಧಿಸುತ್ತಾರೆ.

ಕೃಷ್ಣರಾಜಸಾಗರ ಮತ್ತು ಮೆಟ್ಟೂರುಡ್ಯಾಂ (ಸ್ಟ್ಯಾನ್ಲೆ ರಿಸರ್ವಾಯರ್) ಕಟ್ಟುವ ಮುನ್ನ ಕರ್ನಾಟಕಕ್ಕಾಗಲಿ ಅಥವಾ ತಮಿಳುನಾಡಿಗಾಗಲಿ ಕಾವೇರಿ ನದಿಯಿಂದ ಪ್ರಯೋಜನಕ್ಕಿಂತ ಹಾನಿಯೇ ಬಹಳ ಇತ್ತು. ತಮಿಳುನಾಡಿ ನಲ್ಲಿ ೧೯೩೪ರಲ್ಲಿ ಮೆಟ್ಟೂರು ಡ್ಯಾಂ ಬರಲು ಬಹುತೇಕ ನಮ್ಮ ಮೈಸೂರು ಮಾಡಿದ ೧೯೨೪ರ ಒಪ್ಪಂದವೆಂದೇ ಹೇಳಬಹುದು. ದೀರ್ಘದರ್ಶಿತ್ವ, ಸಮಯಪ್ರಜ್ಞೆ, ಪ್ರಜಾನುರಾಗಿ, ದೀನ ದಲಿತೋದ್ಧಾರಕರಾದ ಮಹಾರಾಜರು ಮಾಡಿದ ಅನೇಕ ರಚನಾತ್ಮಕ ಕಾರ್ಯಗಳಲ್ಲಿ ಕನ್ನಂಬಾಡಿಕಟ್ಟೆ ಬಹುಮುಖ್ಯವಾದದ್ದು. ಎಷ್ಟೋ ಸವಾಲುಗಳನ್ನು ಎದುರಿಸಿ, ಕಷ್ಟಕಾರ್ಪಣ್ಯಗಳ ಮಧ್ಯದಲ್ಲಿ ನಿರ್ಮಿಸಿದ ಕನ್ನಂಬಾಡಿಕಟ್ಟೆ ನಾಲ್ವಡಿ ಕೃಷ್ಣರಾಜ ಒಡೆಯರವರ ದಿಟ್ಟವ್ಯಕ್ತಿತ್ವಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದೆ.

ಕಾವೇರಿ ನ್ಯಾಯಮಂಡಳಿ ತೀರ್ಪು:

೧೯೯೦ರಿಂದ ೨೦೦೭ರ ವರೆವಿಗೆ ನೂರಾರು ಕೋಟಿ ರೂಪಾಯಿಗಳ ವೆಚ್ಚ ಮಾಡಿದ್ದರ ಫಲ ನ್ಯಾಯ ಸಿಕ್ಕದಿದ್ದರೂ ತೀರ್ಪು ಸಿಕ್ಕಿದೆ ಎಂದು ಹೇಳಬಹುದು. ಈ ತೀರ್ಪಿನಿಂದ ಯಾರಿಗೂ ಪ್ರಯೋಜನ ವಿದ್ದಂತೆ ಕಾಣುತ್ತಿಲ್ಲ. ಇದು ಕೇವಲ ಕಾನೂನಿನ ವಿಷಯವಲ್ಲ. ಜನಗಳ ಪ್ರಶ್ನೆ. ಬ್ರಿಟಿಷರು ನಮಗೆ ಬಳುವಳಿಯಾಗಿ ಬಿಟ್ಟುಹೋಗಿರುವ ನ್ಯಾಯಪದ್ಧತಿ (Court Culture) ನಮ್ಮ ಭಾರತೀಯರ ಸಂಪ್ರದಾಯಕ್ಕೆ

ಸರಿಹೊಂದುತ್ತಿಲ್ಲ. ನಾವು ಎಡವುತ್ತಿದ್ದೇವೆ, ಎಡವಿದ್ದೇವೆ. ಇನ್ನುಮೇಲಾದರೂ ಎಚ್ಚತ್ತುಕೊಂಡು ಮುಂದೆ ಆಗಬಹುದಾದ ಅನಾಹುತಗಳನ್ನು ತಡೆಗಟ್ಟಲು ಕಾವೇರಿ ಮಿತ್ರ ಪಂಚಾಯತ್ ರಚಿಸಿ ಉಭಯ ರಾಜ್ಯಗಳು ನ್ಯಾಯ ಸಮ್ಮತವಾದ, ಜನ ಮೆಚ್ಚುವ ಧರ್ಮಬದ್ಧವಾದ ಹಾಗೂ ಸಮಯೋಚಿತವಾದ ಸೂತ್ರಗಳನ್ನು ಕಂಡು ಹಿಡಿಯುವುದು ಬಹುಸೂಕ್ತ. ಈ ತೀರ್ಪಿನಡಿಯಲ್ಲಿ ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರು ಸಿಗುವ ಭರವಸೆ ಕೂಡ ಇಲ್ಲವಾಗಿದೆ.

ಪರಿಹಾರ : ಜಟಿಲವಾದ ಸಮಸ್ಯೆಯೆಂದರೆ ಮುಂಗಾರು ತಿಂಗಳುಗಳಲ್ಲಿ ನೀರಿನ ಹಂಚಿಕೆ ಕುರಿತು. ಮಂಡ್ಯ ರೈತರಿಗೆ ನೀರು ಬೇಕು, ಆಗ ತಂಜಾವೂರಿನ ರೈತರಿಗೂ ನೀರುಬೇಕು. ನೀರಿನ ಸದ್ಬಳಕೆ ಬಗ್ಗೆ ಇಲ್ಲಿಯವರೆವಿಗೂ ಯಾವ ಒಳ್ಳೆಯ ಸಮೀಕ್ಷೆ ನಡೆಸಿದಂತೆ ಕಾಣುತ್ತಿಲ್ಲ. ಓಬಿರಾಯನ ಕಾಲದ ಕಡತಗಳಿಂದ ವಾದ ಪ್ರತಿವಾದಗಳಿಂದ ಈ ಪ್ರಶ್ನೆ ಬಗೆಹರಿಯಲಾರದು. ಈಗಲಾದರೂ ಸಾಮಾಜಿಕ, ಆರ್ಥಿಕ ಮತ್ತು ಕೃಷಿ ಪದ್ಧತಿಗಳ ಸಮೀಕ್ಷೆ ಮಾಡಿಸುವುದು ಅನಿವಾರ್ಯ.

ತಮಿಳುನಾಡಿನಲ್ಲಿ ೧೯೩೪ ಬ್ರಿಟಿಷರು ಕಟ್ಟಿದ ಮೆಟ್ಟೂರು ಡ್ಯಾಂ ಬಿಟ್ಟರೆ ತಂಜಾವೂರು ರೈತರ ಹಿತಕ್ಕಾಗಿ ಯಾವ ಅಣೆಯನ್ನು ಕಟ್ಟಲಿಲ್ಲ. ಈಗಲಾದರೂ ಎರಡು ಅಣೆಗಳನ್ನು ನಿರ್ಮಿಸಿ – ಮುಂಗಾರು ಹಿಂಗಾರಿನಲ್ಲಿ ಮಳೆ ನೀರು ಸಮುದ್ರ ಸೇರಿ ನಷ್ಟವಾಗುವದನ್ನು ತಡೆದು ನೀರು ಶೇಖರಿಸಿಟ್ಟರೆ ಮುಂಗಾರು ತಿಂಗಳುಗಳಲ್ಲಿ ತಂಜಾವೂರು ರೈತರಿಗೆ ಬಹಳ ಅನುಕೂಲ. ಕರ್ನಾಟಕದವರೂ ಕೂಡ ಮೇಕೆದಾಟು ಅಂತಹ ಪ್ರದೇಶದಲ್ಲಿ ಒಂದು ಅಣೆಕಟ್ಟಿ ನೀರು ಶೇಖರಿಸುವುದು ಬಹುಸೂಕ್ತ.

ಯಾರಿಗೆಷ್ಟು ಟಿ.ಎಂ.ಸಿ. ನೀರೆಂದು ಗುದ್ದಾಡಿ, ಸದ್ದು ಮಾಡಿ ನಿದ್ದೆ ಕೆಡಿಸುವ ಬದಲು ಉಭಯ ರಾಜ್ಯಗಳೂ ಪಶ್ಚಿಮ ಘಟ್ಟಗಳಲ್ಲಿ ಅಂದಾಜು ಪ್ರಕಾರ ೨೦೦೦ ಟಿ.ಎಂ.ಸಿ. ನೀರು ಅರಬ್ಬಿ ಸಮುದ್ರಕ್ಕೆ ಪೋಲಾಗುವುದನ್ನು ತಪ್ಪಿಸಿ ಕನಿಷ್ಠಪಕ್ಷ ೫೦೦ ಟಿ.ಎಂ.ಸಿ. ನೀರನ್ನಾದರೂ ಪೂರ್ವಕ್ಕೆ ತಿರುಗಿಸಿ ಇಡಿ ಕರ್ನಾಟಕ, ರಾಯಲಸೀಮೆ, ತಮಿಳುನಾಡಿನ ರೈತರ ಬದುಕನ್ನು ಹಸನಾಗಿಸಿ ಸರ್ವತೋಮುಖಾಭಿವೃದ್ಧಿಗೆ ನಾಂದಿಯಾಡಬಹುದು. ಕರ್ನಾಟಕ ಈ ಸುವರ್ಣ ಕರ್ನಾಟಕದ ಅಂಗವಾಗಿ ಈ ಯೋಜನೆಯನ್ನು ಕೈಗೆತ್ತಿಕೊಂಡರೆ ಕರ್ನಾಟಕದಲ್ಲಿ ಬಂಗಾರದ ಹೊಳೆ ಹರಿಸಬಹುದು. ಕರುನಾಡ ಕಂಡ ಕಾವೇರಿ ಕರುನಾಡು ಕಾಣುವ ಸಿರಿಯಾಗಬೇಕೆಂಬ ಒಂದು ಹೆಬ್ಬಯಕೆ. ಹಾಗೆಯೇ ಗಂಗಾ–ಕಾವೇರಿ ನದಿಗಳ ಜೋಡಣೆಯ ಕೆಲಸ ಜರೂರಾಗಿ ನಡೆದರೆ ನಾಡಿನ ಭಾವೈಕ್ಯತೆಗೂ, ಬಡತನ ನಿರ್ಮೂಲನೆಗೂ ಸುಲಭವಾದೀತು.

❑

೧೨

ಕರ್ನಾಟಕದ ಮೇಲಾಗುವ ಪರಿಣಾಮಗಳು

ಆರ್. ಹೃಷಿಕೇಶ್

ನ್ಯಾಯಾಧಿಕರಣವು ಎಲ್ಲ ವಿಷಯಗಳಲ್ಲಿಯೂ ತಮಿಳು ನಾಡಿಗೆ ಪ್ರಾಶಸ್ತ್ಯ ಮತ್ತು ಸಿಂಹಪಾಲನ್ನು ಕೊಟ್ಟಿರುವುದು ಮೇಲ್ನೋಟಕ್ಕೆ ಗೋಚರವಾಗುತ್ತದೆ.

ಕಾವೇರಿ ನದಿಯ ವೈಶಿಷ್ಟ್ಯವಾದ ಎರಡು ಮಳೆಗಾಲ, ಕರ್ನಾಟಕದಲ್ಲಿ ಮುಂಗಾರಿನ ಮಳೆ ಮತ್ತು ತಮಿಳುನಾಡಿನಲ್ಲಿ ಹಿಂಗಾರು ಮಳೆಯ ಪ್ರಾಬಲ್ಯವನ್ನು ಕಡೆಗಣಿಸಿ ಎರಡೂ ರಾಜ್ಯಗಳಿಗೆ ಒಂದೇ ಅಳತೆ ಗೋಲನ್ನು ಪರಿಗಣಿಸಲಾಗಿದೆ.

ಕರ್ನಾಟಕದಲ್ಲಿನ ಬೆಳೆಗಳು ಪ್ರಮುಖವಾಗಿ ಮುಂಗಾರು ಬೆಳೆಗಳಾಗಿದ್ದು ಮಳೆಯ ಬೆಂಬಲವಿದೆ. ಅದೇ ಸಮಯದಲ್ಲಿ ತಮಿಳುನಾಡಿನಲ್ಲಿ ಬೆಳೆಯುವ ಕುರುವೈ ಬೆಳೆಗೆ ಮಳೆಯ ಬೆಂಬಲವಿಲ್ಲ. ಮಳೆಯ ಬೆಂಬಲವಿರುವ ಬೆಳೆಗಳ ನೀರಿನ ಅವಶ್ಯಕತೆ ಹೆಚ್ಚಿದ್ದು ಇಂತಹ ಬೆಳೆಗಳನ್ನು ಜಲಾಶಯದಲ್ಲಿ ಉಳಿದಿರುವ ನೀರು ಅಥವಾ ಅಂತರ್ಜಲದ ಬೆಂಬಲದಿಂದ ಮಾತ್ರ ಬೆಳೆಯಬೇಕೆನ್ನುವ ಸಾಮಾನ್ಯ ಸೂತ್ರವನ್ನು

ನ್ಯಾಯಾಧಿಕರಣ ಪರಿಗಣಿಸಿಲ್ಲ. ತಮಿಳುನಾಡಿಗೆ ಜೂನ್ – ಜುಲೈ ತಿಂಗಳಿನಲ್ಲಿ ನೀರಿನ ಅವಶ್ಯಕತೆ ಕಡಿಮೆ ಎಂದು ಹೇಳಿರುವ ನ್ಯಾಯಾಧಿಕರಣ ನದಿ ನೀರಿನ ಸಿಂಹಪಾಲು ತಮಿಳುನಾಡಿಗೆ ಕೊಟ್ಟಿದೆ. ೧೯೨೪ರ ಒಪ್ಪಂದ ಪರೋಕ್ಷವಾಗಿ ಹೇರಲ್ಪಟ್ಟಿದೆ. ಕರ್ನಾಟಕದ ಜಲಾಶಯಗಳಿಗೆ ಮುಂಗಾರಿನಲ್ಲಿ ಬರುವ ನೀರೇ ಆ ಅವಧಿಯ ಬೆಳೆಗಳಿಗೆ ಮತ್ತು ಮುಂದಿನ ಬೆಳೆಗೆ ಬೇಕಾಗುವ ನೀರಿನ ಸಂಗ್ರಹಣೆಗೆ ಆಧಾರ. ೧೯೯೧ರಿಂದ ೨೦೦೭ರ ವರೆಗೆ ಪ್ರತಿ ವರ್ಷವೂ ಈ ಮಾಸಿಕ ಕಂತುಗಳ ಬಿಡುಗಡೆಗೆ ಇದ್ದ ಅಡ್ಡಿ ಆತಂಕ ಎಲ್ಲರಿಗೂ ತಿಳಿದಿರುವ ವಿಷಯ. ಲಭ್ಯತೆಯ ಶೇ. ೪೨ ರಷ್ಟು ಸಂಗ್ರಹಣಾ ಸಾಮರ್ಥ್ಯ ಕಾವೇರಿ ಕೊಳ್ಳದಲ್ಲಿದೆ ಎನ್ನುವ ನ್ಯಾಯಾಧಿಕರಣ ಆ ಸಂಗ್ರಹಣೆಯನ್ನು ಸಮರ್ಥವಾಗಿ ಬಳಸಿಕೊಳ್ಳುವ ಬಗ್ಗೆ ಅಧ್ಯಯನ ಮಾಡಿಲ್ಲ. ಜಲಾಶಯಗಳ ಸಂಯುಕ್ತ ನಿರ್ವಹಣೆಯ ಪಾಠ ಬೋಧಿಸುವ ನ್ಯಾಯಾಧಿಕರಣ ನೀರಿನ ಬಿಡುಗಡೆಯ ಮಾಸಿಕ ಕಂತುಗಳನ್ನು ಜಲಾಶಯ ಗಳಿಲ್ಲದ ನದಿಯ ನೀರಿನಂತೆ ಪರಿಗಣಿಸಿದೆ. ಅಕ್ಟೋಬರ್ – ಡಿಸೆಂಬರ್ ಅವಧಿಯಲ್ಲಿ ಪ್ರತಿವರ್ಷವೂ ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ನೀರು ಹರಿದು ಜೂನ್ – ಸೆಪ್ಟೆಂಬರ್‌ನಲ್ಲಿ ನಿಗದಿತ ಪ್ರಮಾಣದ ನೀರು ಬಿಡುವುದರಿಂದ ತಮಿಳುನಾಡಿಗೆ ನಿಗದಿಗೊಳಿಸಿರುವುದ ಕ್ಕಿಂತ ಹೆಚ್ಚಿನ ನೀರು ಸಿಗುತ್ತದೆ. ಆದ್ದರಿಂದ ಈ ಆದೇಶ ಅನುಷ್ಠಾನಗೊಳಿಸಲಾಗದ ಅವೈಜ್ಞಾನಿಕ ಆದೇಶ.

ತಮಿಳುನಾಡಿನ ಕಾವೇರಿ ಡೆಲ್ಟಾದಲ್ಲಿ ನದಿ ನೀರಿನ ಜೊತೆಗೆ ಸಂಯುಕ್ತವಾಗಿ ಬಳಕೆಯಾಗದ ಅಂತರ್ಜಲ ವನ್ನು ೨೦ ಟಿ.ಎಂ.ಸಿ. ಎಂದು ಲೆಕ್ಕ ಹಾಕಿದ ನ್ಯಾಯಾಧಿಕರಣ ಇದನ್ನು ನೀರಿನ ಹಂಚಿಕೆಯಲ್ಲಿ ಪರಿಗಣಿಸಿಲ್ಲ. ಆದ್ದರಿಂದ ಈ ನೀರನ್ನು ಬಳಸಿ ನ್ಯಾಯಾಧಿಕರಣ ನಿರಾಕರಿಸುವ ಕುರುವೈ ಬೆಳೆಯ ವಿಸ್ತರಣೆ ತಮಿಳುನಾಡಿಗೆ ಸಾಧ್ಯವಾಗುತ್ತದೆ.

ಪರಿಸರ ನಿರ್ವಹಣೆ ತಮಿಳುನಾಡಿಗೆ ಮಾತ್ರ ಸೀಮಿತವಲ್ಲ. ಕರ್ನಾಟಕದ ಜಲಾಶಯಗಳ ಕೆಳಗಿನ ನದಿ ಪಾತ್ರದಲ್ಲಿಯೂ ಪರಿಸರ ನಿರ್ವಹಣೆಗೆ ಪ್ರತ್ಯೇಕ ನೀರಿನ ಅವಶ್ಯಕತೆಯನ್ನು ಪರಿಗಣಿಸಬೇಕು.

ಮೇಲಿನ ಅಂಶಗಳನ್ನು ಪರಿಗಣಿಸಿ ತಮಿಳುನಾಡಿನ ಪಾಲನ್ನು ಕಡಿಮೆ ಮಾಡಿ ಕರ್ನಾಟಕದ ಪಾಲನ್ನು ಹೆಚ್ಚಿಸಬೇಕು. ಮಾಸಿಕ ಕಂತುಗಳನ್ನು ಸ್ಥಿರವಾಗಿ ನಿಗದಿಗೊಳಿಸುವ ಬದಲು ಸನ್ನಿವೇಶಕ್ಕೆ ತಕ್ಕಂತೆ ಬದಲಾಯಿಸುವ ಅವಕಾಶವಿರಬೇಕು.

ಕಬಿನಿ ಮತ್ತು ಕೃಷ್ಣರಾಜಸಾಗರ ಜಲಾಶಯಗಳು ನೀರಾವರಿಯೇ ಪ್ರಮುಖ ಉದ್ದೇಶದವುಗಳಾದ್ದ ರಿಂದ ಅವುಗಳಿಂದ ನೀರಿನ ಬಿಡುಗಡೆ ಮಾಡಲು ರೈತರ ಆಕ್ರೋಶ ಎದುರಿಸಬೇಕಾಗುತ್ತದೆ. ಮೇಕೆದಾಟು ವಿವಿಧೋದ್ದೇಶ ಯೋಜನೆಯ ಅನುಷ್ಠಾನದಿಂದ ಕರ್ನಾಟಕದಲ್ಲಿ ಲಭ್ಯವಿರುವ ಎಲ್ಲಾ ನೀರನ್ನು ಈ ಜಲಾಶಯದ ನಿರ್ವಹಣೆಯಿಂದ ಸೂಕ್ತವಾಗಿ ಬಳಸಿಕೊಳ್ಳುವುದು ಸಾಧ್ಯ. ಬೆಂಗಳೂರು ನೀರು ಸರಬರಾಜಿಗೆ ಸಂಗ್ರಹಣೆಯ ಬೆಂಬಲ, ಜಲವಿದ್ಯುತ್ ಉತ್ಪಾದನೆ, ಅಂತರ ರಾಜ್ಯ ಗಡಿಯಲ್ಲಿ ನೀರು ಬಿಡುವಿಕೆ ಎಲ್ಲವೂ ಈ ಯೋಜನೆ ಯಿಂದ ಕಾರ್ಯಗತವಾಗುತ್ತದೆ. ಈ ಯೋಜನೆಗೆ ಬೇಕಾದ ಪರಿಸರ ಇಲಾಖೆಯ ಒಪ್ಪಿಗೆ ಯನ್ನು ಪಡೆಯಲು ಸೂಕ್ತಕ್ರಮ ತೆಗೆದುಕೊಂಡು ಯೋಜನೆಯ ನಿರ್ಮಾಣವನ್ನು ಕರ್ನಾಟಕ ಸರ್ಕಾರ ಪ್ರಾರಂಭಿಸಬೇಕು.

ಬಿಳಿಗುಂಡ್ಲುವಿನಲ್ಲಿ ೧೯೨ ಟಿ.ಎಂ.ಸಿ. ಅಂದರೆ ಮೆಟ್ಟೂರು ಜಲಾಶಯದಲ್ಲಿ ೧೯೨+೨೫=೨೧೭ ಟಿ.ಎಂ.ಸಿ. ಲಭ್ಯತೆ. ಇದೂ ಅಲ್ಲದೆ ಕೇರಳ ಉಪಯೋಗಿಸದ ನೀರೂ ತಮಿಳುನಾಡಿಗೆ ಹೋಗುತ್ತಿದೆ. ಮಧ್ಯಂತರ ಆಜ್ಞೆಯಂತೆ ೨೦೫ ಟಿ.ಎಂ.ಸಿ. ನೀರು ಸಿಗುತ್ತಿದ್ದ ತಮಿಳುನಾಡಿಗೆ ಹೆಚ್ಚಿನ ನೀರು ಸಿಗುತ್ತದೆ. ಕೇರಳಕ್ಕೆ ಮಧ್ಯಂತರ ಆಜ್ಞೆಯಲ್ಲಿ ಏನೂ ಕೊಡದ ನ್ಯಾಯಾಧಿಕರಣ ೩೦ ಟಿ.ಎಂ.ಸಿ. ಕೊಟ್ಟಿದೆ. ಎಲ್ಲಾ ರಾಜ್ಯಗಳಿಗೂ ಮಧ್ಯಂತರ ಆಜ್ಞೆಗಿಂತ ಹೆಚ್ಚು ನೀರು ಸಿಕ್ಕಿ ಆಷ್ಟರ ಮಟ್ಟಿಗೆ ಕರ್ನಾಟಕದ ಪಾಲು ಕಡಿಮೆಯಾಗಿದೆ.

ಅಂತರರಾಜ್ಯ ಜಲ ವಿವಾದ ಕಾಯಿದೆಯಂತೆ ಈ ಆದೇಶವನ್ನು ಮಾರ್ಪಡಿಸುವ ಅಧಿಕಾರ ನ್ಯಾಯಾಧಿಕರಣಕ್ಕೆ ಮಾತ್ರ ಇದೆ. ಆದ್ದರಿಂದ ನಿಗದಿತ ಅವಧಿಯಲ್ಲಿ ನ್ಯಾಯಾಧಿಕರಣಕ್ಕೆ ಮೇಲ್ಮನವಿ ಸಲ್ಲಿಸಿ ಪರಿಹಾರ ಕೇಳುವುದೊಂದೇ ಉಳಿದಿರುವ ಮಾರ್ಗ.

ಕೃಪೆ : ಪ್ರಕಾಶಕರು, ಕನ್ನಡ ಗೆಳೆಯರ ಬಳಗ / ಕಾವೇರಿಬಳಗ,
ಸಿ.ಕೆ.ಸಿ. ಗಾರ್ಡನ್, ಬೆಂಗಳೂರು – ೨೭

೧೩

ಕಾವೇರಿ ನ್ಯಾಯಮಂಡಳ ತೀರ್ಪಿನ ವಿವೇಚನೆ

ಬಿ.ಎಸ್. ಭವಾನಿಶಂಕರ್

೧. ಪ್ರಸ್ತಾವನೆ

೧.೧ ಸುಮಾರು ೧೭ ವರ್ಷಗಳ ಅಂತರದ ತರುವಾಯ ಕಾವೇರಿ ನ್ಯಾಯಮಂಡಳಿಯು ಫೆಬ್ರವರಿ ೫, ೨೦೦೭ರಂದು ಅಂತಿಮವಾಗಿ ತನ್ನ ತೀರ್ಮಾನವನ್ನು ನೀಡಿತು. ಈ ಮೂಲಕ ಅದು ಕಾವೇರಿ ಜಲಾನಯನ ಭೂಮಿಯ ನದೀತೀರದ ಹಕ್ಕುಹೊಂದಿರುವ ನಾಲ್ಕು ಪಾಲುದಾರ ರಾಜ್ಯಗಳು ದೀರ್ಘಕಾಲದಿಂದ ಕಾಯುತ್ತಿದ್ದುದರಿಂದ ಉಂಟಾಗಿದ್ದ ಕೊನೆಯಿಲ್ಲದ ಅನಿಶ್ಚಿತತೆಗೆ ಮಂಗಳ ಹಾಡಿದಂತೆ ತೋರುತ್ತದೆ. ಈ ತೀರ್ಮಾನ ಬೇರೆ ಬೇರೆ ದಿಕ್ಕುಗಳಲ್ಲಿ ಬಗೆಬಗೆಯ ಪ್ರತಿಕ್ರಿಯೆಗಳನ್ನು ಹುಟ್ಟಿಸಿದೆ. ಬುದ್ಧಿಜೀವಿಗಳ ಪ್ರತಿಕ್ರಿಯೆಗಳು ವೈವಿಧ್ಯಮಯವಾಗಿದ್ದರೆ ಹೆಚ್ಚು ತಿಳಿದುಕೊಂಡಿರದ ಸಾರ್ವಜನಿಕರಲ್ಲಿ ಅದರಲ್ಲೂ ಮುಖ್ಯವಾಗಿ ಕರ್ನಾಟಕದಲ್ಲಿ ಸ್ವಲ್ಪಮಟ್ಟಿಗೆ ನಿರಾಶೆಯನ್ನು ಹುಟ್ಟಿಸಿದೆ. ತನ್ನ ಬೇಡಿಕೆಗೆ ತಕ್ಕಂತೆ ಕರ್ನಾಟಕಕ್ಕೆ ನ್ಯಾಯಮಂಡಳಿ ನ್ಯಾಯದೂರಕಿಸಿಕೊಟ್ಟಿಲ್ಲ ಎಂದು ಸಾಮಾನ್ಯರು ಭಾವಿಸಿದ್ದಾರೆ. ತೀರ್ಮಾನ ಹೊರಬಿದ್ದ ಮೊದಲ ದಿನದಿಂದಲೂ ಪ್ರದರ್ಶನಗಳು ಮತ್ತು ಚಳವಳಿಗಳು ರಾಜ್ಯದಲ್ಲಿ ನಡೆಯುತ್ತಿದ್ದು ಶಾಂತಿಯಿಂದಿದ್ದ ಸಾರ್ವಜನಿಕರ ನಡುವೆ ಉದ್ವೇಗವನ್ನು ಕೆರಳಿಸುತ್ತಿದೆ. ಮಂಡ್ಯ, ಮೈಸೂರು ಮತ್ತು ಮದ್ದೂರುಗಳಲ್ಲಿ ಒಂದಲ್ಲ ಒಂದು ಸಂಘಟನೆ ನಡೆಸುತ್ತಿರುವ ಪ್ರದರ್ಶನಗಳು ತೀವ್ರಸ್ವರೂಪ ಪಡೆದುಕೊಂಡಿವೆ. ನಿತ್ಯವೂ ಚಳವಳಿ ನಡೆಸುತ್ತಿರುವವರ ಬಾವುಟಗಳಡಿಯಲ್ಲಿ ಘೋಷಣಾವಾಕ್ಯಗಳು ಗಟ್ಟಿಯಾಗಿ ಕೇಳಿಬರುತ್ತಿವೆ. ಬೆಂಗಳೂರಿನಲ್ಲಿ ಮತ್ತು ಇತರ ಸ್ಥಳಗಳಲ್ಲಿ ಕೂಡಾ ಪ್ರತಿದಿನವೂ ಪ್ರದರ್ಶನಗಳು ಕಂಡುಬರುತ್ತಿವೆ. ರಾಜಕಾರಣಿಗಳು ಕೂಡಾ ನ್ಯಾಯ ಮಂಡಳಿಯ ತೀರ್ಮಾನದ ಪರಾಮರ್ಶೆಗೆ ಒತ್ತಾಯಿಸುತ್ತ ಅದರ ತೀರ್ಮಾನವನ್ನು ತಿರಸ್ಕರಿಸುತ್ತ ಪ್ರದರ್ಶನಗಳಲ್ಲಿ ಭಾಗವಹಿಸುತ್ತಿದ್ದಾರೆ.

೧.೨ ಇಲ್ಲಿಯವರೆಗೂ ಕರ್ನಾಟಕ ಸರ್ಕಾರ ನ್ಯಾಯ ಮಂಡಳಿಯ ಮುಂದೆ ಪರಾಮರ್ಶೆಗೆ ಮನವಿಯನ್ನು ಸಲ್ಲಿಸಬೇಕಾದ ವಿಧಾನ ಮತ್ತು ಅದಕ್ಕೆ ಪೂರಕವಾಗಿದ್ದ ಗಟ್ಟಿಯಾಗಿರುವ ಆಧಾರಗಳ ಬಗ್ಗೆ ನಿರ್ಧಾರ ಮಾಡಿಲ್ಲ. ಆದೇಶ ಹೊರಬಿದ್ದ ಮೂರು ತಿಂಗಳ ಒಳಗೆ ಯಾವುದೇ ಸ್ಪಷ್ಟೀಕರಣ ಅಥವಾ ಅವಶ್ಯಕವಾಗಿರುವ ವಿವರಣೆಯನ್ನು ಕುರಿತಂತೆ ನ್ಯಾಯಮಂಡಳಿಯು ಮನವಿಯನ್ನು ಸ್ವೀಕರಿಸುವುದು. ಹಾಗಿದ್ದರೂ ಸರ್ಕಾರವು ಬಹಿರಂಗವಾಗಿ ತನಗೆ ತೀರ್ಮಾನ ತೃಪ್ತಿ ಕೊಟ್ಟಿಲ್ಲ ಎಂದು ಹೇಳುತ್ತಿದೆ. ಇತರ ಮೂರು ರಾಜ್ಯಗಳು ಅಂದರೆ ತಮಿಳುನಾಡು, ಕೇರಳ ಮತ್ತು ಪಾಂಡಿಚೇರಿ ಕೂಡಾ ನ್ಯಾಯ ಮಂಡಳಿಯ ತೀರ್ಮಾನದ ಬಗ್ಗೆ ಅಸಂತೃಪ್ತಿಯನ್ನು ವ್ಯಕ್ತಪಡಿಸಿವೆ ಮತ್ತು ನ್ಯಾಯ ಮಂಡಳಿಯ ಮುಂದೆ ಪರಾಮರ್ಶೆಗಾಗಿ ಮನವಿಗಳನ್ನು ಸಲ್ಲಿಸಲು ಸಿದ್ಧತೆ ನಡೆಸುತ್ತಿವೆ. ಹಾಗಿದ್ದರೂ ಈ ರಾಜ್ಯಗಳಲ್ಲಿ ಕರ್ನಾಟಕದಲ್ಲಿ ನಡೆದ ರೀತಿಯಲ್ಲಿ ಚಳವಳಿಗಳನ್ನು ಮತ್ತು ಪ್ರದರ್ಶನಗಳನ್ನು ಸಾರ್ವಜನಿಕರು ನಡೆಸಿಲ್ಲ.

೧.೩ ಈ ಹಿನ್ನೆಲೆಯಲ್ಲಿ ಸರಿಯಾದ ದೃಷ್ಟಿಕೋನವನ್ನಿಟ್ಟುಕೊಂಡು ಶತಮಾನಗಳ ಇತಿಹಾಸ ಹೊಂದಿರುವ ಈ ಸಂಘರ್ಷದ ಜಟಿಲತೆಯನ್ನು ವಿವರಿಸುವ ಮೂಲಕ ಈ ತೀರ್ಮಾನದ ವಿಶ್ಲೇಷಣೆ ನಡೆಸಲು ಪ್ರಯತ್ನಿಸಲಾಗಿದೆ.

೨.೦ ಸಂಕ್ಷಿಪ್ತವಾಗಿ ನ್ಯಾಯಮಂಡಳಿಯ ತೀರ್ಮಾನ

೨.೧ ಕರ್ನಾಟಕವು ನದಿತೀರದ ಮೇಲಿನ ಮುಖ್ಯ ರಾಜ್ಯವಾಗಿದ್ದು ಅನುಕೂಲಕರವಾಗಿರುವ ಸ್ವಾಭಾವಿಕ ಭೂಲಕ್ಷಣಗಳನ್ನು ಹೊಂದಿರುವುದರಿಂದ ತನ್ನ ಪ್ರದೇಶದಲ್ಲಿ ಅದು ಅನೇಕ ಸಂಗ್ರಹಣಾ

ಜಲಾಶಯಗಳನ್ನು ನಿರ್ಮಿಸಿಕೊಂಡು ಅದರ ಮೇಲೆ ನಿಯಂತ್ರಣವನ್ನು ಹೊಂದಿದೆ. ಹಾಗಾಗಿ ತಮ್ಮ ರಾಜ್ಯದಲ್ಲಿ ಹುಟ್ಟಿ ಹರಿಯುವ ಕಾವೇರಿ ತಮ್ಮ ರಾಜ್ಯಕ್ಕೆ ಸೇರಿದ್ದು ಎಂದು ಜನರು ಸರಿಯಾಗಿಯೋ ತಪ್ಪಾಗಿಯೋ ಭಾವಿಸಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ತಮಗೆ ಕಾವೇರಿ ನೀರಿನ ಮೇಲೆ ಪೂರ್ಣ ಹಕ್ಕಿದೆ ಎಂದು ಕನ್ನಡಿಗರು ಭಾವಿಸಿದ್ದಾರೆ. ಆದ್ದರಿಂದ ಸಾಮಾನ್ಯ ವರ್ಷಗಳಲ್ಲಿ ತಮಿಳುನಾಡಿಗೆ ನ್ಯಾಯಮಂಡಳಿಯು ೪೧೯ ಟಿ.ಎಂ.ಸಿ. ನೀರನ್ನು ನೀಡಿ ಕರ್ನಾಟಕಕ್ಕೆ ೨೭೦ ಟಿ.ಎಂ.ಸಿ.ಯಷ್ಟು ಕಡಿಮೆ ನೀರು ಕೊಟ್ಟಿರುವುದರ ವಿರುದ್ಧ ಚಳವಳಿಗಳು ಮತ್ತು ಪ್ರದರ್ಶನಗಳು ನಡೆಯುತ್ತಿವೆ. ಇನ್ನೂ ಹೆಚ್ಚಿಗೆ ಹೇಳುವುದಾದರೆ ಸಾಮಾನ್ಯ ವರ್ಷದಲ್ಲಿ ಕರ್ನಾಟಕ ಬಿಳಿಗುಂಡ್ಲುವಿನ ಬಳಿಯಿರುವ ಗಡಿಯಲ್ಲಿ ೧೯೨ ಟಿ.ಎಂ.ಸಿ. ನೀರನ್ನು ಬಿಡುವ ಮೂಲಕ ತಮಿಳುನಾಡಿಗೆ ೪೧೯ ಟಿ.ಎಂ.ಸಿ. ನೀರನ್ನು ಖಾತ್ರಿಪಡಿಸಬೇಕು. ಇದರಲ್ಲಿ ತಮಿಳುನಾಡು ತನ್ನ ಪ್ರದೇಶದಲ್ಲಿ ಹೊಂದಿರುವ ಪಾಲು ಕೂಡಾ ಸೇರಿಕೊಂಡಿದೆ. ೧೯೨ ಟಿ.ಎಂ.ಸಿ.ಯಲ್ಲಿ ೧೦ ಟಿ.ಎಂ.ಸಿ. ಪರಿಸರಕ್ಕೆ ಸಂಬಂಧಿಸಿದೆ.

೨.೨ ಮೇಲು ಮೇಲೆ ನೋಡಿದರೆ ತಮಿಳುನಾಡಿಗೆ ಹೆಚ್ಚು ಕೊಡಲಾಗಿದೆಯೆಂದೂ ಕರ್ನಾಟಕ್ಕೆ ಕಡಿಮೆ ಕೊಡಲಾಗಿದೆಯೆಂದು ತೋರುತ್ತದೆ. ಆದರೆ ವಾಸ್ತವವಾಗಿ ಮತ್ತು ಉದ್ವೇಗವಿಲ್ಲದೇ ವಿಶ್ಲೇಷಿಸಿದರೆ, ಕರ್ನಾಟಕಕ್ಕೆ ಅನ್ಯಾಯಮಾಡಲಾಗಿದೆಯೆಂದೂ ಈ ತೀರ್ಮಾನ ಕರ್ನಾಟಕಕ್ಕೆ ಕೆಡಕಾಗಿದೆಯೆಂದು ಹೇಳಲು ಸಾಧ್ಯವಾಗದು. ಏಕೆಂದರೆ ಎರಡು ರಾಜ್ಯಗಳ ನೀರಾವರಿ ಪ್ರದೇಶಗಳನ್ನು ಪರಿಗಣಿಸಿದರೆ ಮತ್ತು ಮುಖ್ಯವಾಗಿ ತಮಿಳುನಾಡು ೨೦೦೦ ವರ್ಷಗಳಿಂದಲೂ ಕಾವೇರಿಯಿಂದ ನೀರು ಹಾಯಿಸಿಕೊಂಡು ಬೆಳೆ ಬೆಳೆಯುತ್ತಿರುವುದನ್ನು ಗಮನಕ್ಕೆ ತಂದುಕೊಂಡರೆ ಹಾಗೂ ಕರ್ನಾಟಕಕ್ಕೆ ಹೋಲಿಸಿದಾಗ ವಿಸ್ತಾರದ ದೃಷ್ಟಿಯಲ್ಲಿ ತಮಿಳುನಾಡಿನ ಅಗಾಧತೆಯನ್ನು ಗಮನಿಸಿದರೆ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು ಹೇಳಲು ಸಾಧ್ಯವಾಗದು.

೩.೦ ಸಂಕ್ಷಿಪ್ತ ಐತಿಹಾಸಿಕ ಹಿನ್ನೆಲೆ

೩.೧ ಸುಮಾರು ೨೦೦೦ ವರ್ಷಗಳಷ್ಟು ಹಿಂದೆ ತಮಿಳುನಾಡಿನ ರಾಜನಾದ ಕಾರಿಕಲ್ಲ ಚೋಳ, ಚೋಳ ಆಡಳಿತದ ಅವಧಿಯಲ್ಲೆ ಕಲ್ಲನಾಯ ಎಂಬ ಅಣೆಕಟ್ಟನ್ನು ಕಟ್ಟಿದ. ಈ ಅಣೆಕಟ್ಟು ಕಾವೇರಿ ನದಿಗೆ ಅಡ್ಡವಾಗಿ ಕಲ್ಲು ಬಂಡೆಗಳಿಂದ ನಿರ್ಮಿಸಲ್ಪಟ್ಟಿದ್ದು ಕಾವೇರಿಯ ನೀರಿನ ಮಟ್ಟವನ್ನು ಏರಿಸಿ ನದಿ ಮುಖಜ ಭೂಮಿಯಲ್ಲಿ ವಿಸ್ತಾರವಾಗಿದ್ದ ಜಮೀನಿಗೆ ನೀರು ಹಾಯಿಸುವ ಉದ್ದೇಶ ಹೊಂದಿತ್ತು. ವಿಶ್ವದ ಇತರ ಭಾಗಗಳಲ್ಲಿ ಹರಿಯುತ್ತಿದ್ದ ನದಿಗಳು ಕೃಷಿಗೆ ಬಳಕೆಯಾಗದಿದ್ದ ಕಾಲದಲ್ಲಿ ಕಾವೇರಿ ನದಿಯನ್ನು ೨೦೦೦ ವರ್ಷಗಳಷ್ಟು ಹಿಂದೆಯೇ ಅದರ ಮುಖಜ ಭೂಮಿಯಲ್ಲಿ ವಿಸ್ತೃತ ನೀರಾವರಿ ಉದ್ದೇಶಕ್ಕೆ ಬಳಸಿಕೊಳ್ಳಲಾಗಿತ್ತು. (ಎರಡು ಶತಮಾನಗಳ ಹಿಂದೆ ಬ್ರಿಟಿಷರು ಭಾರತಕ್ಕೆ ಬಂದು ಈ ದೇಶವನ್ನು ಗೆದ್ದಾಗ ಕಾವೇರಿಯ ಅಣೆಕಟ್ಟನ್ನು ಕಂಡು ನದಿಗಳನ್ನು ವ್ಯವಸಾಯಕ್ಕೆ ಬಳಸಿಕೊಳ್ಳುವ ಕಲೆಯನ್ನು ಕಲಿತುಕೊಂಡರು. ಮುಂದೆ ಅವರು ನೀರನ್ನು ನಿಯಂತ್ರಿಸಲು ಗೇಟುಗಳನ್ನು ಜೋಡಿಸುವ ಮೂಲಕ ಮತ್ತು ಚೋಳ ರಾಜನ ಕಲ್ಲನಾಯನ ಮೇಲೆ ಕಲ್ಲುಕಟ್ಟೆ ಕಟ್ಟುವ ಮೂಲಕ ಸುಧಾರಿತ ತಂತ್ರಜ್ಞಾನದ ನೆರವಿನಿಂದ ಅದನ್ನು ಆಧುನೀಕರಿಸಿದರು. ತರುವಾಯ ಅವರು ಗೋದಾವರಿ, ಕೃಷ್ಣಾ ಮತ್ತು ಉತ್ತರಭಾರತದಲ್ಲಿ ನಿರಂತರವಾಗಿ ಹರಿಯುವ ಸಿಂಧೂ, ಗಂಗಾ ಮತ್ತು ಅವುಗಳ ಉಪನದಿಗಳಿಗೆ ಅಡ್ಡವಾಗಿ ಅಣೆಕಟ್ಟುಗಳನ್ನು ಕಟ್ಟಿದರು. ಆ ಮೂಲಕ ಅವರು ಆ ಕಾಲದಲ್ಲಿ ವಿಶ್ವದಲ್ಲಿಯೇ ಅತಿ ದೊಡ್ಡದು ಎನಿಸಿದ್ದ ಅತಿದೊಡ್ಡ ನೀರಾವರಿ ಜಾಲವನ್ನು ಸೃಷ್ಟಿಸಿದ್ದರು. ಈ ಕಾರ್ಯಗಳಲ್ಲಿ ದಕ್ಷಿಣಭಾರತದಲ್ಲಿ ಸರ್ ಆರ್ಥರ್ ಕಾಟನ್ ಮತ್ತು ಉತ್ತರ ಭಾರತದಲ್ಲಿ ಸರ್ ಪ್ರೊ. ಕಾಟ್ಲೆ ಎಂಬ ಇಂಜಿನಿಯರುಗಳು ಪ್ರಸಿದ್ಧರಾಗಿದ್ದಾರೆ.

೩.೨ ಪ್ರಾಯಶಃ ವಿಶ್ವದ ನೀರಾವರಿ ಇತಿಹಾಸದಲ್ಲಿ ಈಜಿಪ್ಟನ್ನು ಬಿಟ್ಟಂತೆ ಮೊದಲಬಾರಿಗೆ ಭೂಪ್ರದೇಶಕ್ಕೆ ನೀರೊದಗಿಸಲು ಕಾವೇರಿ ನದಿಯನ್ನು ಬಳಸಿಕೊಳ್ಳಲಾಯ್ತು. ಆ ಕಾಲದಲ್ಲಿ ಕರ್ನಾಟಕ ವಲಯದಲ್ಲಿ (ಹಿಂದಿನ ಮೈಸೂರು ರಾಜ್ಯದಲ್ಲಿ) ಕಾವೇರಿ ನದಿಯಿಂದ ನೀರನ್ನು ಬಳಸಿಕೊಂಡು ಜಮೀನುಗಳಿಗೆ ನೀರೊದಗಿಸಲು ಆ ನದಿಗೆ ಅಡ್ಡವಾಗಿ ಯಾವುದೇ ಅಂತಹ ಕಟ್ಟೆಗಳು ಇರಲಿಲ್ಲ. ಕೇವಲ ಹದಿಮೂರು ಮತ್ತು ಹದಿನಾಲ್ಕನೇ ಶತಮಾನಗಳಲ್ಲಿ ವಿಜಯನಗರ ಸಾಮ್ರಾಜ್ಯದ ಉತ್ತುಂಗ ಸ್ಥಿತಿಯಲ್ಲಿದ್ದಾಗ ಮತ್ತು ತಮಿಳುನಾಡಿನ ತಂಜಾವೂರು ಮತ್ತು ಮಧುರೈವರೆಗೆ ಸಾಮ್ರಾಜ್ಯವು ಚಾಚಿಕೊಂಡಿದ್ದಾಗ

ತಂಜಾವೂರು ಬಳಿ ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿದ್ದ ಅಣೆಕಟ್ಟನ್ನು ವಿಜಯನಗರದ ಅರಸರುಗಳು ಕಂಡರು. ತರುವಾಯ ವಿಜಯನಗರದ ಅರಸರುಗಳು ತುಂಗಭದ್ರಾ ನದಿಗೆ ಅಡ್ಡಲಾಗಿ ನದಿಯು ಮಾರ್ಗ ಬದಲಿಸುವಂತೆ ಕಟ್ಟೆಗಳನ್ನು ಕಟ್ಟಿ ನದಿ ನೀರಿನಿಂದ ಜಮೀನುಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿದರು. ಆ ಕಾಲದಲ್ಲಿ ಮೈಸೂರು ಪ್ರಾಂತ್ಯದಲ್ಲಿ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ವಿಜಯನಗರ ಸಾಮ್ರಾಜ್ಯದ ಸಾಮಂತನಾಗಿದ್ದ ಮಾಧವ ಮಂತ್ರಿ ಎಂಬ ಸೇನಾನಿ ಮೊದಲಬಾರಿಗೆ ನೀರಾವರಿ ಉದ್ದೇಶಗಳಿಗಾಗಿ ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು ಕಟ್ಟಿಸಿದನು. ಇಂದು ಕೂಡಾ ಈ ಅಣೆಕಟ್ಟು ತಲಕಾಡುವಿನ ನೀರಾವರಿ ಜಮೀನುಗಳ ಬಳಿ ಉಳಿದುಕೊಂಡಿದೆ.

೩.೩ ವಿಶಾಲವಾದ ಭೂಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲು ಮೈಸೂರು ರಾಜ್ಯದಲ್ಲಿ ನೀರನ್ನು ಸಂಗ್ರಹಿಸುವ ಉದ್ದೇಶದಿಂದ ಕಾವೇರಿ ನದಿಗೆ ಅಡ್ಡಲಾಗಿ ಕನ್ನಂಬಾಡಿಯ ಬಳಿ ಒಂದು ಅಣೆಕಟ್ಟನ್ನು ಕಟ್ಟಬೇಕೆಂದು ಮೊದಲಬಾರಿಗೆ ಕಲ್ಪನೆ ಮಾಡಿಕೊಂಡ ಕೀರ್ತಿ ಟಿಪ್ಪು ಸುಲ್ತಾನನಿಗೆ ಸಲ್ಲುತ್ತದೆ. ಹಾಗಿದ್ದರೂ ಅವನು ಮೈಸೂರು ಯುದ್ಧದಲ್ಲಿ ಸೋತು ಬ್ರಿಟಿಷರಿಂದ ಹತನಾದದ್ದರಿಂದ ಅವನ ಕಲ್ಪನೆ ಸಾಕಾರಗೊಳ್ಳಲಿಲ್ಲ. ತರುವಾಯ ಒಡೆಯರನ್ನು ಮೈಸೂರು ರಾಜ್ಯದ ದೊರೆಗಳೆಂದು ಮತ್ತೆ ಮಾನ್ಯಮಾಡಿದಾಗ ಚಿಕ್ಕದೇವರಾಜ ಒಡೆಯರು ಮತ್ತು ಮುಂದಿನ ದೊರೆಗಳು ಕಾವೇರಿಗೆ ಅಡ್ಡಲಾಗಿ ಅನೇಕ ಅಣೆಕಟ್ಟುಗಳನ್ನು ಕಟ್ಟಿದರು. ಚಾಮರಾಜ ಒಡೆಯರ ಕಾಲದಲ್ಲಿ ಇನ್ನೂ ಹೆಚ್ಚಿನ ಅಣೆಕಟ್ಟುಗಳನ್ನು ಕಟ್ಟಲು ಚಿಂತಿಸುತ್ತಿದ್ದಾಗ ಮದರಾಸು ಪ್ರಾಂತವನ್ನು ಆಳುತ್ತಿದ್ದ ಬ್ರಿಟಿಷ್ ಗವರ್ನರುಗಳು ೧೮೯೨ರಲ್ಲಿ ಮೈಸೂರು ರಾಜ್ಯಕ್ಕೆ ಷರತ್ತು ಹಾಕಿದರು. ಆ ಷರತ್ತಿನ ಪ್ರಕಾರ ಕಾವೇರಿ ಮತ್ತು ಅದರ ಉಪನದಿಗಳಿಗೆ ಅಡ್ಡಲಾಗಿ ಅಡ್ಡಕಟ್ಟೆಗಳನ್ನು ಕಟ್ಟಲು ಮೈಸೂರು ಇಚ್ಛಿಸಿದರೆ ಮೈಸೂರು ಸರ್ಕಾರವು ಮದರಾಸು ಸಕಾರದ ಅನುಮತಿಯನ್ನು ಪಡೆಯಬೇಕು. ಏಕೆಂದರೆ ಯಾವುದೇ ರೀತಿಯಲ್ಲಿ ಮೇಲಿನ ಹರಿವಿಗೆ ಅಡ್ಡಿ ಒಡ್ಡಿದರೆ ಮದರಾಸು ಪ್ರಾಂತದ ಕಾವೇರಿ ಮುಖಜಭೂಮಿಯಲ್ಲಿ ಸದ್ಯ ಇದ್ದ ನೀರಾವರಿಯ ಮೇಲೆ ಪರಿಣಾಮ ಉಂಟಾಗುವುದು ಎಂದು ಮದರಾಸು ಭಾವಿಸಿತ್ತು. ಆದರೆ ಅದೇ ರೀತಿಯ ವ್ಯತಿರಿಕ್ತ ಷರತ್ತನ್ನು ಮದರಾಸು ಸರ್ಕಾರದ ಮೇಲೆ ಹೇರಿರಲಿಲ್ಲ. ಈ ಪ್ರಕಾರ ಏಕಪಕ್ಷೀಯವಾದ ಕರಾರು ಏರ್ಪಟ್ಟಿದ್ದರಿಂದ ಮೈಸೂರಿಗೆ ಹಾನಿಯಾಗಿತ್ತು.

೩.೪ ಕೃಷ್ಣರಾಜ ಒಡೆಯರ ಆಡಳಿತದ ಕಾಲದಲ್ಲಿ ಭಾರತರತ್ನ ಎಂ. ವಿಶ್ವೇಶ್ವರಯ್ಯ ಕೃಷ್ಣರಾಜಸಾಗರ ಅಣೆಕಟ್ಟಿನ ಯೋಜನೆಯನ್ನು ಕೈಗೆತ್ತಿಕೊಂಡರು. ಅದೇ ಕಾಲದಲ್ಲಿ ಅಂದರೆ ೧೯೨೦ನೇ ದಶಕದಲ್ಲಿ ಮದರಾಸು ಸರ್ಕಾರವು ಮೆಟ್ಟೂರು ಅಣೆಕಟ್ಟಿನ ಯೋಜನೆಯನ್ನು ಕೈಗೆತ್ತಿಕೊಂಡಿತ್ತು. ೧೮೯೨ರಿಂದಲೂ ಕಾವೇರಿ ನೀರಿನ ಹಂಚಿಕೆ ಕುರಿತಂತೆ ಭಿನ್ನಾಭಿಪ್ರಾಯಗಳು ಮತ್ತು ವ್ಯಾಜ್ಯಗಳು ಹುಟ್ಟಿಕೊಂಡಿದ್ದವು. ಭಾರತರತ್ನ ವಿಶ್ವೇಶ್ವರಯ್ಯನವರ ಉಸ್ತುವಾರಿಯಲ್ಲಿ ಮೈಸೂರು ಪ್ರಾಂತವು ಕೃಷ್ಣರಾಜ ಸಾಗರ ಅಣೆಕಟ್ಟನ್ನು ನಿರ್ಮಿಸಲು ಪೂರ್ವಭಾವಿ ತಯಾರಿಯನ್ನು ಆರಂಭಿಸಿದಾಗ ಮದರಾಸಿನ ವಿರೋಧ ತೀವ್ರವಾಯಿತು. ಈ ವಿವಾದವನ್ನು ಬ್ರಿಟಿಷರ ಕೇಂದ್ರ ಸರ್ಕಾರಕ್ಕೆ ಮಧ್ಯಸ್ತಿಕೆಗೆಂದು ಒಪ್ಪಿಸಲಾಯ್ತು. ೧೯೨೪ನೇ ಇಸವಿಯಲ್ಲಿ ಮಧ್ಯಸ್ತಿಕೆಯ ಮೂಲಕ ಒಪ್ಪಂದಕ್ಕೆ ಬರಲಾಯ್ತು. ಈ ಒಪ್ಪಂದದಲ್ಲಿ ಕೃಷ್ಣರಾಜಸಾಗರ ಅಣೆಕಟ್ಟು ಮತ್ತು ಮದರಾಸು ಪ್ರಾಂತ್ಯದಲ್ಲಿದ್ದ ಮೆಟ್ಟೂರು ಅಣೆಕಟ್ಟಿನ ಸಂಗ್ರಹಣಾ ಸಾಮರ್ಥ್ಯವನ್ನು ೧೯೨೪ರಲ್ಲಿ ನಿಗದಿಪಡಿಸಲಾಯ್ತು. ೧೮೯೨ರ ಷರತ್ತನ್ನು ಮುಂದುವರೆಸಲಾಯ್ತು ಮತ್ತು ೧೯೨೪ರ ಒಪ್ಪಂದದಲ್ಲಿ ಕೂಡಾ ಅದನ್ನು ಮತ್ತೆ ನಮೂದಿಸಿ ನಿರ್ಬಂಧಿಸಲಾಯ್ತು. ಹಾಗಿದ್ದರೂ ಐವತ್ತು ವರ್ಷಗಳ ತರುವಾಯ ಅಂದರೆ ೧೯೭೪ರಲ್ಲಿ ಈ ಒಪ್ಪಂದವನ್ನು ಪರಾಮರ್ಶೆಗೆ ಒಳಪಡಿಸಬೇಕಾಯ್ತು. ಇದಕ್ಕೆ ಶ್ರೀ ವಿಶ್ವೇಶ್ವರಯ್ಯನವರ ದೂರದರ್ಶಿತ್ವ ಮತ್ತು ಜಾಣತನವೇ ಕಾರಣ ಎನ್ನಬಹುದು. ಈ ಎರಡೂ ಒಪ್ಪಂದಗಳಲ್ಲೂ ಕಾಣಿಸಿಕೊಂಡಿದ್ದ ಏಕಪಕ್ಷೀಯವಾಗಿದ್ದ ಷರತ್ತು ಮೈಸೂರು ರಾಜ್ಯದ ಉತ್ತರಾಧಿಕರಿಯಾಗಿದ್ದ ಕರ್ನಾಟಕಕ್ಕೆ ಕಿರಿಕಿರಿಯನ್ನುಂಟು ಮಾಡುತ್ತಿತ್ತು. ಏಕೆಂದರೆ ತನ್ನ ಪ್ರದೇಶದೊಳಗೆ ಕಾವೇರಿನದಿ ತೀರದ ಅಭಿವೃದ್ಧಿಗೆ ಈ ಷರತ್ತು ಪ್ರತಿಬಂಧವನ್ನೊಡ್ಡಿತ್ತು. ರಾಜ್ಯಗಳ ಪುನರ್ವಿಂಗಡನೆಯಾದ ತರುವಾಯ ಹಿಂದಿನ ಮದರಾಸು ಪ್ರಾಂತ ಮತ್ತು ಹಿಂದಿನ ಮೈಸೂರು ರಾಜ್ಯಗಳಿಗೆ ಅನುಕ್ರಮವಾಗಿ ಉತ್ತರಾಧಿಕಾರಿಗಳಾಗಿ ತಮಿಳುನಾಡು ಮತ್ತು ಕರ್ನಾಟಕ

ರಾಜ್ಯಗಳು ರೂಪುಗೊಂಡಾಗ ಅವು ಬ್ರಿಟಿಷರ ಆಳ್ವಿಕೆಗಿಂತ ಭಿನ್ನವಾಗಿ ರಾಜಕೀಯವಾಗಿ ಸಮಾನತೆಯುಳ್ಳ ರಾಜ್ಯಗಳಾದವು.

೩.೫ ಸಹಜವಾಗಿ ಕರ್ನಾಟಕ ಸರ್ಕಾರವು ಒಪ್ಪಂದವನ್ನು ಪುನರ್ ವಿಮರ್ಶೆಗೆ ಒಳಪಡಿಸುವವರೆಗೆ ಕಾಯಲು ಸಿದ್ಧವಾಗಿರಲಿಲ್ಲ. ಏಕೆಂದರೆ ಕರ್ನಾಟಕ ತನ್ನ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಕಾತರದಿಂದಿತ್ತು. ಆಗಿನ ಮುಖ್ಯಮಂತ್ರಿ ದೇವರಾಜ ಅರಸು, ನೀರಾವರಿ ಸಚಿವ ಶ್ರೀ ಚೆನ್ನಬಸಪ್ಪ ಮತ್ತು ಆನಂತರದ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರಂತಹ ನಾಯಕರುಗಳ ದೂರದೃಷ್ಟಿ ಮತ್ತು ಎದೆಗಾರಿಕೆಯ ಫಲವಾಗಿ ೧೯೭೦ರ ಮುಂದಿನ ವರ್ಷಗಳಲ್ಲಿ ಕಬಿನಿ, ಹಾರಂಗಿ, ಹೇಮಾವತಿ ಮುಂತಾದ ಅನೇಕ ಸಂಗ್ರಹಣಾ ಅಣೆಕಟ್ಟುಗಳನ್ನು ಕಟ್ಟಲಾಯ್ತು. ೧೮೯೨ ಮತ್ತು ೧೯೨೪ರ ಕರಾರುಗಳನ್ನು ಮುಂದೊಡ್ಡಿ ತಮಿಳುನಾಡು ಸರ್ಕಾರ ನಿರ್ಬಂಧಿಸುತ್ತಿದ್ದರೂ ಕೇಂದ್ರ ಸರ್ಕಾರದ ಅನುಮತಿ ಪಡೆಯದೇ ಕರ್ನಾಟಕ ಸರ್ಕಾರವು ಅನೇಕ ಅಣೆಕಟ್ಟುಗಳನ್ನು ನಿರ್ಮಿಸಿಕೊಂಡಿತು. ಆ ಕಾಲದಿಂದಲೂ ಎರಡೂ ರಾಜ್ಯಗಳ ನಡುವೆ ಗಂಭೀರ ಸ್ವರೂಪದಲ್ಲಿ ವ್ಯಾಜ್ಯ ನಡೆಯುತ್ತಿದ್ದು ಕ್ರಮೇಣ ತೀವ್ರಗೊಳ್ಳುತ್ತಿದ್ದರಿಂದ ಅಂತಿಮವಾಗಿ ೧೯೯೦ರಲ್ಲಿ ಅಂತರರಾಜ್ಯ ಜಲ ವ್ಯಾಜ್ಯ ಕಾಯಿದೆ ೧೯೫೬ರ ಅಡಿಯಲ್ಲಿ ಕಾವೇರಿ ನ್ಯಾಯಮಂಡಳಿಯನ್ನು ಸ್ಥಾಪಿಸಲಾಯ್ತು.

೩.೬ ೧೯೯೧ನೇ ಇಸವಿಯಲ್ಲಿ ತಮಿಳುನಾಡು ಸರ್ಕಾರವು ಸನ್ನಿಹಿತವಾಗಿದ್ದ ಅನಾವೃಷ್ಟಿ ವರ್ಷದಿಂದ ಕಂಗೆಟ್ಟು ಸರ್ವೋನ್ನತ ನ್ಯಾಯಾಲಯದಲ್ಲಿ ರಿಟ್ ಅರ್ಜಿಯೊಂದನ್ನು ಸಲ್ಲಿಸಿ, ಪರಿಹಾರಕ್ಕಾಗಿ ಬೇಡಿಕೊಂಡಿತು. ಸರ್ವೋನ್ನತ ನ್ಯಾಯಾಲಯದ ನಿರ್ದೇಶನದಂತೆ ಕಾವೇರಿ ನ್ಯಾಯಮಂಡಳಿಯು ಮಧ್ಯಂತ ಆದೇಶವೊಂದನ್ನು ಕೊಟ್ಟಿತು. ಈ ಆದೇಶ ಕರ್ನಾಟಕದ ಪಾಲಿಗೆ ಕಠೋರವಾಗಿತ್ತು. ಏಕೆಂದರೆ ಕರ್ನಾಟಕ ಪ್ರತಿವರ್ಷವೂ ನಿಶ್ಚಿತ ಪ್ರಮಾಣದಲ್ಲಿ ಅಂದರೆ ೨೦೫ ಟಿ.ಎಂ.ಸಿ. ನೀರನ್ನು ಮೆಟ್ಟೂರು ಅಣೆಕಟ್ಟೆಗೆ ನಿಗದಿತ ವೇಳಾಪಟ್ಟಿಯಂತೆ ತಮಿಳುನಾಡಿಗೆ ಬಿಡಬೇಕಾಗಿತ್ತು. ಜತೆಯಲ್ಲಿ ಅಂತಿಮ ಆದೇಶದವರೆಗೆ ಕರ್ನಾಟಕ ತನ್ನ ನೀರಾವರಿ ಪ್ರದೇಶವನ್ನು ೧೧.೨ ಹೆಕ್ಟೇರ್‌ಗೆ ಮಿತಿಗೊಳಪಡಿಸಿಕೊಳ್ಳಬೇಕಾಗಿತ್ತು. ಈ ಆದೇಶವು ಬಹುಮಟ್ಟಿಗೆ ಅಸಂಬದ್ಧವಾಗಿತ್ತು ಮತ್ತು ಅವ್ಯವಹಾರಿಕವೂ ಆಗಿತ್ತು. ಕರ್ನಾಟಕದಲ್ಲಿ ಅದರಲ್ಲೂ ಮುಖ್ಯವಾಗಿ ಮಂಡ್ಯ ಮತ್ತು ಬೆಂಗಳೂರಿನಲ್ಲಿ ಹಿಂಸಾತ್ಮಕ ಚಳವಳಿಗಳು ನಡೆದುವು ಮತ್ತು ರಕ್ತ ಕೂಡಾ ಹರಿಯಿತು. ದುಃಸ್ಥಿತಿಯಿದ್ದ ವರ್ಷಗಳಲ್ಲಿ, ಮಳೆ ಕಡಿಮೆ ಬಿದ್ದ ಕಾಲದಲ್ಲಿ ಮತ್ತು ನದಿಗಳಲ್ಲಿ ಕಡಿಮೆ ಹರಿವು ಇದ್ದ ಕಾಲದಲ್ಲಿ ಕರ್ನಾಟಕ ತನ್ನ ಜಲಾಶಯಗಳನ್ನು ಖಾಲಿಮಾಡಿಕೊಳ್ಳದೇ ನಿಗದಿತ ಪ್ರಮಾಣದಲ್ಲಿ ತಮಿಳುನಾಡಿಗೆ ನೀರು ಹರಿಸಲು ಸಾಧ್ಯವೇ ಇರಲಿಲ್ಲ. ಇದರಿಂದ ತಮಿಳುನಾಡಿನೊಂದಿಗೆ ಘರ್ಷಣೆಗಳು ಹೆಚ್ಚಾದವು. ಇದರ ಪರಿಣಾಮವಾಗಿ ಕೇಂದ್ರ ಸರ್ಕಾರ ಮತ್ತು ಸರ್ವೋನ್ನತ ನ್ಯಾಯಾಲಯಗಳು ಮಧ್ಯಪ್ರವೇಶಿಸಿದವು ಮತ್ತು ಎರಡೂ ರಾಜ್ಯಗಳ ಧೋರಣೆ ಕುರಿತಂತೆ ಅಸಂತೃಪ್ತಿಯನ್ನು ವ್ಯಕ್ತಪಡಿಸಿದವು. ಮಧ್ಯಂತರ ಆದೇಶದ ಅನುಷ್ಠಾನವನ್ನು ನೋಡಿಕೊಳ್ಳಲು ಪ್ರಧಾನಮಂತ್ರಿಗಳ ಅಧ್ಯಕ್ಷತೆಯಲ್ಲಿ ಕಾವೇರಿ ಕಣಿವೆ ಪ್ರಾಧಿಕಾರವನ್ನು ಸ್ಥಾಪಿಸಲಾಯ್ತು. ಆದರೆ ಇದರಿಂದ ಎರಡೂ ರಾಜ್ಯಗಳ ನಡುವೆ ಅತೃಪ್ತಿ ಮತ್ತು ಪರಸ್ಪರರ ದೋಷಾರೋಪಣೆ ಹೆಚ್ಚಿತು. ಕಷ್ಟದಶೆಯ ಸೂತ್ರಗಳನ್ನು ಪುಷ್ಟಿಗೊಳಿಸುವ ಪ್ರಯತ್ನಗಳು ವಿಫಲವಾದವು.

೪.೧ ಅನೇಕ ಏರಿಳಿತಗಳ ತರುವಾಯ ಕಾವೇರಿ ನ್ಯಾಯಮಂಡಳಿಯು ಸುಮಾರು ಹದಿನೇಳು ವರ್ಷಗಳ ತರುವಾಯ ಅಂದರೆ ಫೆಬ್ರವರಿ ೫, ೨೦೦೭ರಂದು ಅಂತಿಮ ತೀರ್ಪನ್ನು ನೀಡಿತು. ಈ ತೀರ್ಪು ಅಥವಾ ಆದೇಶವು ಕೆಲವು ಒಳ್ಳೆಯ ಅಂಶಗಳನ್ನು ಒಳಗೊಂಡಿದೆ:

ಮೊದಲನೆಯದಾಗಿ, ಅದು ೧೮೯೨ ಮತ್ತು ೧೯೨೪ರ ಒಪ್ಪಂದಗಳನ್ನು ರದ್ದುಪಡಿಸಿ ಎರಡೂ ರಾಜ್ಯಗಳೂ ಸಮಾನವಾದವು ಎಂದು ಘೋಷಿಸಿದೆ.

ಎರಡನೆಯದಾಗಿ, ಎರಡು ಮುಖ್ಯ ರಾಜ್ಯಗಳಾದ ಕರ್ನಾಟಕ ಮತ್ತು ತಮಿಳುನಾಡುಗಳ ನಡುವೆ ಹಾಗೂ ಕಾವೇರಿ ತೀರದ ಇತರ ಎರಡು ಸಣ್ಣ ರಾಜ್ಯಗಳಾದ ಪಾಂಡಿಚೆರಿ ಮತ್ತು ಕೇರಳಗಳ

ನಡುವೆ ನೀರಾವರಿಗೊಳಗಾಗಿರುವ ಪ್ರದೇಶವನ್ನು ಆ ರಾಜ್ಯಗಳಲ್ಲಿರುವ ಜನಸಂಖ್ಯೆ ಮತ್ತು ಇತರ ಕ್ಷೇತ್ರಗಳ ಅಗತ್ಯತೆಗಳನ್ನು ಪರಿಗಣಿಸಿ ಸಮಾನ ಹಕ್ಕುಗಳೆಂದು ತೋರುವ ರೀತಿಯಲ್ಲಿ ನದಿ ನೀರಿನ ಹಂಚಿಕೆ ಮಾಡಿದೆ.

ಮೂರನೆಯದಾಗಿ, ಕರ್ನಾಟಕ ತನ್ನ ಸ್ವಂತದ ಅಗತ್ಯತೆಗಳನ್ನು ನಿರ್ಲಕ್ಷಿಸಿ ಪ್ರತಿವರ್ಷವೂ ನಿಗದಿತ ಪ್ರಮಾಣದಲ್ಲಿ ತನ್ನ ಜಲಾಶಯಗಳಿಂದ ನೀರು ಬಿಡಬೇಕೆಂದು ಮಧ್ಯಂತರ ಆದೇಶದಲ್ಲಿ ನಿಗದಿಪಡಿಸಲಾಗಿದ್ದುದನ್ನು ಈ ತೀರ್ಪು ತೊಡೆದು ಹಾಕಿದೆ. ಇದಕ್ಕೆ ಪ್ರತಿಯಾಗಿ ಸಾಮಾನ್ಯ ವರ್ಷದಲ್ಲಿ ಕರ್ನಾಟಕವು (೧೮೨+ಪರಿಸರದ ಉದ್ದೇಶಕ್ಕೆ ೧೦ ಟಿ.ಎಂ.ಸಿ.) ನೀರನ್ನು ಮಾತ್ರ ಕರ್ನಾಟಕ ಬೇಡಿಕೊಂಡಂತೆ ಮೆಟ್ಟೂರಿನಲ್ಲಲ್ಲದೇ ಬಿಳಿಗುಂಡ್ಲುವಿನ ಬಳಿಯಿರುವ ಗಡಿಯಲ್ಲಿ ಬಿಡಬೇಕು ಎಂದು ಗೊತ್ತುಪಡಿಸಿದೆ. ಇದಕ್ಕೂ ಹೆಚ್ಚಾಗಿ, ಕೊರತೆ ಉಂಟಾಗುವ ವರ್ಷದಲ್ಲಿ ಸಾಮಾನ್ಯ ವರ್ಷದಲ್ಲಿ ಮಾಡಿರುವ ಹಂಚಿಕೆಗನುಸಾರವಾಗಿ ನಾಲ್ಕು ರಾಜ್ಯಗಳ ನಡುವೆ ಬಿದ್ದ ಮಳೆಯ ಪ್ರಮಾಣದನು ಗುಣವಾಗಿ ಇಳಿಕೆ ಮಾಡಬೇಕು. ಇದರ ಅರ್ಥವೇನೆಂದರೆ ಕರ್ನಾಟಕವು ಗಡಿಯಲ್ಲಿ ತಮಿಳುನಾಡಿಗೆ ಬಿಡುವ ನೀರಿನ ಪ್ರಮಾಣದಲ್ಲಿ ಆ ವರ್ಷದಲ್ಲಿ ಪ್ರಮಾಣಾನುಸಾರವಾಗಿ ಇಳಿಕೆ ಮಾಡಬಹುದು. ಈ ಪ್ರಕಾರ ಆಪತ್ತು ಸೂತ್ರ ತಾನಾಗಿಯೇ ಘೋಷಿಸಲ್ಪಟ್ಟಿದೆ.

ನಾಲ್ಕನೆಯದಾಗಿ, ಕರ್ನಾಟಕದಲ್ಲಿ ೧೧.೨ ಲಕ್ಷ ಹೆಕ್ಟೇರ್ ಕೃಷಿ ಭೂಮಿ ಇರಬೇಕು ಎಂಬ ಗರಿಷ್ಠಮಟ್ಟ ಮೀರಬಾರದು ಎಂಬುದಿದ್ದುದನ್ನು ತೆಗೆದು ಹಾಕಲಾಗಿದೆ. ಕರ್ನಾಟಕ ಸಾಮಾನ್ಯ ವರ್ಷದಲ್ಲಿ ೧೮.೮೫ ಲಕ್ಷ ಹೆಕ್ಟೇರ್‌ವರೆಗೆ ಮತ್ತು ತಮಿಳುನಾಡು ೨೪.೭೧ ಲಕ್ಷ ಹೆಕ್ಟೇರ್‌ವರೆಗೆ ಕೃಷಿಗೆ ಭೂಮಿಯನ್ನು ಬಳಸಿಕೊಳ್ಳಬಹುದು. ಗಾತ್ರಾನುಸಾರವಾಗಿ ಹಂಚಿದರೆ ಮತ್ತು ಕೃಷಿ ಸಂಘಗಳಿಗೆ ವೆಚ್ಚ ವಹಿಸಿದರೆ ಮತ್ತು ಆಧುನಿಕ ಕೃಷಿ ತಂತ್ರಜ್ಞಾನವನ್ನು ಅನ್ವಯಿಸಿಕೊಂಡರೆ ನೀಡಲಾಗಿರುವ ಅದೇ ಪ್ರಮಾಣದ ನೀರಲ್ಲಿ ತಮ್ಮ ಕೃಷಿಭೂಮಿಯನ್ನು ರಾಜ್ಯಗಳು ಹೆಚ್ಚಿಸಿಕೊಳ್ಳಬಹುದು. ಇನ್ನೂ ಹೆಚ್ಚಿಗೆ ಹೇಳುವುದಾದರೆ ಜನಸಂಖ್ಯೆಯ ಅಂಕಿಅಂಶಗಳು ಮತ್ತು ಪ್ರಮಾಣಾನುಸಾರ ಹಂಚಿಕೆಯ ಆಧಾರದಲ್ಲಿ ಗೃಹ ಮತ್ತು ಕೈಗಾರಿಕೆಗಳ ಅಗತ್ಯಗಳಿಗೆ ವರ್ಷಕ್ಕೆ ಬೇಕಾಗಿರುವ ನೀರಿಗೆ ಏರ್ಪಾಡು ಮಾಡಲಾಗಿದೆ.

ಐದನೆಯದಾಗಿ, ಪ್ರತಿ ರಾಜ್ಯದ ಹತ್ತು ದಿನಗಳ ಸಂಗ್ರಹದ ಮೇಲ್ವಿಚಾರಣೆಯನ್ನು ನಡೆಸಲು ಹಾಗೂ ನಿಷ್ಪತ್ತಿ (ಯಾವುದೇ ಎರಡು ಪರಿಣಾಮಗಳಿಗಿರುವ ಸಂಬಂಧ) ಮತ್ತು ಅನುಪಾತ (ಎರಡು ಪರಿಣಾಮಗಳಿಗೂ ಹಾಗೂ ಅನಂತರದ ಎರಡು ಪರಿಣಾಮಗಳಿಗೂ ಇರುವ ದಾಮಾಷಗಳ ಸಮಾನತೆ)ವನ್ನು ನಿಯಂತ್ರಿಸಲು ಒಂದು ನಿಯಂತ್ರಣ ಪ್ರಾಧಿಕಾರ (ಶಾಸನೋಕ್ತ ಅಂಗ)ವನ್ನು ಸ್ಥಾಪಿಸಲು ಸೂಚಿಸಲಾಗಿದೆ.

ಕಡೆಯದಾಗಿ, ಇಲ್ಲಿಯವರೆಗೂ ಸಮರ್ಪಕವಾಗಿ ಕೆಲಸ ಮಾಡುತ್ತಿರುವ ನರ್ಮದಾ ನ್ಯಾಯ ಮಂಡಳಿಯ ತೀರ್ಪಿನ ಮಾದರಿಯನ್ನು ಇಲ್ಲಿಗೂ ಅನ್ವಯಿಸಲಾಗಿದೆ.

೪.೨ ಸರಿಯಾದ ದೃಷ್ಟಿಕೋನದಲ್ಲಿ ಅರ್ಥಮಾಡಿಕೊಂಡರೆ ಮತ್ತು ನ್ಯಾಯಬದ್ಧ ಪ್ರಮಾಣದಲ್ಲಿ ಹಂಚಿಕೆಯನ್ನು ಮಾಡಲಾಗಿದೆ ಎಂಬುದನ್ನು ಅರಿತುಕೊಂಡರೆ ನ್ಯಾಯಮಂಡಳಿಯ ಆದೇಶವು ಕರ್ನಾಟಕಕ್ಕೆ ಯಾವುದೇ ರೀತಿಯಲ್ಲೂ ವಂಚನೆಮಾಡಿಲ್ಲ ಎಂದು ಕಂಡುಬರುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಕರ್ನಾಟಕಕ್ಕೆ ೨೭೦ ಟಿ.ಎಂ.ಸಿ., ತಮಿಳುನಾಡಿಗೆ ೪೧೯ ಟಿ.ಎಂ.ಸಿ., ಕೇರಳಕ್ಕೆ ೩೦ ಟಿ.ಎಂ.ಸಿ. ಮತ್ತು ಪಾಂಡಿಚೆರಿಗೆ ೭ ಟಿ.ಎಂ.ಸಿ. ನೀರನ್ನು ಹಂಚಲಾಗಿದೆ. ಈ ಹಂಚಿಕೆಗಳು ಸಾಮಾನ್ಯ ವರ್ಷದಲ್ಲಿ ೭೪೦ ಟಿ.ಎಂ.ಸಿ.ಯ ಶೇ. ೫೦ರಷ್ಟು ಅವಲಂಬಿಸಬಹುದಾದ ಲಭ್ಯತೆಯ ನೀರಿಗೆ ಸಂವಾದಿಯಾಗಿರುವ ನ್ಯಾಯಸಮ್ಮತ ಹಕ್ಕನ್ನು ಎತ್ತಿಹಿಡಿಯುತ್ತವೆ. ಹಾಗಿದ್ದರೂ ಪ್ರತಿ ರಾಜ್ಯದ ಅಗತ್ಯಗಳನ್ನು ಈ ಹಂಚಿಕೆಗಳು ಪೂರಯಿಸಲಾರವು. ಕಾವೇರಿಯು ಚಿಕ್ಕದಾದ ಜಲಾನಯನ ಭೂಮಿಯಾಗಿದ್ದು ಈ ನದಿಯು ವಿಶ್ವದಲ್ಲಿ ಅತ್ಯಂತ ಅಭಿವೃದ್ಧಿಯನ್ನು ಹೊಂದಿದೆ. ಎರಡು ಶತಮಾನಗಳಿಗೂ ಹೆಚ್ಚುಕಾಲ ಈ ನದಿಯ ನೀರು ಬಳಕೆಯಾಗುತ್ತಿದೆ. ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

೪.೩ ತಮಿಳುನಾಡಿಗೆ ನಿಗದಿಪಡಿಸಲಾಗಿರುವ ೨೦೫ ಟಿ.ಎಂ.ಸಿ. (೧೯೯೧ರಲ್ಲಿ ಪರಿಸರದ ಹರಿವು ಸೇರಿಕೊಂಡಿದೆ) ನೀರನ್ನು ಮಾಸಿಕ ವೇಳಾಪಟ್ಟಿಯಂತೆ ಜೂನ್‌ನಿಂದ ಪ್ರಾರಂಭಿಸಿ (ತೀರ್ಮಾನದ ಪ್ರಕಾರ) ಬಿಡುಗಡೆ ಮಾಡುವುದರ ಬಗ್ಗೆ ಹೇಳುವುದಾದರೆ ತಮಿಳುನಾಡಿನಲ್ಲಿ ಕುರುವೈ ಬೆಳೆಯು ಮುಂಚಿನ ಬೆಳೆಯಾಗಿ ಜೂನ್ ತಿಂಗಳಲ್ಲಿ ಪ್ರಾರಂಭವಾಗುವುದು. ಬೀಜ ನರ್ಸರಿಗಳಿಗೆ ನೀರೂಡಿಸಲು ಆಗ ನೀರಿನ ಅಗತ್ಯ ಉಂಟಾಗುವುದು. ಈ ಕಾರಣದಿಂದಾಗಿ ಮೆಟ್ಟೂರು ಅಣೆಕಟ್ಟು ತನ್ನ ಕೆಲಸವನ್ನು ಪ್ರಾರಂಭಿಸಿದ ದಿನದಿಂದಲು ಪ್ರತಿ ವರ್ಷ ಜೂನ್ ೧೨ರಂದು ತನ್ನ ತೂಬುಗಳನ್ನು ತೆರೆದುಕೊಂಡು ನೀರನ್ನು ಹೊರಕ್ಕೆ ಬಿಡುವುದು. ಇದಕ್ಕೆ ಪ್ರತಿಯಾಗಿ ಕರ್ನಾಟಕದಲ್ಲಿ ಜೂನ್ ಮಧ್ಯಭಾಗದಲ್ಲಿ ಸ್ವಲ್ಪ ಹಿಂದೆ ಅಥವಾ ಮುಂದೆ ಮಾನ್‌ಸೂನ್ ಪ್ರಾರಂಭವಾಗುತ್ತಿದ್ದಂತೆ ಖಾರಿಫ್ ಬೆಳೆಕಾಲ ಆರಂಭವಾಗುವುದು. ಕರ್ನಾಟಕದ ವಿಷಯದಲ್ಲಿ ಹೇಳುವುದಾದರೆ ಅತ್ಯಂತ ದೊಡ್ಡ ಅಣೆಕಟ್ಟಾಗಿರುವ ಕೃಷ್ಣರಾಜಸಾಗರವನ್ನು ಒಳಗೊಂಡಂತೆ ನಾಲ್ಕು ಸಂಗ್ರಹಣಾ ಅಡ್ಡಕಟ್ಟೆಗಳು ಮಾನ್‌ಸೂನ್‌ನ ಪ್ರಾರಂಭದಲ್ಲಿ ಹರಿಯುವ ಎಲ್ಲ ಪ್ರವಾಹವನ್ನು ತಡೆಹಿಡಿಯುವುವು. ಜೂನ್‌ನ ಆರಂಭಿಕ ಹರಿವು ಕೂಡಾ ಈ ಅಡ್ಡಕಟ್ಟೆಗಳಲ್ಲಿ ತಡೆಯಲ್ಪಡುವುದು. ತಮಿಳುನಾಡಿನಲ್ಲಿ ದುರ್ಬಲವಾಗಿರುವ ನೈಋತ್ಯ ಮಾನ್‌ಸೂನ್‌ಅನ್ನು ಅವಲಂಬಿಸಿರುವ ಮೆಟ್ಟೂರಿಗೆ ನೀರು ಹರಿಯುವುದಿಲ್ಲ. ಇದರಿಂದ ಕುರುವೈ ಬೆಳೆ ಬಿತ್ತನೆಯ ಮೇಲೆ ಪರಿಣಾಮ ಉಂಟಾಗುವುದು. ಆದ್ದರಿಂದ ನ್ಯಾಯಮಂಡಳಿಯು ನ್ಯಾಯಸಮ್ಮತವಾಗಿ ವರ್ತಿಸಿ ತೀರ್ಪಿನಲ್ಲಿರುವ ವೇಳಾಪಟ್ಟಿಗಳನುಸಾರವಾಗಿ ಕರ್ನಾಟಕವು ತನ್ನ ಹರಿವಿನಿಂದ ಜೂನ್ ತಿಂಗಳಿನಲ್ಲಿ ನೀರು ಬಿಡುಗಡೆ ಮಾಡಬೇಕೆಂದು ನಿಗದಿಪಡಿಸಿದೆ.

೪.೪ ಯಾವುದೇ ದೊಡ್ಡ ಅಣೆಕಟ್ಟಿನ ನಿಯಮದಂತೆ ನೀರಿನ ಹರಿವನ್ನು ತಡೆಹಿಡಿಯಬಾರದು ಮತ್ತು ಮಾನ್‌ಸೂನ್‌ಗಳ ಪ್ರಾರಂಭದಲ್ಲಿ ಪ್ರರ್ತಿಯಾಗಿ ನೀರನ್ನು ಸಂಗ್ರಹಿಸಬಾರದು ಎಂಬುದು ಸಾಮಾನ್ಯವಾಗಿರುವ ಪರಿಪಾಠವಾಗಿದೆ. ಹೀಗೆ ಮಾಡಿದರೆ ಮಾನ್‌ಸೂನ್ ದಟ್ಟವಾಗಿದ್ದಾಗ ಮತ್ತು ಪ್ರವಾಹ ಅಪ್ಪಳಿಸಿದಾಗ ಹಿನ್ನೀರಿನ ಪರಿಣಾಮದಿಂದಾಗಿ ನದಿಯ ಮೇಲ್ಭಾಗದಲ್ಲಿ ಪ್ರವಾಹ ಉಂಟಾಗುವುದು. ಯಾವುದೇ ರೀತಿಯ ಪ್ರವಾಹ ರಕ್ಷಣಾ ಮೆತ್ತೆ ಇಲ್ಲದಿರುವುದರಿಂದ ಮಾನ್‌ಸೂನ್ ದಟ್ಟವಾಗಿದ್ದಾಗ ಮತ್ತು ನೈಜ ಪ್ರವಾಹ ಬಂದಾಗ ಪ್ರವಾಹದ ಗೇಟುಗಳನ್ನು ತಕ್ಷಣವೇ ತೆರೆಯಲಾಗುವುದು. ಏಕೆಂದರೆ ಅಣೆಕಟ್ಟು ಒಡೆದುಹೋದರೆ ನದಿಯ ಕೆಳಭಾಗದಲ್ಲಿ ಬಿರುಸಾದ ಪ್ರವಾಹ ಉಂಟಾಗುವ ಭಯ ಸಂಬಂಧಿಸಿದವರನ್ನು ಕಾಡುತ್ತಿರುತ್ತದೆ. ಹೀಗೆ ಗೇಟುಗಳನ್ನು ತೆರೆಯುವ ಕಾರ್ಯ ಪ್ರವಾಹದ ಕಾಲ ಮುಗಿಯುವವರೆಗೂ ಪುನರಾವೃತ್ತಿಗೊಳ್ಳುತ್ತಿರುತ್ತದೆ. ಏಕೆಂದರೆ ಮಾನ್‌ಸೂನ್ ಅಥವಾ ಮಳೆಗಾಲದಲ್ಲಿ ಅಣೆಕಟ್ಟನ್ನು ಖಾಲಿಮಾಡಿ ಪ್ರವಾಹ ರಕ್ಷಣಾ ಮೆತ್ತೆಗಳನ್ನು ಸೃಷ್ಟಿಸಲು ಸಾಕಷ್ಟು ಕಾಲಾವಕಾಶವಿರುವುದಿಲ್ಲ. ಒಂದು ಅಣೆಕಟ್ಟಿನ ಸಂಗ್ರಹಣಾ ಸಾಮರ್ಥ್ಯವನ್ನು ಪ್ರವಾಹದ ನೀರನ್ನು ತನ್ನೊಳಗೆ ತುಂಬಿಕೊಳ್ಳಲು ಮತ್ತು ನಿಯಂತ್ರಿಸಲು ಬಳಸಿಕೊಳ್ಳಲಾಗುವುದು. ಆದರೆ ದಟ್ಟವಾಗಿ ಮಳೆ ಬೀಳುತ್ತಿರುವ ಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕೆಳಭಾಗಕ್ಕೆ ನೀರು ಹರಿಯಲು ಅವಕಾಶಮಾಡಿಕೊಡಬೇಕು. ಮಳೆಗಾಲ ವಿಫಲವಾಗಿದ್ದ ಕಾಲದಲ್ಲಿ ಪೂರ್ಣ ಮಟ್ಟದಲ್ಲಿ ನೀರನ್ನು ಸಂಗ್ರಹಿಸಬೇಕು ಮತ್ತು ಮಳೆಗಾಲದ ಪ್ರವಾಹ ನಿಂತ ತಕ್ಷಣವೇ ಅಣೆಕಟ್ಟನ್ನು ತುಂಬುವ ಕಾರ್ಯವನ್ನು ಕೈಗೊಳ್ಳಬೇಕು. ಮಳೆಗಾಲಗಳಲ್ಲಿ ಪ್ರತಿಯೊಂದು ಅಣೆಕಟ್ಟಿನ ನಿರ್ವಹಣೆಯ ಬಗ್ಗೆ ನಿರ್ದಿಷ್ಟವಾಗಿರುವ ನಿಯಂತ್ರಣಾ ಕಾರ್ಯ ವಿಧಾನವಿರುತ್ತದೆ.

೪.೫ ಕಳೆದ ವರ್ಷ ಮತ್ತು ಅದರ ಹಿಂದಿನ ವರ್ಷ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಗುಜರಾತ್‌ಗಳಲ್ಲಿ ಆರಂಭದ ಅನಾವೃಷ್ಟಿ ಆವರ್ತನೆಗೊಂಡಿದ್ದರಿಂದ ಪಡೆದ ಅನುಭವದ ಕಾರಣದಿಂದಾಗಿ ಇದನ್ನು ಮಾಡಲಾಯಿತೇ ಹೊರತು ರಾಜಕೀಯ ಕಾರಣಗಳಿಂದಾಗಿ ಈ ಘಟನೆ ಸಂಭವಿಸಲಿಲ್ಲ. ಇದರ ಪರಿಣಾಮದಿಂದಾಗಿ ಈ ಎಲ್ಲ ರಾಜ್ಯಗಳಲ್ಲಿ ಅಧಿಕ ಪ್ರಮಾಣದಲ್ಲಿ ಪ್ರವಾಹಗಳು ಉಂಟಾದವು ಮತ್ತು ಭಾರಿ ಪ್ರಮಾಣದಲ್ಲಿ ಆಸ್ತಿ ನಷ್ಟ ಉಂಟಾಯಿತು ಹಾಗೂ ಪ್ರಾಣಹಾನಿಯೂ ಉಂಟಾಯಿತು. ಕೇವಲ ಗುಜರಾತಿನಲ್ಲಿ ಈ ರೀತಿಯಲ್ಲಿ ಉಕಾಯ್ ಅಣೆಕಟ್ಟನ್ನು ನಿರ್ವಹಿಸಿದ್ದರಿಂದ ಸೂರತ್‌ಗೆ ನುಗ್ಗಿದ ಪ್ರವಾಹದ ನೀರು ಸುಮಾರು ೧೭ ಅಡಿಗಳಷ್ಟು ಆಳದಲ್ಲಿ

ತುಂಬಿಕೊಂಡಿತ್ತು. ಅಪಾರ ಜೀವಹಾನಿಯಾಗಿದ್ದರ ಜತೆಯಲ್ಲಿ ವಜ್ರ ಒಡೆಯುವ ಉದ್ಯಮೆಗೆ ಭಾರಿ ನಷ್ಟ ಉಂಟಾಯ್ತು. ಈ ಹಿನ್ನೆಲೆಯಲ್ಲಿ ತಮಿಳುನಾಡಿಗೆ ಜೂನ್‌ನಿಂದ ನೀರು ಬಿಡುಗಡೆ ಮಾಡುವಂತೆ ಆದೇಶಿಸಲಾಗಿದೆ. (ತೀರ್ಪಿನಲ್ಲಿ ನಿಗದಿಪಡಿಸಿರುವ ಪ್ರಮಾಣವು ಸಾಮಾನ್ಯ ವರ್ಷಗಳಲ್ಲಿ ಕರ್ನಾಟಕಕ್ಕೆ ಯಾವುದೇ ರೀತಿಯಲ್ಲೂ ಹಾನಿಯನ್ನುಂಟುಮಾಡದು.) ಮಳೆಯ ಕೊರತೆ ಉಂಟಾಗುವ ವರ್ಷಗಳಲ್ಲಿ ಅಥವಾ ಮನಸೋ ಇಚ್ಛೆಯಂತೆ ಮಳೆ ಸುರಿಯುವ ಕಾಲಗಳಲ್ಲಿ ನಿಯಂತ್ರಣ ಪ್ರಾಧಿಕಾರವು ನದಿತೀರದ ರಾಜ್ಯಗಳೊಂದಿಗೆ ಸಮಾಲೋಚನೆ ನಡೆಸಿ ಹೊಂದಾಣಿಕೆ ಮಾಡಿ ಕೊಡುವುದು.

೪.೬ ಈ ಪ್ರಕಾರ ನ್ಯಾಯಮಂಡಳಿಯು ನದಿಯ ಪಾಲುದಾರ ರಾಜ್ಯಗಳಾಗಿರುವ ಕರ್ನಾಟಕ ಮತ್ತು ತಮಿಳುನಾಡುಗಳೆರಡಕ್ಕೂ ನ್ಯಾಯವನ್ನು ಸರಿಯಾಗಿ ಒದಗಿಸಿಕೊಟ್ಟಿದೆ. ಇದಕ್ಕಿಂತಲೂ ಹೆಚ್ಚು ನ್ಯಾಯಸಮ್ಮತವಾಗಿರುವ ತೀರ್ಪು ಇರಲು ಸಾಧ್ಯವಿಲ್ಲ ಎಂದು ಭಾವಿಸಲಾಗಿದೆ. ಇನ್ನೂ ಹೆಚ್ಚಿಗೆ ಹೇಳುವುದಾದರೆ ಯಾವುದೇ ರಾಜ್ಯಕ್ಕೆ ಪ್ರಬಲವಾಗಿರುವ ಕಾರಣವಿದ್ದರೆ ಅದು ನ್ಯಾಯಮಂಡಳಿಯಿಂದ ಯಾವುದೇ ವಿವರಣೆ ಅಥವಾ ಸ್ಪಷ್ಟನೆಯನ್ನು ಕೇಳಬಹುದು. ಐ.ಎಸ್.ಡಬ್ಲ್ಯುಡಿ. ಕಾಯಿದೆ ೧೯೫೬ರಲ್ಲಿ ಹೇಳಿರುವ ಪ್ರಕಾರ ಕಾನೂನಿನ ದೃಷ್ಟಿಯಲ್ಲಿ ಸರ್ವೋನ್ನತ ನ್ಯಾಯಾಲಯದ ತೀರ್ಪಿನಷ್ಟೇ ನ್ಯಾಯಮಂಡಳಿಯ ತೀರ್ಪು ಕೂಡಾ ಹಿರಿಮೆ ಉಳ್ಳದ್ದಾಗಿದೆ. ಯಾವುದೇ ನದಿತೀರದ ರಾಜ್ಯ ನ್ಯಾಯಮಂಡಳಿಯ ತೀರ್ಪನ್ನು ತಿರಸ್ಕರಿಸಿ ಸರ್ವೋನ್ನತ ನ್ಯಾಯಾಲಯದ ಬಳಿಗೆ ಹೋದರೂ ಸರ್ವೋನ್ನತ ನ್ಯಾಯಾಲಯಕ್ಕೆ ಅದನ್ನು ವಿಚಾರಿಸುವ ಅಧಿಕಾರವ್ಯಾಪ್ತಿ ಇಲ್ಲ ಎಂಬುದನ್ನು ಮತ್ತು ನ್ಯಾಯಮಂಡಳಿಯ ತೀರ್ಪನ್ನು ಬದಲಿಸುವ ಅಧಿಕಾರ ಇಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಎಲ್ಲ ನಾಲ್ಕು ರಾಜ್ಯಗಳು (ಅಥವಾ ನಾಲ್ಕರಲ್ಲಿ ಮೂರು ರಾಜ್ಯಗಳು) ತೀರ್ಪನ್ನು ತಿರಸ್ಕರಿಸಿ ಸರ್ವೋನ್ನತ ನ್ಯಾಯಾಲಯದ ಎದುರು ಗುರುತರವಾದ ಲೋಪದೋಷಗಳನ್ನು ಎತ್ತಿ ತೋರಿಸಿದರೂ ನ್ಯಾಯಮಂಡಳಿಯ ತೀರ್ಪಿನಲ್ಲಿ ಕಾನೂನು ರೀತಿಯ ಲೋಪದೋಷಗಳಿರುವುದರಿಂದ ತೀರ್ಪನ್ನು ತಿರಸ್ಕರಿಸಲು ಮೊದಲನೋಟದಲ್ಲಿಯೇ ಆಧಾರಗಳಿವೆ ಎಂದು ಕಂಡುಬಂದರೆ ನ್ಯಾಯಾಲಯವು ಕೇಂದ್ರ ಸರ್ಕಾರಕ್ಕೆ ಇನ್ನೊಂದು ನ್ಯಾಯಮಂಡಳಿಯನ್ನು ಸ್ಥಾಪಿಸುವಂತೆ ನಿರ್ದೇಶನ ನೀಡಬಹುದು. ಹಾಗಾದರೆ ಈ ವಿವಾದವು ಏನನ್ನೂ ಸಾಧಿಸಲಾಗದೇ ಪ್ರಾರಂಭದ ಘಟ್ಟಕ್ಕೆ ಬಂದು ನಿಂತಂತಾಗುವುದು. ಎರಡನೇ ನ್ಯಾಯಮಂಡಳಿಯು ಎರಡು ದಶಕಗಳಿಗೂ ಹೆಚ್ಚು ಕಾಲವನ್ನು ತೆಗೆದುಕೊಳ್ಳಬಹುದು ಮತ್ತು ಎಲ್ಲ ನಾಲ್ಕು ರಾಜ್ಯಗಳಲ್ಲಿ ಬೇಕಾದಷ್ಟು ಹಾನಿ ಉಂಟಾಗಬಹುದು. ಸದ್ಯದ ಪರಿಸ್ಥಿತಿಯಲ್ಲಿ ಈ ಸಾಧ್ಯತೆ ತುಂಬಾ ದೂರದಲ್ಲಿದ್ದಂತೆ ತೋರುತ್ತದೆ ಅಂದರೆ ಹಾಗಾಗಲಾರದು ಎಂದು ಭಾವಿಸಲಾಗಿದೆ.

೪.೭ ಇನ್ನೊಂದು ರೀತಿಯಲ್ಲಿ ಹೇಳಬಹುದಾದರೆ ರಾಜ್ಯಗಳು ಒಟ್ಟು ಸೇರಿಕೊಂಡು ತಮ್ಮ ತಮ್ಮ ಪ್ರದೇಶಗಳಲ್ಲಿ ನೀರಿನ ಸಮರ್ಪಕ ಬಳಕೆಯನ್ನು ಸುಧಾರಿಸಿಕೊಳ್ಳಲು ಒಟ್ಟಾಗಿ ಕೆಲಸಮಾಡಬೇಕು. ಒಪ್ಪಬಹುದಾದ ಒಂದು ಮಾರ್ಗವೆಂದರೆ ಯಾವುದೇ ರೀತಿಯಲ್ಲೂ ಬಳಸಿಕೊಳ್ಳದಿರುವ ಸುಮಾರು ೨೦೦೦ ಟಿ.ಎಂ.ಸಿ.ಯಷ್ಟು ಇರುವ ಹಾಗೂ ಮಲಿನರಹಿತವಾಗಿರುವ ಶುಭ್ರ ನೀರು ಅರೇಬಿಯ ಸಮುದ್ರಕ್ಕೆ ಹರಿದುಹೋಗಿ ನಷ್ಟವಾಗುತ್ತಿದೆ ಎಂದರಿತುಕೊಂಡು ಕರ್ನಾಟಕದ ಪಶ್ಚಿಮಘಟ್ಟಗಳ ಕಡೆಗೆ ದೃಷ್ಟಿಹರಿಸುವುದು. ಅನುಷ್ಠಾನಗೊಳಿಸಲು ಜಂಟಿಯಾಗಿ ಹಣವನ್ನು ಒದಗಿಸುವ ಮೂಲಕ ಪಂಪ್ ಸಂಗ್ರಹಣಾ ಯೋಜನೆಗಳನ್ನು ಕೈಗೆತ್ತಿಕೊಳ್ಳಬಹುದು. ಗಂಗೆಯ ಮಲಿನವಾಗಿರುವ ಮತ್ತು ಉಕ್ಕಿ ಹರಿಯುವ ನೀರನ್ನು ಬೇರೆ ಕಡೆಗೆ ತಿರುಗಿಸಿ ವಿಂಧ್ಯದ ಬೆಟ್ಟಗಳನ್ನು ದಾಟಿಸಿ ಅನೇಕ ರಾಜ್ಯಗಳ ಮೂಲಕ ತುಂಬಾ ದೂರದಿಂದ ನೀರನ್ನು ಹಾಯಿಸಿ ತರಲು ಪ್ರಯತ್ನಿಸದಿರುವುದೇ ಒಳ್ಳೆಯದು. ತುಂಬಾ ದೂರದಿಂದ ಪರಿಸರಕ್ಕೆ ಹಾನಿಯನ್ನುಂಟುಮಾಡುತ್ತ ಹಾಯಿಸುವಾಗ ಒದಗಬಹುದಾದ ನಷ್ಟವನ್ನು ಭರಿಸಿಕೊಂಡು ಗಂಗೆಯಿಂದ ಒಂದು ಕ್ಯುಬಿಕ್ ಮೀಟರ್ ನೀರನ್ನು ತರುವುದಕ್ಕಿಂತ ಕರ್ನಾಟಕ ತನ್ನ ಬಾಗಿಲಿನಲ್ಲಿ ಪಂಪ್ ಸಂಗ್ರಹಣಾ ಯೋಜನೆಗಳ ಮೂಲಕ ಒಂದು ಕ್ಯುಬಿಕ್ ಮೀಟರ್ ನೀರನ್ನು ಪಡೆಯುವುದು ಖಂಡಿತವಾಗಿಯೂ ಕಡಿಮೆ ಖರ್ಚಿನದು ಎಂಬುದನ್ನು ಗಮನಿಸಬೇಕು.

೪.೮ ನ್ಯಾಯಮಂಡಳಿಯು ಕರ್ನಾಟಕಕ್ಕೆ ಚೆನ್ನಾಗಿ ಮಳೆ ಬಿದ್ದ ವರ್ಷಗಳಲ್ಲಿ ಹೆಚ್ಚಿನ ನೀರನ್ನು ತನ್ನ ಸ್ವಂತದ ಉಪಯೋಗಕ್ಕೆ ಬಳಸಿಕೊಳ್ಳಲು ಅವಕಾಶ ನೀಡಿದೆ. ಹೂಳನ್ನು ತೆಗೆದುಹಾಕುವ ಮೂಲಕ ಮತ್ತು ಆಧುನೀಕರಿಸುವ ಮೂಲಕ ಕಾವೇರಿ ಜಲಾನಯನ ಭೂಮಿಯಲ್ಲಿ ತನ್ನ ಮೂಲ ಸಾಮರ್ಥ್ಯವನ್ನು ಪಡೆದುಕೊಳ್ಳಲು ಕರ್ನಾಟಕ ತನ್ನ ಎಲ್ಲ ಕೆರೆಗಳ ಜೀರ್ಣೋದ್ಧಾರ ಮಾಡುವುದೇ ಜಾಣತನ ಎಂಬುದನ್ನು ಅರಿಯಬೇಕು. ಚೆನ್ನಾಗಿ ಮಳೆ ಬಿದ್ದ ವರ್ಷಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಹೆಚ್ಚಿನ ನೀರನ್ನು ಸಂಗ್ರಹಿಸಿಟ್ಟುಕೊಳ್ಳಲು ಹೊಸ ಕೆರೆ-ಕಟ್ಟೆಗಳನ್ನು ಕಟ್ಟಿಕೊಳ್ಳಬೇಕು. ಈ ಕೆರೆಗಳು ಅಲ್ಲಿ-ಇಲ್ಲಿ ಚೆಲ್ಲಾಪಿಲ್ಲಿಯಾಗಿರುವುದರಿಂದ ಕರ್ನಾಟಕವು ಸಾಕಷ್ಟು ನೀರನ್ನು ಸಂಗ್ರಹಿಸಿಟ್ಟು ಕೊಳ್ಳಬಹುದು. ನೀರುಗೂಡಿನಲ್ಲಿರುವ ನೀರನ್ನು ಸೋಸುವ ಮೂಲಕ ಅಂತರ್ಜಲವನ್ನು ಸಂಗ್ರಹಿಸಿಟ್ಟು ಕೊಳ್ಳಬಹುದು. ಅದೇ ಪ್ರಕಾರ ಆ ವರ್ಷಗಳಲ್ಲಿ ತನ್ನ ಅಣೆಕಟ್ಟುಗಳಿಂದ ಹೊರಬಿಡಲಾಗುವ ಹೆಚ್ಚಿನ ಪ್ರವಾಹದ ನೀರಿನಲ್ಲಿ ಸ್ವಲ್ಪಭಾಗವನ್ನು ಉಪನಾಲೆಗಳಲ್ಲಿ ಹರಿಸಿ ಕಾವೇರಿ ಜಲಾನಯನ ಭೂಮಿಯಲ್ಲಿರುವ ಅಸಂಖ್ಯಾತ ಜಲಗೂಡುಗಳಲ್ಲೂ ನೀರನ್ನು ಮತ್ತೆ ಸಚೇತನಗೊಳಿಸಿಕೊಳ್ಳಬಹುದು. ಹೆಚ್ಚಿನ ನೀರನ್ನು ಅಂತರ್ಜಲದ ರೂಪದಲ್ಲಿ ಸಂಗ್ರಹಿಸಿಡುವುದರಿಂದ ಅದು ಆವಿಯಾಗಿ ನಷ್ಟವಾಗದೇ ಹಾಗೆಯೇ ಉಳಿದುಕೊಂಡಿರುತ್ತದೆ. ಇದರಿಂದ ಅಂತರ್ಜಲದ ಮಟ್ಟವು ನಿರ್ಮಲವಾಗಿರುವ ನೀರಿನಿಂದ ಹೆಚ್ಚುವುದಲ್ಲದೇ ಅದನ್ನು ಅನಾವೃಷ್ಟಿಯ ವರ್ಷಗಳಲ್ಲಿ ಬಳಸಿಕೊಳ್ಳಲು ಅನುಕೂಲವಾಗುತ್ತದೆ. ಎಲ್ಲ ನೀರಾವರಿ ಯೋಜನೆಗಳಲ್ಲಿ ನೀರಾವರಿಯನ್ನು ಬಳಸಿಕೊಂಡು ಬೆಳೆ ಬೆಳೆಯುವವರಿರುವ ನೀರು ಬಳಕೆದಾರರ ಸಂಘಗಳಿಗೆ ಸಂಗ್ರಹಗೊಂಡ ನೀರನ್ನು ಹಂಚುವ ಮೂಲಕ ಮತ್ತು ಗಾತ್ರಾನುಸಾರವಾಗಿ ನಿಯಂತ್ರಿಸುವ ಮೂಲಕ ದಕ್ಷತೆಯನ್ನು ಹೆಚ್ಚಿಸಿಕೊಳ್ಳಬಹುದು ಮತ್ತು ಮುಖ್ಯವಾಗಿ ಬೆಂಗಳೂರಿನಲ್ಲಿ ಕುಡಿಯುವ ನೀರು ಒದಗಿಸಲು ಮತ್ತು ಕೈಗಾರಿಕಾ ಉದ್ದೇಶಗಳಿಗೆ ನೀರನ್ನು ತಿರುಗಿಸಲು ಸಾಕಷ್ಟು ನೀರನ್ನು ಉಳಿಸಿಕೊಳ್ಳಬಹುದು. ನೀರಾವರಿ ಕ್ಷೇತ್ರದಲ್ಲಿ ಜಮೀನಿನ ಗಾತ್ರಾನುಸಾರ ಶುಲ್ಕವನ್ನು ನಿಗದಿಪಡಿಸಿದರೆ ರೈತರು ಶುಲ್ಕವನ್ನು ಕಡಿಮೆಮಾಡಿಕೊಳ್ಳಲು ಮತ್ತು ನೀರನ್ನು ಉಳಿಸಲು ವಿಸ್ತೃತವಾಗಿ ಹನಿ ನೀರಾವರಿ ಮತ್ತು ತುಂತುರು ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವರು.

೫.೦

೫.೧ ಪರಿಣತಿಯನ್ನು ಪಡೆಯದಿರುವ ಸಾರ್ವಜನಿಕರ ನಡುವೆ ಅವರೆಲ್ಲರೂ ಒಟ್ಟುಗೂಡಿ ಕೆಲಸ ಮಾಡುವಂತೆ ಮತ್ತು ಯಾವುದೇ ಘರ್ಷಣೆಗಳಿಗೆ ಎಡೆಗೊಡದಂತೆ ಲಭ್ಯವಿರುವ ನೀರನ್ನು ಹಂಚಿಕೊಳ್ಳುವಲ್ಲಿ ನೆರೆಯ ರಾಜ್ಯಗಳ ಜತೆಯಲ್ಲಿ ಸಹರಿಸುವಂತೆ ಹಾಗೂ ನೆರೆಯ ರಾಜ್ಯಗಳ ಜತೆಗೂಡಿ ಕೆಲಸಮಾಡುವಂತೆ ಪ್ರಚಾರ ಮಾಡಲು ಕಾವೇರಿ ನ್ಯಾಯಮಂಡಳಿಯ ತೀರ್ಪನ್ನು ಉದ್ವೇಗವಿಲ್ಲದೇ ಅರ್ಥಮಾಡಿಕೊಳ್ಳುವುದು ಮತ್ತು ವಿವೇಚನೆಯಿಂದ ಅರಿತುಕೊಳ್ಳುವುದು ಅವಶ್ಯಕವಾಗಿದೆ. ನೀರು ಎನ್ನುವುದು ಪ್ರಕೃತಿಯ ಕೊಡುಗೆಯಾಗಿದೆ ಮತ್ತು ಅದು ಜಾತಿ, ಮತ ಮತ್ತು ರಾಜಕೀಯ ಭೇದಗಳನ್ನು ಪರಿಗಣಿಸದೇ ಎಲ್ಲರಿಗೂ ಸೇರಿದ್ದಾಗಿದೆ. ಅದು ಎಲ್ಲರಿಗೂ ಸೇರಿದ್ದಲ್ಲ ಇಲ್ಲವೇ ಯಾವನೇ ಒಬ್ಬ ವ್ಯಕ್ತಿಗೆ ಕೂಡಾ ಸೇರಿದ್ದಲ್ಲ. ಕೇವಲ ಘೋಷಣೆ ಕೂಗುವ ಪ್ರತಿಯಾಗಿ ಎಲ್ಲರ ಕಲ್ಯಾಣಕ್ಕೆ ನೀರಿನ ಬಗ್ಗೆ ವಿವೇಚನೆಯನ್ನು ಮತ್ತು ಶಿಕ್ಷಣವನ್ನು ಪ್ರಚಾರ ಮಾಡುವುದು ಅವಶ್ಯಕವಾಗಿದೆ. ರಾಜಕಾರಣಿಗಳು ಮತ್ತು ಸರ್ಕಾರಗಳು ಈ ದಿಕ್ಕಿನಲ್ಲಿ ನೇತೃತ್ವವಹಿಸಿಕೊಳ್ಳಬೇಕು. ಭಾಷೆ, ರಾಜಕೀಯ ಭಿನ್ನಾಭಿಪ್ರಾಯಗಳು, ಜಾತಿಯ ಕಟ್ಟುಗಳು ಮೊದಲಾದ ತಡೆಗಳನ್ನು ದಾಟಿ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಮಹಾತ್ಮಾ ಗಾಂಧೀಜಿಯವರಿಂದ ರಾಷ್ಟ್ರೀಯ ಶಕ್ತಿಯೊಂದು ರೂಪುಗೊಂಡಿತ್ತು. ಅಂತಹ ರಾಷ್ಟ್ರೀಯ ಶಕ್ತಿಯೊಂದು ಈಗ ಮತ್ತೆ ಜೀವಪಡೆಯಬೇಕು. ಎಲ್ಲರಿಗೂ ಪ್ರಯೋಜನ ದೊರೆಯುವ ರೀತಿಯಲ್ಲಿ ಮತ್ತು ಕಾನೂನು ಸಮ್ಮತ ಹಕ್ಕು ಸಿಗುವ ರೀತಿಯಲ್ಲಿ ಸ್ಥಳೀಯವಾಗಿ ವರ್ತಿಸುತ್ತ ಜಾಗತಿಕವಾಗಿ ಚಿಂತಿಸಬೇಕು. ಗಾಳಿ, ನೀರು ಮತ್ತು ಬೆಳಕಿಗೆ ರಾಜಕೀಯ ಎಲ್ಲೆಗಳಿಲ್ಲ. ಆದರೆ ವಾಸ್ತವ ನೆಲೆಯಲ್ಲಿ ಕಾನೂನು ಸಮ್ಮತವಾಗಿ ಪರಿಗಣಿಸಿ ಸಮೃದ್ಧಿಯನ್ನು ಮತ್ತು ಕೊರತೆಯನ್ನು ಹಂಚಿಕೊಳ್ಳುವ ಅವಶ್ಯಕತೆಯಿದೆ.

ಇಂಗ್ಲಿಷ್‌ನಿಂದ ಅನುವಾದ : ಜಿ.ಎಂ. ಕೃಷ್ಣಮೂರ್ತಿ

ಬಳಗ...

ವೈ.ಎಸ್.ವಿ. ದತ್ತ	ಶಾಸಕರು, ಕರ್ನಾಟಕ ವಿಧಾನ ಪರಿಷತ್ತು, ಬೆಂಗಳೂರು
ಜೆ.ಟಿ. ವೀರಪ್ಪ	ಪ್ರಾಧ್ಯಾಪಕರು, ಪಿ.ಇ.ಎಸ್. ವಿಜ್ಞಾನ ಕಾಲೇಜು, ಮಂಡ್ಯ ೫೭೧ ೪೦೧
ಎಂ. ಲಿಂಗಯ್ಯ	ಹಿರಿಯ ಅಡ್ವೊಕೇಟ್, ಅಶೋಕನಗರ, IIನೇ ಹಂತ, ೩ನೇ ಅಡ್ಡರಸ್ತೆ, ಮಹಿಳಾ ಸಮಾಜದ ಎದುರಿಗೆ, ಮಂಡ್ಯ ೫೭೧ ೪೦೧
ಶೇಷನಾರಾಯಣ	ಹಿರಿಯ ಬರಹಗಾರರು, ಸದಸ್ಯರು, ಕರ್ನಾಟಕ ಅನುವಾದ ಅಕಾಡೆಮಿ, ಬೆಂಗಳೂರು
ಶ್ರೀಕಂಠಯ್ಯ	ಧಾರ್ಮಿಕ ನಾಯಕರು, C/o ರಾ.ನಂ. ಚಂದ್ರಶೇಖರ, ೧, ಶ್ರೀನಿಲಯ, ಮಾರಮ್ಮ ದೇವಸ್ಥಾನದ ರಸ್ತೆ, ಕತ್ರಿಗುಪ್ಪೆ, ಬನಶಂಕರಿ ೩ನೇ ಹಂತ, ಬೆಂಗಳೂರು ೫೬೦ ೦೮೫
ಗಿರೀಶ ಕಾರ್ನಾಡ	ಹಿರಿಯ ಕಲಾವಿದರು, ೬೯೭, ೧೫ನೇ ಅಡ್ಡರಸ್ತೆ, ಜೆ.ಪಿ.ನಗರ, ೨ನೇ ಹಂತ, ಬೆಂಗಳೂರು ೫೬೦ ೦೭೮
ಸಾತವಲ್ಲಿ ಜಾಗೃತಿಪ್ರಿಯ	ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಆಫೀಸರ್, C/o 'ಪ್ರಜಾಸಾಹಿತ್ಯ' ಮಾಸಪತ್ರಿಕೆ
ದೊಡ್ಡಪ್ಪಯ್ಯ ಗಂಗಪ್ಪ	ತಮಿಳುನಾಡಿನ ನಿವೃತ್ತ ಜಿಲ್ಲಾಧಿಕಾರಿಗಳು, ೪೬೯, ಹೆಚ್.ಐ.ಜಿ. ೪ನೇ ಮುಖ್ಯರಸ್ತೆ, ಆರ್.ಎಂ.ವಿ. ೨ನೇ ಹಂತ ಬಡಾವಣೆ, ಬೆಂಗಳೂರು ೫೬೦ ೦೯೪
ಆರ್. ಹೃಷಿಕೇಶ್	ನಿವೃತ್ತ ಮುಖ್ಯ ಇಂಜಿನಿಯರ್ ಅಂತರರಾಜ್ಯ ಜಲ ಇಲಾಖೆ ೧೧೪, ಅಮೂಲ್ಯ, ೧೨ನೇ 'ಎ' ಮುಖ್ಯರಸ್ತೆ, ಬಿ.ಟಿ.ಎಂ. ೧ನೇ ಹಂತ, ಬೆಂಗಳೂರು
ಬಿ.ಎಸ್. ಭವಾನಿಶಂಕರ್	ನಿವೃತ್ತ ಮುಖ್ಯ ಇಂಜಿನಿಯರ್, ಜಿ.ಓ.ಐ. ಮತ್ತು ಜಿ.ಓ.ಎಂ.ಓ. ಮಂಜೂಷ, ೭೭, ೭ನೇ ಮುಖ್ಯರಸ್ತೆ, ೪ನೇ ಅಡ್ಡರಸ್ತೆ, ಕೆ.ಎಸ್.ಆರ್.ಟಿ.ಸಿ. ಲೇಔಟ್, ೨ನೇ ಫೇಸ್, ಜೆ.ಪಿ. ನಗರ, ಬೆಂಗಳೂರು ೫೬೦ ೦೭೮
ಜೆ.ಎಂ. ಕೃಷ್ಣಮೂರ್ತಿ	ವಿಜ್ಞಾನಲೇಖಕರು, ಅಂಕಣಕಾರರು ೨೫, ಶ್ರೀವರಸಿದ್ಧಿ ವಿನಾಯಕ ದೇವಸ್ಥಾನದ ರಸ್ತೆ, ಹನುಮಗಿರಿ, ಚಿಕ್ಕಕಲ್ಲಸಂದ್ರ, ಬೆಂಗಳೂರು ೫೬೦ ೦೬೧



ಯಕ್ಷದೇಗುಲ

ಕೆ. ಮೋಹನ್, 143/73, 6ನೇ ಅಡ್ಡರಸ್ತೆ
ತ್ಯಾಗರಾಜ ನಗರ, ಬೆಂಗಳೂರು 560 028
✆ : 080–26769925, 26767912 / 9448510606

ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ, ಗ್ರಾಮೀಣ ಪ್ರದರ್ಶನ ಹಾಗೂ ದೃಶ್ಯ ಜಾನಪದ ಕಲೆಗಳ ಸೊಗಡು ಕಡಿಮೆಯಾದರೂ ತನ್ನ ಆಧುನಿಕತೆ ಮತ್ತು ನಾಗರೀಕತೆ ಮಧ್ಯೆ ಅಗತ್ಯವಿರುವುದು ತನ್ನ ಸಂಸ್ಕೃತಿ, ಪರಂಪರೆಯ ಬೆಳವಣಿಗೆ. ಈ ನಿಟ್ಟಿನಲ್ಲಿ, ಇಪ್ಪತ್ತೆರಡು ವರ್ಷಗಳ ಹಿಂದೆ, ಉತ್ಸಾಹಿ ಯುವಕರ ಗುಂಪೊಂದು "ಯಕ್ಷದೇಗುಲ"ವನ್ನು ಪ್ರಾರಂಭಿಸಿದರು. ಈಗ ಈ ತಂಡ ಬೆಂಗಳೂರಿನಲ್ಲಷ್ಟೇ ಅಲ್ಲ, ಕರ್ನಾಟಕ ಹಾಗೂ ಭಾರತದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಯಕ್ಷಗಾನವನ್ನು ಆಯೋಜಿಸುತ್ತಿದೆ. ಮಿಗಿಲಾಗಿ, ಇಂಗ್ಲೆಂಡ್ ಹಾಗೂ ಅಮೇರಿಕದಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿಯೂ 'ಯಕ್ಷದೇಗುಲ' ಭಾಗವಹಿಸಿತ್ತು.

ಕರ್ನಾಟಕದ ಜಾನಪದ ಕಲೆಯಾದ ಯಕ್ಷಗಾನವನ್ನು ಜನಪ್ರಿಯಗೊಳಿಸುವಲ್ಲಿ "ಯಕ್ಷದೇಗುಲ"ದ್ದು ದೊಡ್ಡ ಪಾತ್ರ. ಹೀಗಾಗಿ "ಯಕ್ಷದೇಗುಲ"ದ ಮುಖ್ಯ ಸಾಧನೆಗಳು:

- ತನ್ನದೇ ಆದ ವಸ್ತ್ರ, ವಾದ್ಯ, ಬೆಳಕು, ಶ್ರವ್ಯ ಉಪಕರಣಗಳು ಹೊಂದಿದೆ.
- ಉತ್ತಮ ತರಬೇತಿ ಪಡೆದ ಕಲಾವಿದರು, ಪ್ರಸಾಧನ ಕಲಾವಿದರು, ಹಿನ್ನೆಲೆಗಾಯಕರಿದ್ದಾರೆ.
- ಸಮರ್ಪಕವಾಗಿ ನಿರ್ದೇಶಿಸಿದ ಚಿಕ್ಕ ನಾಟಕಗಳನ್ನು ಆಧುನಿಕ ಹಾಗೂ ವಿದೇಶಿ ನೋಡುಗರಿಗಾಗಿ, ಸಂಪ್ರದಾಯಸ್ಥ ಹಾದಿಯನ್ನು ಬಿಡದೆ ರೂಪಿಸಲಾಗಿದೆ.
- ಉತ್ಸಾಹಿ ಯುವ ಕಲಾವಿದರಿಗೆ ಯಕ್ಷಗಾನದ ಎಲ್ಲ ಪ್ರಕಾರಗಳಲ್ಲಿ ತರಬೇತಿ.
- ಯುವ ಕಲಾವಿದರ ಪ್ರೋತ್ಸಾಹಕ್ಕಾಗಿ ಫೆಲೋಷಿಪ್, ವಿದ್ಯಾರ್ಥಿ ವೇತನ, ಸ್ಟೈಫಂಡ್‌ಗಳು.
- ಶಾಲೆ, ತೆರೆದ ರಂಗಮಂದಿರ, ಜಾತ್ರೆ ಹಾಗೂ ಪ್ರದರ್ಶನಗಳಲ್ಲಿ ಯಕ್ಷಗಾನವನ್ನು ಜನಪ್ರಿಯಗೊಳಿಸಲು ಸಮಯೋಚಿತ ಕಾರ್ಯಕ್ರಮಗಳನ್ನು ನಡೆಸುವುದು.
- ಗ್ರಾಮೀಣ ಜನರಲ್ಲಿ: ಸಾಮಾಜಿಕ ವಿಷಯಗಳಾದ ಸಾಕ್ಷರತೆ, ವಯಸ್ಕರ ಶಿಕ್ಷಣ, ವರದಕ್ಷಿಣೆ, ಗ್ರಾಮೀಣಾಭಿವೃದ್ಧಿ, ಆರೋಗ್ಯ – ಇಂಥವುಗಳ ಬಗ್ಗೆ ಜಾಗೃತಿ ಮೂಡಿಸಲು ಯಕ್ಷಗಾನ ಪ್ರಸಂಗಗಳನ್ನು ಆಯೋಜಿಸಲಾಗುವುದು.
- ಯಕ್ಷಗಾನದ ವಿವಿಧ ವಿಷಯಗಳ ಬಗ್ಗೆ ಸಮ್ಮೇಳನ ಹಾಗೂ ಪ್ರಾತ್ಯಕ್ಷಿಕೆಯನ್ನು ಆಯೋಜಿಸಿ – ತಜ್ಞರೊಡನೆ ಭಾಗವಹಿಸುವ ಅವಕಾಶ ಉಂಟು.



ಬನ್ನಿ, ಕೂಡಿ, ಕರ್ನಾಟಕ ಯಕ್ಷಗಾನ ಕಲೆ ಉಳಿಸೋಣ